ಶ್ರೀ ಕೆ ಎಸ್ ಈಶ್ವರಪ್ಪ [ಜಲ ಸಂಪನ್ಮೂಲ ಸಚಿವರು]– ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ಪ್ರಸ್ತಾಪ ಮಾಡಿದಂತಹ ಕೊಯ್ನಾ ಮತ್ತು ಚಿತ್ರಾ, ಆ ಎರಡರ ಬಗ್ಗೆಯೂ ಮಾರ್ಚ್ 5ನೇ ತಾರೀಖು ಮಹಾರಾಷ್ಟ್ರ ಸರ್ಕಾರದ ಜೊತೆಗೆ ಮಾತುಕತೆ ನಡೆಸಿ, ಆ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಹಾಗೂ ಆ ಭಾಗಕ್ಕೆ ನೀರನ್ನು ಬಿಡಿಸಲಿಕ್ಕೆ ನಾವು ಏನೊಂದು ಪ್ರಯತ್ನವನ್ನು ನಡೆಸಬೇಕೋ ಅದನ್ನು ಮಾಡುತ್ತೇವೆ ಕೃಷ್ಣಾ ನ್ಯಾಯಾಧಿಕರಣದ ಬಗ್ಗೆ ಬಹಳ ವಿಶೇಷವಾದ ಆಸಕ್ತಿಯನ್ನು ಮಾನ್ಯ ಸದಸ್ಯರು ತೋರಿಸಿದ್ದಾರೆ ಸರ್ಕಾರ ಅವರ ಆಸಕ್ತಿಗೆ ತಕ್ಕ ರೀತಿಯಲ್ಲಿ ಸ್ಪಂದಿಸುತ್ತದೆಂದು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ

ಅಧ್ಯಕ್ಷರು ಈಗ ನಿಯಮ 69ರ ಮೇರೆಗೆ ಚರ್ಚೆ ಈಗ ಮಾನ್ಯ ರೆಡ್ಡಿಯವರು ಮಾತನಾಡಲಿ

[ಗೊಂದಲ]

ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ ದಯವಿಟ್ಟು ಕುಳಿತುಕೊಳ್ಳಿ

[ಗೊಂದಲ]

ನೋಟೀಸ್ ಕೊಡದೇ ಪ್ರಸ್ತಾಪ ಮಾಡುತ್ತಿದ್ದೀರಿ ಯಾರೋ ಪ್ರಸ್ತಾಪ ಮಾಡಿದ್ದರ ಜೊತೆಗೆ ನಮ್ಮದೂ ಇರಲಿ ಎಂಬ ಭಾವನೆಯಿಂದ ಮಾತನಾಡುತ್ತಿದ್ದೀರಿ ಇದು ಸರಿಯಲ್ಲ ಈ ಬಗ್ಗೆ ನಾನು ತಮಗೆ ಎಷ್ಟು ಬಾರಿ ಹೇಳಬೇಕು? ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ ಮಾನ್ಯ ರೆಡ್ಡಿಯವರು ಮಾತನಾಡಲಿ

6 ನಿಯಮ 69ರ ಮೇರೆಗೆ

ವಿಷಯ ಬೆಂಗಳೂರು ಹಾಗೂ ರಾಜ್ಯದ ಇತರೆ ಪ್ರದೇಶಗಳಲ್ಲಿ ಕೋಮು ಗಲಭೆಯಿಂದಾಗಿ ಉಂಟಾಗಿರುವ ತೊಂದರೆಗಳ ಬಗ್ಗೆ

ಶ್ರೀ ಜೆ ವಿ ಶೀರಾಮರೆಡ್ಡಿ [ಬಾಗೇಪಲ್ಲಿ].– ಮಾನ್ಯ ಅಧ್ಯಕ್ಷರೆ, ಈ ಕೋಮು ಗಲಭೆಗಳಿಗೆ ಸಂಬಂಧಪಟ್ಟಂತೆ ನಾನು, ಮಾನ್ಯ ಮಾಧುಸ್ವಾಮಿಯವರು, ಮಾನ್ಯ ರಾಜೇಂದ್ರನ್‌ರವರು, ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಮತ್ತು ಮಾನ್ಯ ವಾಟಾಳ್ ನಾಗರಾಜ್‌ರವರು ನಿಯಮ 69ರ ಮೇರೆಗೆ ಚರ್ಚಿಸಲು ನೋಟೀಸ್ ಅನ್ನು ಕೊಟ್ಟಿದ್ದೇವೆ ಇದು ಬಹಳ ಗಂಭೀರವಾದಂತಹ ಸಮಸ್ಯೆಯಾಗಿದೆ JD[S] and BJP ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದ 10–12 ತಿಂಗಳ ಅವಧಿಯಲ್ಲಿ ಎರಡು ಕಡೆ ಗಂಭೀರವಾಗಿ ಕೋಮು ಗಲಭೆಗಳಾಗಿ ಇಡೀ ರಾಜ್ಯದ ಜನತೆ ಆತಂಕದ ಸ್ಥಿತಿಗೆ ಒಳಪಟ್ಟಿತ್ತು ಒಂದು, ಮಂಗಳೂರಿನಲ್ಲಿ ಅಕ್ಟೋಬರ್ ತಿಂಗಳಿನಲ್ಲಿ ನಡೆದಂತಹ ಕೋಮು ಗಲಭೆ ಎರಡನೆಯದು, ಜನವರಿ ತಿಂಗಳ 19ರಿಂದ 21ರವರೆಗೂ

ಬೆಂಗಳೂರಿನಲ್ಲಿ ನಡೆದಂತಹ ಕೋಮು ಗಲಭೆ ಈ ಎರಡೂ ಕೋಮು ಗಲಭೆಗಳ ಜೊತೆಗೆ ದತ್ತಪೀಠದ ವಿಚಾರದಲ್ಲಿ ಈ ಸರ್ಕಾರ ತೆಗೆದುಕೊಂಡಂತಹ ಡೋಲಾಯಮಾನವಾದ ತೀರ್ಮಾನದಿಂದಾಗಿ, 1972ರ ಮುಂಚೆ ಇದ್ದಂತೆ ಯಥಾಸ್ಥಿತಿ ಕಾಪಾಡಬೇಕೆಂಬ ಹೈಕೋರ್ಟ್‌ನ ಆದೇಶವೇನಿತ್ತೋ, ಆ ಆದೇಶಕ್ಕೂ ಕೂಡ ಭಂಗ ಬಂದಿದೆ ಈ ಮೂರು ಕಾರಣಗಳಿಂದ ಇಡೀ ಕರ್ನಾಟಕ ರಾಜ್ಯದಲ್ಲಿ ಕಳೆದ 11 ತಿಂಗಳಿನಲ್ಲಿ ಗಂಭೀರವಾದಂತಹ ಕೋಮು ಗಲಭೆಗಳಾಗಿ, ಐದಾರು ಜನ ಪ್ರಾಣವನ್ನು ಕಳೆದುಕೊಂಡು, ನೂರಾರು ಕೋಟಿ ರೂಪಾಯಿಗಳ ಆಸ್ತಿಪಾಸ್ತಿ ನಷ್ಟವಾಗಿರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆ ಇದನ್ನು ಸಾರ್ವಜನಿಕರೆಲ್ಲರೂ ಕೂಡ ಗಮನಿಸಿದ್ದಾರೆ ಇದರಲ್ಲಿ ಬಹಳ ಗಂಭೀರವಾದಂತಹ ಪ್ರಶ್ನೆಗಳಿವೆ ನಾನು ಮೊದಲು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ನಡೆದಂತಹ ಕೋಮು ಗಲಭೆಗಳ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ಇಷ್ಟಪಡುತ್ತೇನೆ ಈ ಎರಡೂ ಕೋಮು ಗಲಭೆಗಳಿಗೆ ಬಹಳ ಪ್ರಮುಖವಾದಂತಹ ಕಾರಣಗಳಿದ್ದವು ಮೊದಲನೆಯದು, ಅಕ್ಟೋಬರ್ 1ನೇ ತಾರೀಖು ಶಾರದಾದೇವಿಯ ಮೆರವಣಿಗೆಯನ್ನು ತೆಗೆಯತಕ್ಕಂಥ ಸಂದರ್ಭದಲ್ಲಿ, ಆ ಮೆರವಣಿಗೆಯನ್ನು ಸಂಘಟಿಸಿದಂತಹ ಸಂಘಟಕರು ಮಾಡಿದಂತಹ ಸಮಾಜಕ್ಕೆ ಕೆಡಕು ಮಾಡತಕ್ಕಂಥ ಕೆಲಸದಿಂದ, ಅವರು ಮಾಡಿದಂತಹ ಪ್ರಚೋದನೆ ಮಾಡತಕ್ಕಂಥ ಪ್ರಯತ್ನದ ಕೆಲಸದಿಂದಾಗಿ ಈ ಕೋಮು ಗಲಭೆಯಾಯಿತು ಇನ್ನೊಂದು ಕಾರಣವೇನೆಂದರೆ, ಬಂಟ್ವಾಳದಲ್ಲಿ ಸುಳ್ಳು ಸುದ್ದಿಯನ್ನು ಹಬ್ಬಿಸಿ, ಇಡೀ ದಕ್ಷಿಣ ಕನ್ನಡ ಜಿಲ್ಲೆಯನ್ನು ಕೋಮು ಗಲಭೆಗಳಲ್ಲಿ ಮುಳುಗಿಸಿ, ನಾಲ್ಕು ಜನರ ಪ್ರಾಣ ಹಾನಿಯಾಗಿ, ನೂರಾರು ಕೋಟಿ ರೂಪಾಯಿಗಳ ಆಸ್ತಿ ನಷ್ಟವಾಗಿ, ನೂರಾರು ಮುಗ್ಧ ಜನರ ಮೇಲೆ ಕೇಸ್ ಹಾಕಿ, ಅಲ್ಪಸಂಖ್ಯಾತರ ಮನೆಗಳಿಗೆ ನುಗ್ಗಿ, ಪೋಲೀಸ್‌ನವರ ಎದುರಿಗೇ ನಡೆದಿರತಕ್ಕಂಥ ಅಮಾನುಷ ಘಟನೆ ಮಾನ್ಯ ಅಧ್ಯಕ್ಷರೆ, ಇಲ್ಲಿ ಮಾನ್ಯ ಸಚಿವರು ತಮ್ಮಲ್ಲೇ ಮಾತನಾಡಿಕೊಳ್ಳುತ್ತಿದ್ದಾರೆ ಇದನ್ನು ತಾವು ಏನಾದರೂ ಮಾಡಿ ತಹಬಂದಿಗೆ ತನ್ನಿ ಇದರಿಂದಾಗಿ ಇಲ್ಲಿ ನಾನೇನು ಮಾತನಾಡುತ್ತಿದ್ದೇನೆಂದು ಯಾರಿಗೂ ಅರ್ಥವಾಗುತ್ತಿಲ್ಲ ಯಾರೂ ಕೂಡ ಕೇಳಿಸಿಕೊಳ್ಳದೆ, ಇಲ್ಲೊಂದು ಸಭೆಯನ್ನೇ ನಡೆಸುತ್ತಿದ್ದಾರೆ ಬಹಳ ಗಂಭೀರವಾದಂತಹ ವಿಚಾರವನ್ನು ನಾನಿಲ್ಲಿ ಮಾತನಾಡುತ್ತಿದ್ದೇನೆ / ಈ ಎರಡೂ ಘಟನೆಗಳಿಗೆ ನೇರ ಹೊಣೆಗಾರರಿದ್ದಾರೆ ಆ ಶಾರದಾದೇವಿ ಪೂಜೆಯನ್ನು ಸಂಘಟಿಸಿದಂತಹ

ಸಂಘಟಕರಾದ ಸಂಘ ಪರಿವಾರದವರು ಮತ್ತು ಪೊಲೀಸ್‌ನವರು ಇದಕ್ಕೆ ಹೊಣೆಗಾರರು ಮಂಗಳೂರಿನಲ್ಲಿ ನಡೆದ ಘಟನೆಗೆ ಕೇವಲ ಪೊಲೀಸ್‌ನವರ ಬೇಜವ್ದಾರಿತನ ಮಾತ್ರ ಕಾರಣವಲ್ಲ ಪರೋಕ್ಷವಾಗಿ ಮತ್ತು ಕೆಲವು ಸಂದರ್ಭದಲ್ಲಿ ಪ್ರತ್ಯಕ್ಷವಾಗಿ ಪೊಲೀಸರು ಈ ಘಟನೆ ನಡೆಯಲು ತಮ್ಮ ಬೆಂಬಲವನ್ನು ಕೊಟ್ಟಿದ್ದಾರೆ ಅದಕ್ಕೆ ಒಂದು ಉದಾಹರಣೆಯನ್ನು ನಾನು ಕೊಡಬಯಸುತ್ತೇನೆ 1ನೇ ತಾರೀಖು ಬಜ್ಪೆ ಪ್ರದೇಶದಲ್ಲಿ ಶಾರದಾದೇವಿ ಮೆರವಣಿಗೆಯನ್ನು ತೆಗೆಯತಕ್ಕಂಥ ಸಂದರ್ಭದಲ್ಲಿ, ಆ ಮೆರವಣಿಗೆಯ ಉದ್ದಕ್ಕೂ ಟ್ಯಾಬ್ಲೋಸ್ ತೆಗೆದುಕೊಂಡು ಹೋಗುವಂತಹ ಸಂದರ್ಭದಲ್ಲಿ, ಬಪ್ಪಾಬ್ಯಾರಿ ಎನ್ನುವಂತಹ ಒಬ್ಬ ಮುಸ್ಲಿಮರ ಟ್ಯಾಬ್ಲೋವನ್ನು ಇಟ್ಟು, ಅವರನ್ನು ಅಪರಾಧಿ ಸ್ಥಾನದಲ್ಲಿ ಶಾರದಾದೇವಿ ಮುಂದೆ ತಲೆ ತಗ್ಗಿಸಿಕೊಂಡು ನಿಂತಿರತಕ್ಕಂಥ ರೀತಿಯಲ್ಲಿ ಟ್ಯಾಬ್ಲೋವನ್ನು ಇಟ್ಟಿದ್ದರು ಅದನ್ನು ಇಟ್ಟು ಸದರಿ ಮೆರವಣಿಗೆಯನ್ನು ತೆಗೆಯಬಾರದು ಎಂದು ಅಲ್ಲಿನ ಮುಸ್ಲಿಮರು ಒಂದು ದಿವಸ ಮೊದಲೇ ಪೊಲೀಸ್‌ರಿಗೆ ಮನವಿ ಮಾಡಿದ್ದಾರೆ ಅದರ ಜೊತೆಗೆ ಅಲ್ಲಿನ ಶಾಸಕರಾದ ಕೃಷ್ಣ ಪಾಲೇಮಾರ್‌ರವರೂ ಕೂಡ ಮಧ್ಯಸ್ಥಿಕೆ ವಹಿಸಿ, ಅದನ್ನು ತೆಗೆಯಿರಿ ಎಂದು ಹೇಳಿದ್ದಾರೆ ಆದರೆ ಅದಕ್ಕೆ ಅವರು

ಶ್ರೀ ಎಸ್ ರಾಜೇಂದ್ರನ್ – ಮಾನ್ಯ ಅಧ್ಯಕ್ಷರೆ, ಒಬ್ಬ ಪೊಲೀಸ್ ಅಧಿಕಾರಿಯೂ ಕೂಡ ಅಧಿಕಾರಿಗಳ ಗ್ಯಾಲರಿಯಲ್ಲಿಲ್ಲ Home Secretary ಇಲ್ಲ, ಯಾರೂ ಕೂಡ ಇಲ್ಲ

ಶ್ರೀ ಜಿ ವಿ ಶೀರಾಮರೆಡ್ಡಿ.– ಮಾನ್ಯ ಮಹಾದೇವಪ್ರಸಾದ್‌ರವರೆ, ಹೋಂ ಮಿನಿಷ್ಟ್ರಿಗೆ ಸಂಬಂಧಪಟ್ಟ ವಿಷಯವನ್ನು ನಾನು ಮಾತನಾಡುತ್ತಿದ್ದೇನೆ, ಆದರೆ ತಾವು ಅವರ ಜೊತೆಗೆ ಮಾತನಾಡುತ್ತಿದ್ದೀರಿ ದಯವಿಟ್ಟು ಹೋಂ ಮಿನಿಸ್ಟ್ರು ಅದರ ಬಗ್ಗೆ ಗಮನ ಹರಿಸಲಿಕ್ಕೆ ಅವಕಾಶ ಮಾಡಿಕೊಡಿ

ಶ್ರೀ ಸಿದ್ದರಾಮಯ್ಯ – ಹೋಂ ನವರು ಹೋಂ ನಲ್ಲೇ ಇರುತ್ತಾರೆ ಅವರು ಇಲ್ಲಿಗೆ ಬರುವುದಿಲ್ಲ

ಶ್ರೀ ಎಸ್ ರಾಜೇಂದ್ರನ್ – ಹೋಂ ಡಿಪಾರ್ಟ್‌ಮೆಂಟ್‌ನವರು ಹೋಂನಲ್ಲೇ ಇರಬೇಕೆಂದರೆ, ಅವರು ಅಲ್ಲೇ ಇರಲಿ ಬಿಡಿ ಸ್ವಾಮಿ ಅದಕ್ಕೆ ನಮಗೇನೂ ಅಭ್ಯಂತರವಿಲ್ಲ

ಶ್ರೀ ಜಿ ವಿ ಶೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ಆ ಟ್ಯಾಬ್ಲೋವನ್ನು ಮೆರವಣಿಗೆಯಲ್ಲಿ ತರಬೇಡಿ ಎಂದು ಪೊಲೀಸರ ಗಮನಕ್ಕೆ ತಂದಿದ್ದಾರೆ ಪೊಲೀಸ್‌ನವರು ಅದಕ್ಕೆ ಒಪ್ಪಿಲ್ಲ ಕಡೆಗೆ ಅಲ್ಲಿರತಕ್ಕಂಥ ಅಲ್ಪಸಂಖ್ಯಾತ ಮುಸ್ಲಿಂ

ಬಾಂಧವರು, 'ಹೋಗಲಿ, ನಮ್ಮ ಮಸೀದಿ ಮುಂದೆಯಾದರೂ ಅದನ್ನು ತೆಗೆದುಕೊಂಡು ಬರಬೇಡಿ, ಬೇರೆ ಕಡೆಗೆ ತೆಗೆದುಕೊಂಡು ಹೋಗಿ' ಎಂದು request ಮಾಡಿದ್ದಾರೆ ಆ request ಅನ್ನೂ ಕೂಡ ಪೊಲೀಸ್‌ನವರು ತಳ್ಳಿ ಹಾಕಿದ್ದಾರೆ ಅಂದರೆ ಇದಕ್ಕೆ ಯಾರು ನೇರವಾಗಿ ಹೊಣೆಗಾರರು ಎಂದು ತಾವೇ ಹೇಳಿ? ಆ ಟ್ಯಾಬ್ಲೋ ತಂದಿದ್ದಂತಹ ಪರಿಣಾಮ ಇಡೀ ಆ ಪ್ರದೇಶದಲ್ಲಿ ಕೋಮು ಗಲಭೆ ಆಗಲಿಕ್ಕೆ ಕಾರಣವಾಗಿದೆ ಪೊಲೀಸ್‌ನವರ ಮುಂದೆಯೇ ಅಂಗಡಿಗಳಿಗೆ ನುಗ್ಗಿ, ಲೂಟಿ ಮಾಡಿ, ದಾಂಧಲೆ ಎಬ್ಬಿಸುತ್ತಿದ್ದರೆ ಪೊಲೀಸ್‌ನವರು ಮೂಕ ಪ್ರೇಕ್ಷಕರಾಗಿ ಅಲ್ಲೇ ಕುಳಿತಿದ್ದರು ಆ ಕಿಚ್ಚು ಇಡೀ ಮಂಗಳೂರಿನಲ್ಲಿ ಹಬ್ಬಿತು 4ನೇ ತಾರೀಖು ಕನ್ನಡ ಪರ ಸಂಘಟನೆಗಳು ಬಂದ್‌ಗೆ ಕರೆ ಕೊಟ್ಟಿದ್ದರು ಅದೇ ಸಂದರ್ಭದಲ್ಲಿ ಬಂಟ್ವಾಳದಲ್ಲೊಂದು ಘಟನೆ ನಡೆಯಿತು ಆ ಘಟನೆ ಇವರ ಸೃಷ್ಟಿಯಷ್ಟೆ 'ಮುಸ್ಲಿಮರು ದನ-ಕರುಗಳನ್ನು ಲಾರಿಗಳಲ್ಲಿ ಕಸಾಯಿಖಾನೆಗೆ ತೆಗೆದುಕೊಂಡು ಹೋಗುತ್ತಿದ್ದಾರೆ, ಆ ರೀತಿ ಎತ್ತಿಕೊಂಡು ಹೋಗುತ್ತಿದ್ದಂತಹ ಲಾರಿ ಯಾರೋ ಒಬ್ಬ ಮಹಿಳೆಗೆ ಡಿಕ್ಕಿ ಹೊಡೆದು ಪರಾರಿಯಾಗಿದೆ, ಆ ಮಹಿಳೆ ಸತ್ತು ಹೋಗಿದ್ದಾಳೆ' ಎನ್ನುವಂತಹ ಸುಳ್ಳು ಸುದ್ದಿಯನ್ನು ಹಬ್ಬಿಸಲಾಯಿತು ಆದರೆ ಇವತ್ತಿಗೂ ಕೂಡ ಆ ಲಾರಿ ಡಿಕ್ಕಿ ಹೊಡೆದಂತಹ ಮಹಿಳೆ ಯಾವ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ, ಯಾವ ಪೊಲೀಸ್ ಸ್ಟೇಷನ್‌ನಲ್ಲಿ ಆ ಬಗ್ಗೆ ಕಂಪ್ಲೇಟ್ ಆಗಿದೆ, ಏನೂ ಮಾಹಿತಿಯಿಲ್ಲ ಅದೊಂದು ಪ್ರಚೋದನೆಯನ್ನು ಹಬ್ಬಿಸಿ, 6ನೇ ತಾರೀಖು ಮತ್ತೆ ಮಂಗಳೂರು ಬಂದ್‌ಗೆ ಕರೆ ಕೊಡಲಾಯಿತು 4ನೇ ತಾರೀಖು ಒಂದು ಬಂದ್ ಆಯಿತು, 6ನೇ ತಾರೀಖು ಮತ್ತೊಂದು ಬಂದ್ ಆಯಿತು ಈ ಎರಡೂ ಬಂದ್‌ಗಳು ನಡೆದಂತಹ ಸಂದರ್ಭದಲ್ಲಿ ಇಡೀ ಮಂಗಳೂರು ಮತ್ತು ಸುತ್ತಮುತ್ತಲು ಇರತಕ್ಕಂಥ ಎಲ್ಲಾ ಪ್ರದೇಶಗಳಲ್ಲಿ, ನೇರವಾಗಿ ಪೊಲೀಸ್‌ನವರ ಮುಂದೆಯೇ ಅಂಗಡಿಗಳಿಗೆ ನುಗ್ಗಿ ಲೂಟಿ ಮಾಡಿದ್ದಾರೆ, ಕೊಲೆಗಳಾಗಿದೆ, ಸಾವು ನೋವುಗಳಾಗಿದೆ ಆದರೆ ಪೊಲೀಸ್‌ನವರು ಏನೂ ಕ್ರಮ ತೆಗೆದುಕೊಳ್ಳಲಿಲ್ಲ ಅದರ ಜೊತೆಗೆ ಸನ್ಮಾನ್ಯ ಅಧ್ಯಕ್ಷರೆ, ಅಲ್ಲಿ 35 ವರ್ಷದ ಗಫೂರ್ ಎನ್ನತಕ್ಕಂಥ ಒಬ್ಬ ಧರ್ಮಗುರುವಿನ ಕೊಲೆಯಾಗಿದೆ ಅವರು ತಮ್ಮ ಸ್ನೇಹಿತರ ಜೊತೆಯಲ್ಲಿ ಮಂಗಳೂರು ಕೆ ಎಸ್ ಆರ್ ಟಿ ಸಿ ಬಸ್ ಸ್ಟ್ಯಾಂಡ್‌ನಲ್ಲಿ ನಡೆದುಕೊಂಡು ಹೋಗುತ್ತಿದ್ದರು ಅವರನ್ನು ಇರಿದು ಕೊಲೆ ಮಾಡಿ ಪರಾರಿಯಾಗಿಬಿಟ್ಟರು ಆ ಬಗ್ಗೆ ಕೇಸ್ ಅನ್ನು ರಿಜಿಸ್ಟರ್ ಮಾಡಲಾಗಿದೆ ಆ ಮೊಕದ್ದಮೆ ಸಂಖ್ಯೆ 117/2006 ಆಗಿದೆ ಇದರಲ್ಲಿ ಯಾರೆಲ್ಲಾ ಅಪರಾಧಿಗಳು ಎಂಬ ಬಗೆಗಿನ Charge Sheet

ನನ್ನ ಹತ್ತಿರ ಇದೆ ತಮಗೆ ದಾಖಲೆಗಳನ್ನು ತೋರಿಸುತ್ತೇನೆ Charge Sheetನಲ್ಲಿ ಯಾರು ಅಪರಾಧಿಗಳು, ಎಂದು ಇದೆ 'ಅಪರಾಧಿಗಳು ಪದ್ಮರಾಜ್, ರವಿ, ಅಲ್ಲಪ್ಪ, ವಿಜಯ ಪ್ರಕಾಶ್, ಶಿವಪ್ರಸನ್ನ ಉಳಿದ ಆರು ಜನ ಪರಾರಿಯಾಗಿದ್ದಾರೆ' ಎಂದು ಅದರಲ್ಲಿ ಇದೆ ಇವತ್ತಿನವರೆಗೂ ಪರಾರಿ ಆಗಿರುವ ಆ ಆರು ಜನರನ್ನು ಬಂಧನ ಮಾಡಲಾಗಿಲ್ಲ Till this date, nobody is got arrested ಅಕ್ಟೋಬರ್ ತಿಂಗಳಿನಲ್ಲಿ ಈ ಘಟನೆ ನಡೆದಿತ್ತು ಅರೆಸ್ಟ್ ಆಗಿರತಕ್ಕವರನ್ನು ಬಿಟ್ಟು ಆರು ಜನ ಪರಾರಿಯಾಗಿದ್ದಾರೆ ಇವತ್ತಿಗೂ ಅವರನ್ನು ಬಂಧಿಸತಕ್ಕಂಥ ಕೆಲಸಕ್ಕೆ ಪೊಲೀಸ್‌ರು ಹೋಗಿಲ್ಲ ಅದೇ ರೀತಿಯಲ್ಲಿ ಬಂಟ್ವಾಳದಲ್ಲಿ ನಡೆದಂತಹ ಘಟನೆಗೆ ನೇರವಾಗಿ ಆ ಘಟನೆಯನ್ನು ಸೃಷ್ಟಿ ಮಾಡಿದಂತಹ ಜನರೇ ಹೊರಬೇಕಾಗಿದೆ ಅಲ್ಲಿ ಕೂಡ ಕೊಲೆ ನಡೆದಿದೆ ಅದರ Charge Sheet copy ಕೂಡ ನನ್ನ ಬಳಿ ಇದೆ ಆ Charge Sheet copy ಯಲ್ಲಿ ಯಾರು ಅಪರಾಧಿಗಳಿದ್ದಾರೆ, ಎಂದು ಇದೆ ಆ ಮೊಕದ್ದಮೆ ಸಂಖ್ಯೆ 132/2006 ಆಗಿದೆ 'ಅಪರಾಧಿಗಳು ವಿವೇಕ್ ನಿಲಾಯ್, ಪೂಜಾರಿ, ನವೀನ್ ಪೂಜಾರಿ, ಮಂಜುನಾಥ್, ಆನಂದ್ ಉಳಿದ 13 ಜನರು ಪರಾರಿಯಾಗಿದ್ದಾರೆ' ಎಂದು ಅದರಲ್ಲಿದೆ ಈ 13 ಜನರನ್ನು ಇವತ್ತಿನವರೆಗೂ ಮಂಗಳೂರಿನಲ್ಲಿ ಬಂಧಿಸಿಲ್ಲ ಮಾನ್ಯ ಪ್ರಕಾಶ್‌ರವರೂ ಕೂಡ ಮಂಗಳೂರಿಗೆ ಭೇಟಿ ಕೊಟ್ಟಿದ್ದರು ನಾನೂ ಕೂಡ ಅವತ್ತು ಅವರ ಜೊತೆಯಲ್ಲಿ ಮಂಗಳೂರಿಗೆ ಹೋಗಿದ್ದೆ ಮಂಗಳೂರಿನಲ್ಲಿ ಅವತ್ತು ಕರ್ಫ್ಯೂ ಹಾಕಿದ್ದರು ಕರ್ಫ್ಯೂ ಹಾಕಿದ್ದ ದಿವಸವೇ ನಾವೆಲ್ಲರೂ ಕೂಡ ಅಲ್ಲಿಗೆ ಹೋಗಿದ್ದೆವು Home Minister ಕೂಡ ಅಲ್ಲಿಗೆ ಬಂದಿದ್ದರು ನಾವು ಆ ಸಂದರ್ಭದಲ್ಲಿ ಕೆಲವು ಪ್ರದೇಶಗಳಿಗೆ ಭೇಟಿ ಕೊಟ್ಟೆವು ಭೇಟಿ ಕೊಟ್ಟಾಗ, ಗಲಭೆಗೀಡಾದ ಮನೆಗಳಲ್ಲಿ ನಾವು ವಿಚಾರ ಮಾಡಿದೆವು ಬೇರೆ ಯಾರೂ ಕೂಡ ಅವರ ಮನೆಗಳಿಗೆ ಹೋಗಿ ಹೊಡೆದಿಲ್ಲ ಪೊಲೀಸ್‌ನವರೇ ಹೋಗಿ ಹೊಡೆದಿದ್ದಾರೆ ಬೇರೆ ಜನ ಯಾರೂ ಕೂಡ ಅಲ್ಲಿಗೆ ಹೋಗಿ ಹೊಡೆದಿಲ್ಲ ಉದ್ದೇಶ ಪೂರ್ವಕವಾಗಿ ಪೊಲೀಸ್‌ನವರೇ ಮನೆಗಳಿಗೆ ನುಗ್ಗಿ ಹೊಡೆದಿದ್ದಾರೆ ಮಹಿಳೆಯರು, ಮುದುಕರು, ವಯಸ್ಸಾದವರು ಎಲ್ಲರನ್ನೂ ಹೊಡೆದಿದ್ದಾರೆ ಅದಕ್ಕೆ ಕಾರಣವೇನೂ ಇಲ್ಲ ನಿಮ್ಮ 'ಮನೆಯಲ್ಲಿ ಒಬ್ಬ ಹುಡುಗನಿದ್ದ ಎಲ್ಲಿ ಹೋದ ಎಂದು ಕೇಳುವುದು ಹೊಡೆಯುವುದು, ಎಲ್ಲಿದ್ದಾನೆ ತೋರಿಸು ಎನ್ನುವುದು ಹೊಡೆಯುವುದು, ನುಗ್ಗಿ ಹೊಡೆಯತಕ್ಕಂತಹದ್ದು ಮತ್ತೆ ಅವರ ಮನೆಗಳಲ್ಲಿ ಏನೇನು ಸಿಗುತ್ತದೆಯೊ ಅದನ್ನೆಲ್ಲಾ ಲೂಟಿ ಮಾಡಿಕೊಂಡು ಹೋಗುವುದು ಅವ್ಯಾಹತವಾಗಿ

ಮಂಗಳೂರಿನಲ್ಲಿ 5 ದಿವಸಗಳ ಕಾಲ ಈ ಕೆಲಸ ನಡೆದಿದೆ ಒಬ್ಬ ಹುಡುಗ ದುಬೈಗೆ ಹೋಗುವುದಕ್ಕೆ ಪಾಸ್ ಪೋರ್ಟ್ ಮಾಡಿಸಿಕೊಂಡಿದ್ದಾನೆ, ಅವತ್ತು ಅವನು ಏರ್ ಪೋರ್ಟ್‌ಗೆ ಹೋಗಬೇಕು ಅಂಬುಲೆನ್ಸ್ ನಲ್ಲಿ ಇರಿದು ಗಾಯವಾಗಿದ್ದಂತಹವರನ್ನು ಬ್ಯಾಂಡೇಜ್ ಹಾಕಿ ಅಂಬುಲೆನ್ಸ್‌ನಲ್ಲಿ ಕರೆದುಕ್ಕೊಂಡು ಹೋಗುತ್ತಿದ್ದಾರೆ, ಪೋಲಿಸ್ ವ್ಯಾನ್ 100 ಗಜ ದೂರದಲ್ಲಿದೆ, ಆ ಪೋಲಿಸ್ ವ್ಯಾನ್ ಹತ್ತಿರವೆ, ಅಂಬುಲೆನ್ಸ್‌ಗೆ ಅಡ್ಡ ಹಾಕಿ, ಅಂಬುಲೆನ್ಸ್‌ನಲ್ಲಿದ್ದಂತಹವರನ್ನು ಹೊರಗಡೆಗೆ ಎಳೆದು ಅಲ್ಲಿ ಒಬ್ಬರನ್ನು ಸಾಯಿಸಿ ಬಿಟ್ಟರು ದುಬೈಗೆ ಹೋಗಲು ಏರ್ ಪೋರ್ಟ್‌ಗೆ ಹೋಗುತ್ತಿದ್ದಂತಹವನ ಕೈಯನ್ನು ಮುರಿದುಬಿಟ್ಟರು ಗುಜರಾತ್‌ನಲ್ಲಿ ಇದೆ ನಡೆದದ್ದು, ಪೋಲಿಸ್‌ನವರ ಮುಂದೆಯೆ ಅಂಬುಲೆನ್ಸ್‌ಗೆ ಬೆಂಕಿ ಹಾಕಿದರು ಇಲ್ಲಿ ಅಂಬುಲೆನ್ಸ್‌ನಲ್ಲಿದ್ದವರನ್ನು ಹೊರಗಡೆಗೆ ಎಳೆದು ಕೊಲೆ ಮಾಡಿದರು ಇಂತಹ ಘಟನೆ ಪೋಲಿಸರ ಮುಂದೆ ನಡೆಯುತ್ತಿರತಕ್ಕಂತಹ ಸಂದರ್ಭದಲ್ಲಿ, ಪೋಲಿಸರು ಮೂಕ ಪ್ರೇಕ್ಷಕರಾಗಿರುತ್ತಾರೆ ಅಲ್ಲಿ ಪ್ರತ್ಯೇಕವಾಗಿ ಎಂ ಪಿ ಪ್ರಕಾಶ್‌ರವರು ಬಂದಂತಹ ಸಂದರ್ಭದಲ್ಲಿ ಸಾರ್ವಜನಿಕರೆಲ್ಲಾ ದೂರು ಹೇಳಿದರು ಅಲ್ಲಿಯ ಎಸ್ ಪಿ ಇದಕ್ಕೆ ನೇರ ಹೊಣೆ, ಮಂಗಳೂರಿನ ಗಲಭೆಗಳಿಗೆ ಕಾರಣವೆಂದು, ಅಲ್ಲಿ ಬೇರೆ ಎಲ್ಲಾ ಸಾರ್ವಜನಿಕರ ಜೊತೆಯಲ್ಲಿ ಚರ್ಚೆ ಮಾಡಿದಂತಹ ಸಂದರ್ಭದಲ್ಲಿ ಎಂ ಪಿ ಪ್ರಕಾಶ್ ಪಕ್ಷದ ಮುಖಂಡರೆ, ನೇರವಾಗಿ ಅವರಿಗೆ ಹೇಳಿದ್ದಾರೆ -

ಶ್ರೀ ಎ ಸುನಿಲ್ ಕುಮಾರ್ ಮಾನ್ಯ ಆಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರು ಸಾಕಷ್ಟು ಸಂಗತಿಗಳನ್ನು ಉಲ್ಲೇಖ ಮಾಡುತ್ತಿದ್ದಾರೆ, ಒಂದು ಸಂಗತಿಯನ್ನು ಅವರು ಮರೆತರೆಂದು ತಿಳಿದುಕೊಳ್ಳುತ್ತೇನೆ ನಾವು ಹೇಳುತ್ತಿರುವುದಲ್ಲ, ಎರಡು ಗುಂಪುಗಳು ಕಲ್ಲು ತೂರಾಟ ಮಾಡುತ್ತಿರಬೇಕಾದರೆ ಮಂಗಳೂರಿನ ಮೇಯರ್ ಅಶ್ರಫ್ ಅದರಲ್ಲಿ ಪಾಲ್ಗೊಂಡಿದ್ದರೆಂದು ಗಲಾಟೆಯಾದ ಮರುದಿನ ಅಲ್ಲಿಯ ಪತ್ರಿಕೆಗಳಲ್ಲಿ , ಆ ಟಿವಿಗಳಲ್ಲಿ ಬಂತು, ಉಲ್ಲಾಳದಲ್ಲಿ ಅವತ್ತಿನ ಶಾಸಕರ ಮಗ ಪಾಲ್ಗೊಂಡಿದ್ದರೆಂದು ಬಂತು, ಅದನ್ನು ಇಲ್ಲಿ ಉಲ್ಲೇಖ ಮಾಡಬೇಕು, ನಾನು ಹೇಳುತ್ತಿರುವುದಲ್ಲ, ಪತ್ರಿಕೆಗಳಲ್ಲಿ ಫೋಟೊ ಸಮೇತ ಬಂತು

[ಗೊಂದಲ]

ಶ್ರೀ ಕೆ ಅಭಯಚಂದ್ರ ಇಲ್ಲ, ಜಿಲ್ಲಾ ಉಸ್ತುವಾರಿ ಮಂತ್ರಿಗಳಿದ್ದರೆಂದು ಬಂದಿದೆ, ಅಲ್ಲಿ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಭಾಗವಹಿಸಿದ್ದಾರೆ, ಅದಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು ಹೊಣೆ, ಸಂಘಪರಿವಾರದವರು ಹೊಣೆ, ಶಾಸಕರ

ಮಗನ ಮೇಲೆ ಗೂಬೆ ಕೂರಿಸುತ್ತಿದ್ದಾರೆ ಇದು ಸರಿಯಲ್ಲ, ಬೇರೆಯವರ ಮೇಲೆ ಗೂಬೆ ಕೂರಿಸುವುದು ಸರಿಯಲ್ಲ

[ಗೊಂದಲ]

ಶ್ರೀ ವಿ ಸುನೀಲ್ ಕುಮಾರ್ ಶಾಸಕರ ಮಗ ವಾಲ್ಗೊಂಡಿದ್ದರೆಂದು ಪತ್ರಿಕೆಗಳಲ್ಲಿ ಫೋಟೊ ಸಮೇತ ಬಂತು, ನಾನು ಹೇಳುತ್ತಿರುವುದಲ್ಲ, ಅಗತ್ಯ ಕ್ರಮ ಕೈಗೊಳ್ಳಬೇಕೆಂದು ದೂರನ್ನು ಕೊಟ್ಟರು, ಇಲ್ಲಿವರೆಗೆ ದೂರು ದಾಖಲಾಗಲಿಲ್ಲ, ಅವರ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲ [ಗೊಂದಲ] ಯು ಟಿ ಫರೀದ್ ರವರ ಮಗ ಅದರಲ್ಲಿ ಭಾಗಿಯಾಗಿದ್ದರೆಂದು ಪತ್ರಿಕೆಗಳಲ್ಲಿ ಬಂದಿದೆ

[ಗೊಂದಲ]

ಅಧ್ಯಕ್ಷರು ಈಗ ಅವರು[ಶ್ರೀರಾಮರೆಡ್ಡಿ] ಮಾತನಾಡಲಿ, ಅವರು ಮಾತನಾಡಿದರೆ ಸರ್ಕಾರ ಉತ್ತರವನ್ನು ಕೊಡುತ್ತದೆ, ನೀವು ಬೇರೆ ವಿಷಯಗಳನ್ನು ಪ್ರಸ್ತಾಪ ಮಾಡುವುದಿದ್ದರೆ ಅವಕಾಶ ಕೊಡುತ್ತೇನೆ

[ಗೊಂದಲ]

ಶ್ರೀ ಕೆ ರಘುಪತಿ ಭಟ್ ಸದಾನಂದ ಶೆಟ್ಟಿ ಎಂಬುವರನ್ನು ಯಾರು ಕೊಲೆ ಮಾಡಿದರು, ಏನಾಯಿತು, ಅದರ ಬಗ್ಗೆ ಶ್ರೀರಾಮರೆಡ್ಡಿಯವರಿಗೆ ಗೊತ್ತೆ ಇಲ್ಲ, ಕೋಲಾರ ಜಿಲ್ಲೆಯಿಂದ ಬಂದು ನಮ್ಮ ಜಿಲ್ಲೆಯ ಬಗ್ಗೆ ಹೇಳುತ್ತಿದ್ದಾರೆ, ಯಾವುದೊ ಸಿನಿಮಾ ಕತೆ ಇದ್ದ ಹಾಗೆ ಇದೆ

[ಗೊಂದಲ]

ಅಧ್ಯಕ್ಷರು ಅವರ ಹತ್ತಿರವಿರುವ ಮಾಹಿತಿಯ ಪ್ರಕಾರ ಮಾತನಾಡುತ್ತಾರೆ ಕುಳಿತುಕೊಳ್ಳಿ, ಇದೇನು ಸದನವೊ ಏನಿದು? ಈಗ ವಿರೋಧಪಕ್ಷದ ನಾಯಕರು ಮಾತನಾಡುತ್ತಾರೆ ಕುಳಿತುಕೊಳ್ಳಿ

ಶ್ರೀ ಎನ್ ಧರ್ಮ್‌ಸಿಂಗ್ ಅಧ್ಯಕ್ಷರೆ, ರಾಜ್ಯದಲ್ಲಿ ನಡೆದಿರತಕ್ಕಂತಹ ಗಲಭೆಗಳ ಬಗ್ಗೆ, ಬಹಳ ಮಹತ್ವವಾದ ವಿಚಾರವನ್ನು ಇವತ್ತು ಅಡ್ಜರ್ನ್‌ಮೆಂಟ್ ಮೋಷನ್‌ನಲ್ಲಿ ಇವತ್ತು ಕೇಳಿದ್ದೇವೆ, ಅದಕ್ಕೆ ತಾವು ರೂಲ್ 69 ರಲ್ಲಿ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟಿದ್ದೀರಿ ಇವತ್ತು ಅವರು ಹಾಗೆ ಪ್ರಸ್ತಾಪ ಮಾಡುತ್ತಿದ್ದಾರೆ, ಪ್ರಸ್ತಾಪ ಮಾಡತಕ್ಕಂತಹ ಸಂದರ್ಭದಲ್ಲಿ ಅಲ್ಲಿ ಸಂಬಂಧಪಟ್ಟ ಜಿಲ್ಲೆಗಳ ಜನರು ಕೂಡ ಒಬ್ಬರ ಮೇಲೆ ಗೂಬೆ ಕೂರಿಸತಕ್ಕಂತಹ ಮಾತನ್ನು ಹೇಳುವುದಕ್ಕಾಗುವುದಿಲ್ಲ ಇದು ಅತಿ ಮುಖ್ಯವಾದ ವಿಚಾರ, ಇವತ್ತು ಗೃಹ ಸಚಿವರು ಇದ್ದಾರೆ ರಾಜ್ಯದಲ್ಲೆ ಇದೊಂದೆ ಘಟನೆಯಲ್ಲ ಬಹಳಷ್ಟು ಘಟನೆಗಳು

ನಡೆದಿದೆ, ಅವರಿಗೆ [ಗೃಹ ಮಂತ್ರಿ] ಎಲ್ಲಿಯವರೆಗೆ ಗಮನಕ್ಕೆ ಬಂದಿದೆಯೊ ನನಗೆ ಗೊತ್ತಿಲ್ಲ, ಇದು ಬಹಳ ಮಹತ್ವವಾದ ವಿಚಾರ ಅವರು ಪ್ರಸ್ತಾಪ ಮಾಡುವ ಸಮಯದಲ್ಲಿ ಎಲ್ಲಾ ಶಾಸಕರು ಎದ್ದು ನಿಂತು ಈ ರೀತಿಯ ಸವಾಲನ್ನು ಮಾಡಿದರೆ ಆಗುವುದಿಲ್ಲ ಅವರಿಗೆ ಮಾತನಾಡಲು ಅವಕಾಶ ಕೊಡಬೇಕು, ತದನಂತರ ನಾವು ಮಾನ್ಯ ಮಾಧುಸ್ವಾಮಿ ಹಾಗೂ ಬೇರೆ ಸದಸ್ಯರು ಮಾತನಾಡುವವರಿದ್ದೇವೆ ನಾವು ವಿರೋಧ ಪಕ್ಷದಲ್ಲಿದ್ದು ಆದಂತಹ ಘಟನೆಗಳ ಬಗ್ಗೆ ನಾವು ಹೇಳುತ್ತೇವೆ, ಅದನ್ನು ತಾವು ಕೇಳಬೇಕು, ಕೇಳಿದ ಮೇಲೆ [ಗೃಹಮಂತ್ರಿ] ಉತ್ತರವನ್ನು ಕೊಡುತ್ತಾರೆ ಮಾನ್ಯ ಅಭಯಚಂದ್ರರವರು ಕೂಡ ಅದೇ ಜಿಲ್ಲೆಗೆ ಸಂಬಂಧಪಟ್ಟವರು, ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಆಗಿದೆ ಎಂದು ನಾನು ಹೇಳುವವನಿದ್ದೇನೆ ಇವತ್ತು ಒಂದು ರಾಜ್ಯ ವಿರೋಧಪಕ್ಷದ ನಾಯಕನಾಗಿ ಮಂಗಳೂರಿನಲ್ಲಿರತಕ್ಕಂತಹ ಉಸ್ತುವಾರಿ ಸಚಿವರೆ ನಿಂತು ಕೋಮುಗಲಭೆ ಮಾಡತಕ್ಕಂತ ರೀತಿಯಲ್ಲಿ ಸಹಕರಿಸಿದ್ದಾರೆಂದು ಹೇಳುವವನಿದ್ದೇನೆ

[ಗೊಂದಲ]

ಶ್ರೀ ಆರಗ ಜ್ಞಾನೇಂದ್ರ ಸರ್, ಈ ಮಾತನ್ನು ವಾಪಸ್ ತೆಗೆದುಕೊಳ್ಳಬೇಕಾಗುತ್ತದೆ, ಇದಕ್ಕೆ ಏನು ಸಾಕ್ಷ್ಯಾಧಾರ ಕೊಡುತ್ತೀರಿ? ಈ ರೀತಿ ಮನ ಬಂದಂತೆ ಆರೋಪ ಮಾಡುವುದು ಸರಿ ಹೋಗುವುದಿಲ್ಲ, ಅನಾವಶ್ಯಕವಾಗಿ ಅವರು ಆರೋಪ ಮಾಡುತ್ತಿದ್ದಾರೆ, ಸಾಕ್ಷ್ಯಾಧಾರಗಳೇನಿವೆ ಹೇಳಿ?

[ಗೊಂದಲ]

ಶ್ರೀ ಎನ್ ಧರ್ಮ್‌ಸಿಂಗ್ ಅವರೆ ಮಾಡಿಸಿದ್ದಾರೆಂದು ಹೇಳಬೇಕಾಗುತ್ತದೆ

ಶ್ರೀ ವಿಶ್ವೇಶ್ವರ ಹಗಡೆ ಕಾಗೇರಿ ಜವಾಬ್ದಾರಿ ಸ್ಥಾನದಲ್ಲಿರುವವರು ಹೀಗೆ ಮಾತನಾಡಿದರೆ ಹೇಗೆ? ಇದು ಶೋಭೆ ತರುವ ಮಾತಾ?

[ಗೊಂದಲ]

ಶ್ರೀ ಕೆ ಅಭಯಚಂದ್ರ. ಸರ್, ಅಲ್ಲಿ ಮಾನ್ಯ ಯೋಗೀಶ್ ಭಟ್ ರವರು ಇದ್ದರು

[ಗೊಂದಲ]

ಶ್ರೀ ಆರಗ ಜ್ಞಾನೇಂದ್ರ ಇವರು ಓಟ್ ಬ್ಯಾಂಕ್ ನಿರ್ಮಾಣ ಮಾಡುವುದಕೋಸ್ಕರ ಅವರು ಈ ರೀತಿ ಮಾತನಾಡುತ್ತಿದ್ದಾರೆ, ಕೋಮು

ಗಲಭೆಗಳಿಗೆ ಇಂತಹ ಪ್ರಚೋದನೆಗಳೆ ಕಾರಣವಾಗುತ್ತವೆ, ವಾಸ್ತವಿಕ ದೃಷ್ಟಿಯಲ್ಲಿ ಇದು ಚರ್ಚೆಯಾಗಲಿ, ನಿಯಮ 69ಕ್ಕೆ ಕನ್ವರ್ಟ್ ಮಾಡಿದ್ದಾರೆ, ನಾವು ಕೂಡ ತಯಾರಾಗಿದ್ದೇವೆ, ಅವರು ಮಾತನಾಡಲಿ, ನಾವು ಮಾತನಾಡುತ್ತೇವೆ ಆದರೆ ಈ ರೀತಿಯಾಗಿ ಯಾರ್ಯಾರೊ ಮೇಲೆ ವಿನಾಕಾರಣ ಆರೋಪ ಮಾಡುವುದು ಸರಿಹೋಗುವುದಿಲ್ಲ

[ಗೊಂದಲ]

ಶ್ರೀ ವಿ ಸುನೀಲ್ ಕುಮಾರ್ ಕಾಂಗ್ರೆಸ್ ಶಾಸಕರ ಮಗನ ಕೈವಾಡವಿದೆ ಎಂದು ಪತ್ರಿಕೆಗಳಲ್ಲಿ ಬಂದಿದೆ

[ಗೊಂದಲ]

ಶ್ರೀ ಆರಗ ಜ್ಞಾನೇಂದ್ರ ಯಾರು ಬೇಕಾದರು ಹೇಳಲಿ ಸರ್, ನಿಮ್ಮಂತಹ ಹಿರಿಯರು ಇದನ್ನು ಹೇಳಬಾರದು, ಅನಾವಶ್ಯಕವಾಗಿ ಆರೋಪ ಮಾಡಬಾರದು, ಸಾಕ್ಷ್ಯಾಧಾರಗಳಿದ್ದರೆ ಹೇಳಿ, ನೀವು ವಿರೋಧ ಪಕ್ಷದ ನಾಯಕರಾಗಿದ್ದೀರಿ ಈ ರಾಜ್ಯದ ಜನ ಕೇಳುತ್ತಾರೆ, ಬೇಕಾದರೆ ಹೇಳಿ, ಏತಕ್ಕೆ ಹೀಗೆ ಮಾತನಾಡುತ್ತಿದ್ದೀರಿ [ಗೊಂದಲ] ನಿಮ್ಮಂತಹವರ ಪ್ರಚೋದನೆ ಮಾತುಗಳಿಂದ ಹತ್ತಿ ಉರಿಯುತ್ತಿದೆ ವಾಸ್ತವಿಕ ದೃಷ್ಟಿಯಲ್ಲಿ ಪೋಲಿಸ್‌ನವರು ಕಂಟ್ರೋಲ್ ಮಾಡಿದ್ದಾರೆ, ನಿಮ್ಮ ಸರ್ಕಾರಕ್ಕಿಂತ ಈ ಪ್ರಕರಣ ಬಹಳ ಕಡಿಮೆ ಅವಧಿಯಲ್ಲಿ ಕಂಟ್ರೋಲ್ ಆಗಿದೆ

[ಗೊಂದಲ]

ಶ್ರೀ ವಿ ಸುನೀಲ್ ಕುಮಾರ್ ಇಲ್ಲಿ ಜಿಲ್ಲಾ ಉಸ್ತುವಾರಿ ಸಚಿವರನ್ನು ಎಳೆದುಕೊಂಡು ಬರುವುದು ಸರಿಯಲ್ಲ, ಮಂಗಳೂರು ಮೇಯರ್ ಭಾಗವಹಿಸಿದ್ದನ್ನು, ಉಲ್ಲಾಳದ ಶಾಸಕರ ಮಗ ಭಾಗವಹಿಸಿದ್ದನ್ನು ಪ್ರಸ್ತಾವ ಮಾಡುತ್ತಿಲ್ಲ

[ಗೊಂದಲ]

ಶ್ರೀ ಸಿ ಟಿ ರವಿ ಮಾನ್ಯ ಸಭಾಧ್ಯಕ್ಷರೆ, ನಮ್ಮ ವಿರೋಧಪಕ್ಷದ ನಾಯಕರು ಜಿಲ್ಲಾ ಉಸ್ತುವಾರಿ ಸಚಿವರ ಮೇಲೆ ಆರೋಪ ಮಾಡಿದರು ಸದ್ದಾಂ ಹುಸೇನ್ ಸತ್ತು 22 ದಿವಸಗಳಾದ ಮೇಲೆ, ಇರಾಕ್‌ನಲ್ಲಿ ನೇಣು ಹಾಕಿ ಸತ್ತಿದ್ದು, ಇಲ್ಲಿ ಗಲಾಟೆ ಮಾಡಿಸಿದಿರಲ್ಲಾ, ಗಲಾಟೆ ಮಾಡಿದವರು ಯಾವ ಪಕ್ಷದವರು ರೋಷನ್ ಬೇಗ್ ಸಾಹೇಬರೆ, ಬೆಂಗಳೂರಿನಲ್ಲಿ ಬೆಂಕಿ ಹಚ್ಚಿದರಲ್ಲ, ಬೆಂಗಳೂರಿನಲ್ಲಿ ಕೋಮು ಗಲಭೆಯನ್ನು ಹಚ್ಚಿದರಲ್ಲ ಆ ಬಗ್ಗೆ ಹೇಳಬೇಕು

ಯಾರು ಬೆಂಕಿ ಹಚ್ಚಿದ್ದು, ನೇಣು ಹಾಕಿದವರು ನಾವಾ? ಸಂಘಪರಿವಾರದವರ ನೇಣು ಹಾಕಿದ್ದು? ಏತಕ್ಕೆ ಬೆಂಕಿ ಹಚ್ಚಿದಿರಿ? ಯಾರು ಕೋಮು ಗಲಭೆ ಹಚ್ಚಿದವರು? ಅದನ್ನು ಹೇಳಬೇಕಲ್ಲ

[ಗೊಂದಲ]

ಶ್ರೀ ಸಿದ್ದರಾಮಯ್ಯ ಗೃಹ ಸಚಿವರು ಉತ್ತರ ಕೊಡುತ್ತಾರೆ ನೀವೆಲ್ಲಾ ಏಕೆ ಮಾತನಾಡುತ್ತೀರಿ?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಗೃಹ ಸಚಿವರು ಇದ್ದಾರೆ ಅವರು ಉತ್ತರ ಕೊಡುತ್ತಾರೆ

ಅಧ್ಯಕ್ಷರು ಶ್ರೀರಾಮರೆಡ್ಡಿಯವರೇ ಮಾತನಾಡಿ ಅಪ್ಪ, ಅವರು ಹುಡುಗರು ಏನೋ ಹೇಳುತ್ತಾರೆ ನೀವು ಮಾತನಾಡಿ ನೀವು ಕುಳಿತುಕೊಳ್ಳಿ ಅವರು ಬೇಗ ಮಾತನಾಡಿ ಮುಗಿಸುತ್ತಾರೆ

ಶ್ರೀ ಕೆ ರಘುಪತಿ ಭಟ್ ಕರಾವಳಿ ಸಮಸ್ಯೆ ಕರಾವಳಿ ಶಾಸಕರಿಗೆ ಗೊತ್ತಿರುತ್ತದೆ ಕೋಲಾರದವರು ಬಂದು ನಮಗೆ ಹೇಳಬೇಕಾಗಿಲ್ಲ ಸತ್ಯ ಸಂಗತಿ ಹೇಳಬೇಕು

ಶ್ರೀ ಸಿ ಟಿ ರವಿ ಮಾನ್ಯ ಅದ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರು ಒಳ್ಳೆಯ ಚರ್ಚೆಯನ್ನು ತಂದಿದ್ದಾರೆ ತಾವು ದಯಮಾಡಿ ವಕಾಲತ್ ಮಾಡಿ ವಕೀಲರ ತರಹ ಆಗಬೇಡಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ನಾನು ಯಾರ ಪರವಾಗಿ ವಕಾಲತ್ತು ಹಾಕುತ್ತಿಲ್ಲ ಈ ದೇಶದ ಸಮಸ್ಯೆ ಬಗ್ಗೆ ಮತ್ತು ಐಕ್ಯತೆ ಬಗ್ಗೆ ವಕಾಲತ್ತು ಹಾಕುತ್ತಿದ್ದೇನೆ ಆ ವಕಾಲತ್ತನ್ನು ಯಾರೂ ಕಿತ್ತುಕೊಳ್ಳುವುದಕ್ಕೆ ಸಾಧ್ಯವಿಲ್ಲ ನಾನು ಯಾರ ವರವಾಗಿ ವಾದ ಮಾಡುತ್ತಿಲ್ಲ ಯಾರ ಪರವಾಗಿಯೂ ವಕಾಲತ್ತು ಹಾಕುತ್ತಿಲ್ಲ

ಶ್ರೀ ಹೆಚ್ ಡಿ ಬಸವರಾಜು ಮಾನ್ಯ ಅಧ್ಯಕ್ಷರೆ, ಅವರು ಸತ್ಯ ಹೇಳುತ್ತಿದ್ದಾರೆ ಅದರ ಬಗ್ಗೆ ಚರ್ಚೆಯಾಗಲಿ ಎಂದು ನಾವೂ ಹೇಳುತ್ತಿರುವುದು ಅವರು ಏನು ಹೇಳುವುದಕ್ಕೆ ಹೊರಟಿದ್ದಾರೆ ಅದು ಸತ್ಯವಾದ ವಿಚಾರ ಆ ವಿಚಾರದ ಬಗ್ಗೆ ಚರ್ಚೆಯಾಗಲಿ

ಅಧ್ಯಕ್ಷರು ಶ್ರೀರಾಮರೆಡ್ಡಿಯವರೇ ನೀವು ಮಾತನಾಡಿ ನೀವು ಮಾತನಾಡದೆ ಇದ್ದರೆ ಅವರು ಎದ್ದು ನಿಲ್ಲುತ್ತಾರೆ ನೀವು ಕುಳಿತುಕೊಂಡರೆ ಅವರು ಮಾತನಾಡುತ್ತಾರೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಅವರನ್ನು ಕಂಟ್ರೋಲ್ ಮಾಡುವುದು ಬಿಟ್ಟು ಇವರು ನಮಗೆ ಕಂಟ್ರೋಲ್ ಮಾಡುತ್ತಿದ್ದಾರೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ನೀವೇ ಎಲ್ಲರಿಗೂ ಕಂಟ್ರೋಲ್ ಮಾಡಬೇಕು ಪಾಪ ಅವರು ಒಬ್ಬರು ಏನು ಮಾಡುತ್ತಾರೆ

ಅಧ್ಯಕ್ಷರು. ಹಾಗಲ್ಲ ಸ್ವಾಮಿ, ನಾನು ಹೇಳುತ್ತಿದ್ದೇನೆ, ಇವರು ಮಾತನಾಡಿದ ಹಾಗೆಲ್ಲ ಅವರು ಕೂಗಿಕೊಳ್ಳುತ್ತಾರೆ

ಶ್ರೀ ಹೆಚ್ ಡಿ ಬಸವರಾಜು ಅಧ್ಯಕ್ಷರೆ, ಒಂದೇ ಮುಖದ ಚರ್ಚೆ ಬೇಡ ವಿಸ್ತೃತವಾಗಿ ಚರ್ಚೆಯಾಗಲಿ, ಅಲ್ಲಿ ಏನು ನಡೆದಿದೆ ಎನ್ನುವ ಸತ್ಯವನ್ನು ಹೇಳಲಿ

ಅಧ್ಯಕ್ಷರು ಎಷ್ಟು ಸಾರಿ ಹೇಳಬೇಕು? ಸುಮ್ಮನೆ ಒಂದೇ ಸಾರಿ ಹೀಗೆ ಎದ್ದು ನಿಂತುಕೊಳ್ಳುವುದು ಸರಿಯಾ?

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ನಾವು ಮಾತನಾಡುತ್ತೇವೆ ನಂತರ ಅವರಿಗೆ ಅವಕಾಶ ಕೊಡಿ

ಶ್ರೀ ಬಿ ಆರ್ ಪಾಟೀಲ್ ಒಂದು ಧರ್ಮದ ಮತದ ಹೆಸರನ್ನು ಎತ್ತಿ ಇಲ್ಲಿ ಕೆಲವು ಸದಸ್ಯರುಗಳು ಮಾತನಾಡುತ್ತಿದ್ದಾರೆ ಇದು ಎಷ್ಟು ಸಾಧು ಎನ್ನುವುದು ತಮಗೆ ಬಿಟ್ಟ ವಿಚಾರ ಈ ವಿಧಾನ ಸಭೆ ಸದಸ್ಯರಾದ ವಿರಾಜಪೇಟೆ ಶಾಸಕರನ್ನು ಈ ಸಂಘ ಪರಿವಾರದವರು ಅವರ ಜೊತೆ ಸೇರಿಕೊಂಡವರು

ಗೊಂದಲ

ಅಧ್ಯಕ್ಷರು. ಪ್ರಚೋದನಾತ್ಮಕವಾಗಿ ಮಾತನಾಡಬೇಡಿ ಪ್ರಚೋದನೆ ಮಾಡುವುದರಿಂದ ಏನೂ ಪ್ರಯೋಜನವಿಲ್ಲ

ಶ್ರೀ ಎ ಎಸ್ ಬಸವರಾಜು ಅರಸೀಕೆರೆಗೆ ಬನ್ನಿ ಎಷ್ಟೊಂದು ಕಾರ್ಯಕ್ರಮಗಳನ್ನು ನಾವು ಮಾಡಿದ್ದೇವೆ ಒಂದು ಗಲಾಟೆ ಆಗಿಲ್ಲ ಕಾಂಗ್ರೆಸ್‌ನವರು ಬರೀ ಗಲಾಟೆ ಮಾಡಿಸುವುದರಲ್ಲಿ ಇರುತ್ತಾರೆ

ಅಧ್ಯಕ್ಷರು ಜನ ಪ್ರತಿನಿಧಿಗಳು ನಿಮಗೆಲ್ಲಾ ಕ್ಯಾಕರಿಸಿ ಉಗುಳುತ್ತಿದ್ದಾರೆ ಸುಮ್ಮನೆ ಕುಳಿತುಕೊಳ್ಳಿ ಇಲ್ಲವೆಂದರೆ ನಾನು ನಿಮ್ಮನ್ನೆಲ್ಲಾ ಹೊರಗಡೆ ಕಳುಹಿಸಬೇಕಾಗುತ್ತದೆ ಎಲ್ಲ ಗರ ಹಿಡಿದ ಹಾಗಾಗಿದೆ

ಮಾನ್ಯ ಸದಸ್ಯರು ಮಾನ್ಯ ಅಧ್ಯಕ್ಷರೆ, ಈ ದೇಶದಲ್ಲಿ ಕೋಮು ಗಲಭೆಗಳಾಗುವುದಕ್ಕೆ ಕಾಂಗ್ರೆಸ್ ನೇರ ಹೊಣೆ ಮಾನ್ಯ ಅಟಲ್‌ಬಿಹಾರಿ ವಾಜಪೇಯಿ ನೇತೃತ್ವದಲ್ಲಿ

ಅಧ್ಯಕ್ಷರು ಕೂರ್ರಿ ನಾನು ನಿಯಮ ಮಾಡಿ ಎಲ್ಲರನ್ನೂ ಹೊರಗಡೆ ಕಳುಹಿಸಬೇಕಾಗುತ್ತದೆ ಅವರು ಅವರ ಭಾವನೆಗಳನ್ನು ಹೇಳಿದರು ಅವರು ಪ್ರತಿಭಟನೆ ಮಾಡಿದರು ಅದಾದ ನಂತರ ಕುಳಿತು ಅವರು ಹೇಳಿದ್ದು ಕೇಳಬೇಕು ದಯಮಾಡಿ ಎಲ್ಲಾ ಸದಸ್ಯರುಗಳಿಗೆ ಹೇಳುತ್ತೇನೆ ಪ್ರಚೋದನೆ ಮಾಡಬೇಡಿ ಪ್ರಚೋದನೆ ಮಾಡಿ ಹಾಗಾಯಿತು ಹೀಗಾಯಿತು ಎಂದು ಹೇಳಬೇಡಿ ನಿಮ್ಮ ಬಳಿ ಇರುವ ಖಚಿತವಾದ ಮಾಹಿತಿಗಳು ಅಂಕಿಅಂಶಗಳನ್ನು ಹೇಳಿ ಕುಳಿತುಕೊಂಡು ಕೇಳಿ ಸಂಬಂಧಪಟ್ಟ ಏರಿಯಾದಿಂದ ಬಂದಿದ್ದರೆ ನಿಮಗೂ ಅವಕಾಶ ಕೊಡುತ್ತೇನೆ ಈ ತರಹ ಮಾಡಬಾರದು

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ನಾನು ಅವರ ಕಡೆ ತಿರುಗಿ ಮಾತನಾಡುತ್ತಿಲ್ಲ ನಾನು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ ನಾನಂತೂ ಯಾರ ಪರವಾಗಿಯೂ ವಕಾಲತ್ತು ಹಾಕುತ್ತಿಲ್ಲ

ಅಧ್ಯಕ್ಷರು ವಕಾಲತ್ತು ಹಾಕುವುದು ಅಲ್ಲ, ದಯಮಾಡಿ ಪ್ರಚೋದನಾತ್ಮಕವಾಗಿ ಮಾತನಾಡಬೇಡಿ ಎಲ್ಲರೂ ಒಂದೇ ಸಾರಿ ಎದ್ದು ನಿಲ್ಲುತ್ತಾರೆ ನೀವು ಯಾವ ಉದ್ದೇಶದಿಂದ ಹೇಳಿದ್ದೀರಿ ಅದು ಅವರಿಗೆ ಗೊತ್ತಾಗುವುದಿಲ್ಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಕೊಲೆ ಮಾಡಿರುವುದು ಹೇಳಿದರೆ ಅದು ಪ್ರಚೋದನೆ ಆಗುತ್ತದಾ? ಲೂಟಿ ಮಾಡಿರುವುದು ಹೇಳಿದರೆ ಪ್ರಚೋದನೆ ಆಗುತ್ತದಾ? ಆಂಬ್ಯುಲೆನ್ಸ್‌ನ್ನು ತಡೆದು ಅದರಲ್ಲಿ ಇರತಕ್ಕಂಥವರನ್ನು ಹಿಡಿದು ಹೊರಗಡೆ ಎಳೆದು ಸಾಯಿಸಿರತಕ್ಕಂಥದ್ದು ಹೇಳಿದರೆ ಅದು ಪ್ರಚೋದನೆ ಆಗುತ್ತದಾ? ಇದು ಕೇಸ್ ದಾಖಲಾಗಿಲ್ಲವಾ? ನಾನು ಸುಳ್ಳು ಹೇಳುತ್ತಿದ್ದೇನಾ? ಆಂಬ್ಯುಲೆನ್ಸ್ ನಿಂದ ಹೊರಗಡೆ ಎಳೆದು ಕೊಲೆ ಮಾಡತಕ್ಕಂಥದ್ದು ಸತ್ಯನಾ ಸುಳ್ಳಾ? ಗೃಹ ಮಂತ್ರಿಗಳು ಹೇಳಲಿ ಕೇಸ್ ದಾಖಲಾಗಿದೆ ಅಪರಾದಿಗಳನ್ನು ಬದುಕಿಸಿದ್ದಾರೆ

ಅಧ್ಯಕ್ಷರು. ಈ ತರಹ ಆದರೆ ಮತ್ತೆ ಮನೆ ಎಳೆದುಕೊಂಡು ಹೊರಟು ಹೋಗುತ್ತದೆ ಇಲ್ಲಿ ಚರ್ಚೆ ಆಗುವುದೇ ಇಲ್ಲ

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ನಾನು ಯಾರ ಮೇಲೆಯೂ ವೈಯುಕ್ತಿಕವಾಗಿ ಆಪಾದನೆ ಮಾಡುತ್ತಿಲ್ಲ ಇಲ್ಲಿ ನಡೆದಿರತಕ್ಕಂಥದ್ದು ಏನು? ಕೋಮು ಶಕ್ತಿಗಳು ಅಲ್ಲಿ ಉಂಟು ಮಾಡಿರತಕ್ಕಂತಹ ಗಲಭೆ ಕೋಮು ಶಕ್ತಿಗಳು ಒಂದೇ ವಿಭಾಗದಲ್ಲಿ ಇರಬೇಕೆಂದೇನೂ ಇಲ್ಲ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಕುಂಬಳ ಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ಏಕೆ ನೋಡಿಕೊಳ್ಳುತ್ತೀರಿ?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಇದು ಕೋಮುವಾದಿಗಳ ಕೆಲಸ ಕೋಮುವಾದಿಗಳು ಎಲ್ಲ ಕಡೆಗಳಲ್ಲಿಯೂ ಇದ್ದಾರೆ ಕೋಮುವಾದಿಗಳು ಹಚ್ಚಿರತಕ್ಕಂತಹ ಬೆಂಕಿ ಇದು ಯಾರಿಗೆ ಸಿಟ್ಟು ಬಂದಿದೆ ಅವರೆಲ್ಲಾ ಕೋಮುವಾದಿಗಳು ಎಂದು ಅರ್ಥ ಬೇರೇನೂ ಅರ್ಥ ಮಾಡಿಕೊಳ್ಳುವ ಅವಶ್ಯಕತೆ ಇಲ್ಲ ಏಕೆ ಸಿಟ್ಟು ಮಾಡಬೇಕು? ಬಂಟ್ವಾಳದಲ್ಲಿ ಒಂದು ಸುದ್ದಿ ಹಬ್ಬಿಸಿದರು ದನಕರುಗಳನ್ನು ಸಾಗಿಸುತ್ತಿದ್ದಂತಹ ಒಂದು ಲಾರಿ ಮಹಿಳೆಗೆ ಡಿಕ್ಕಿ ಹೊಡೆದು ಸತ್ತಿದೆ ಎಂದು ಹೇಳಿ ಯಾವ ಪೋಲಿಸ್ ಸ್ಟೇಷನ್‌ನಲ್ಲಿ ಕೇಸ್ ದಾಖಲಾಗಿದೆ ಎಲ್ಲಿ complaint ದಾಖಲಾಗಿದೆ? ಏಕೆ ಆ ಸುದ್ದಿ ಹುಟ್ಟಿಸಿದರು? ಆ ಸುದ್ದಿ ಹುಟ್ಟಿಸಿದ ಮೇಲೆ ಇಡೀ ದಕ್ಷಿಣ ಕನ್ನಡ ಜಿಲ್ಲೆ ಹತ್ತಿಕೊಂಡು ಉರಿಯಿತು ಯಾರು ಅದನ್ನು ಹಾರಿಸಿದಂತಹವರು? ನೂರಾರು ಜನ ಮುಗ್ದರ ಅಂಗಡಿಗಳನ್ನು ಲೂಟಿ ಮಾಡಿದರು ಹೊಡೆದು ಕೈ ಕಾಲುಗಳನ್ನು ಮುರಿದರು ನಾವು ಆಸ್ಪತ್ರೆಗಳಿಗೆ ಭೇಟಿ ಕೊಟ್ಟಿದ್ದೇವೆ ಏನೂ ಸಂಬಂಧ ಇಲ್ಲದೆ ಇರತಕ್ಕಂತಹವರಿಗೆ ಹೊಡೆದು ಆಸ್ಪತ್ರೆಗಳಿಗೆ ಕಳುಹಿಸಿದಿರಿ ಇದಕ್ಕೆ ಯಾರು ಹೊಣೆ? ಇದಕ್ಕೆ ಯಾರೂ ಉತ್ತರ ಹೇಳುವ ಅವಶ್ಯಕತೆ ಇಲ್ಲವಾ? ಇವರ ರಾಜಕಾರಣಕ್ಕೋಸ್ಕರ ದೇಶದಲ್ಲಿ ಮುಗ್ದರಿಗೆ ಬಲಿ ಕೊಡಬೇಕಾ? ಒಬ್ಬ ಧರ್ಮಗುರು KSRTC bus standನಲ್ಲಿ ನಡೆದುಕೊಂಡು ಹೋಗುತ್ತಿರುವಾಗ ಹಿಡಿದು ಕೊಲೆ ಮಾಡಿದರು ಕೊಲೆ ಮಾಡಿ ಹೊರಟು ಹೋಗಿ ಬಿಟ್ಟರು ಕೇಸ್ ದಾಖಲಾಗಿರುವುದು ಸುಳ್ಳಾ? ಅಪರಾಧಿಗಳು ಪರಾರಿ ಆಗಿರತಕ್ಕಂಥದ್ದು ಸುಳ್ಳಾ? ಪೇಪರ್‌ನಲ್ಲಿ ಮತ್ತು TV ಯಲ್ಲಿ ಅದರಲ್ಲಿ ಯಾರ್ಯಾರು ಭಾಗವಹಿಸಿದ್ದಾರೆಂದು ಬಂದಿದೆ ಅದು ಮಂಗಳೂರಿನ ಮೇಯರ್ ಆಗಿರಬಹುದು, ಇನ್ನೊಬ್ಬರಾಗಿರಬಹುದು ಯಾರೆಲ್ಲಾ ಆ ಕೆಲಸಗಳಿಗೆ ಪ್ರಚೋದನೆ ಮಾಡಿದ್ದಾರೆ ಅವರೆಲ್ಲಾ ದೇಶದ್ರೋಹಿಗಳೆ ಈ ಸಮಾಜದ ದ್ರೋಹಿಗಳೇ ಅವರು ಇಂತಹವರು ಎಂದು ಪ್ರಶ್ನೆ ಅಲ್ಲ KFD ಬಗ್ಗೆ ನನಗೆ ಬಹಳ ಸ್ಪಷ್ಟವಾದ ಮಾಹಿತಿ ಇದೆ ಆ ಸಂಘಟನೆ ಯಾರದು ಯಾರು ಮ್ಯೂಟ್ ಮಾಡಿದ್ದಾರೆ, SIMIನೇ ಅದನ್ನು ಮ್ಯೂಟ್ ಮಾಡಿರುವಂಥದ್ದು, ಅದೊಂದು ಮೂಲಭೂತವಾದ ಸಂಘಟನೆ ಎಂದು ನಮಗೆ ಸ್ಪಷ್ಟವಾಗಿ ಗೊತ್ತಿದೆ ಅದರ ಬಗ್ಗೆ ನಾನು ಇನ್ನು ಮಾತನಾಡುವುದಕ್ಕೆ ಪ್ರಾರಂಭ ಮಾಡಿಲ್ಲ ನನ್ನ ಬಳಿಯೂ ಅದರ ಬಗ್ಗೆ ಮಾಹಿತಿ ಇದೆ ನಾನು ಅದರ ಬಗ್ಗೆ ಮಾತನಾಡುತ್ತೇನೆ

ಬೆಂಗಳೂರಿನಲ್ಲಿ ನಡೆದಂತಹ ಗಲಭೆಗಳಲ್ಲಿಯೂ ಅವರ ಕೈವಾಡ ಇದೆ ಇಲ್ಲವೆಂದು ಅಲ್ಲ ಪ್ರಶ್ನೆ ಇಲ್ಲಿ ಪ್ರಶ್ನೆ ಇರತಕ್ಕಂಥದ್ದು ಎಲ್ಲ ಕೋಮುವಾದಿಗಳು ಮತ್ತು ಮತಾಂಧ ಮೂಲಭೂತವಾದಿಗಳು ಸೇರಿ ಇವತ್ತು ಕರ್ನಾಟಕ ರಾಜ್ಯವನ್ನು ಗುಜರಾತ್ ಮಾಡುವುದಕ್ಕೆ ಹೊರಟಿದ್ದಾರೆ ಅದನ್ನು ನಾವು ಒಪ್ಪಲಿಕ್ಕೆ ಸಾಧ್ಯವಿಲ್ಲ ನಾವು ಕರ್ನಾಟಕವನ್ನು ಗುಜರಾತ್ ಮಾಡುವುದಕ್ಕೆ ಬಿಡುವುದಿಲ್ಲ ಇವತ್ತು ಮೂಲಭೂತವಾದಿಗಳು ನಡೆಸುತ್ತಿರತಕ್ಕಂತಹ ಈ ಕೃತ್ಯಗಳು ನಮ್ಮ ರಾಜ್ಯದಲ್ಲಿ ಅಶಾಂತಿಯನ್ನು ಉಂಟು ಮಾಡಿ, ಜನರನ್ನು ಸಾಯಿಸತಕ್ಕಂತಹ ಕೆಲಸ ಮಾಡುತ್ತಿದ್ದಾರೆ ಇದಕ್ಕೆ ನೇರವಾಗಿ ಹೊಣೆ ಕೋಮುವಾದಿಗಳೇ ಸಂಘ ಪರಿವಾರದವರು ಬೇರೆ ಯಾರೂ ಅಲ್ಲ ಸಂಘ ಪರಿವಾರದವರು ಮತ್ತು ಪೋಲಿಸ್‌ನವರು ಜಾಯಿಂಟ್ ಆಗಿ ನಡೆದಿರತಕ್ಕಂಥದ್ದು ಇದು ಮಂಗಳೂರಿನಲ್ಲಿ ನಡೆದಿರತಕ್ಕಂತಹ ಗಲಭೆ

ಗೊಂದಲ

ಅಧ್ಯಕ್ಷರು: ಆಯಿತು ಕುಳಿತುಕೊಳ್ಳಿ ಮಾತನಾಡಿ ಏನು ಮಾಡುತ್ತಾರೆ? ಏನೂ ಮಾಡುವುದಕ್ಕಾಗುವುದಿಲ್ಲ ಏನಾಗಿದೆ ಎಂದರೆ ಈ ದೇಶದಲ್ಲಿ ಓಟಿನ ಬೇಟೆಗಾಗಿ ರಾಜಕೀಯ ಪಕ್ಷಗಳು ಈ ರೀತಿ ಮಾಡುತ್ತಿರುವುದರಿಂದ ಏನೂ ಮಾಡುವುದಕ್ಕಾಗುವುದಿಲ್ಲ ಆದುದರಿಂದ ಸಂಯಮದಿಂದ ಕೇಳಬೇಕು ಸತ್ಯ ಇಲ್ಲದಿದ್ದರೆ ಹೇಳಬೇಕು ಅವರು ಏನು ಹೇಳುತ್ತಾರೆಂದು ಕೇಳಿ

ಶ್ರೀ ಎಂ ಪಿ ಪ್ರಕಾಶ್(ಗೃಹ ಸಚಿವರು)–ಮಾನ್ಯ ಅಧ್ಯಕ್ಷರೆ, ಇಲ್ಲಿ ಯಾವುದಾದರೂ ವಿಚಾರವನ್ನು ಪ್ರಸ್ತಾಪ ಮಾಡಿದಾಗ, ತಾವು ಆಗಲೇ ಪದೇ ಪದೇ ಹೇಳಿದ್ದೀರಿ, ಅದು ನಮಗೆ ಒಪ್ಪಿಗೆ ಆಗದೇ ಇರತಕ್ಕಂಥ ಮಾತನ್ನೂ ಕೂಡ ಸದಸ್ಯರು ಬಳಸಿರಬಹುದು ಅದು ಸಂಘ ಪರಿವಾರ, ಕೆಎಫ್‌ಡಿ, ಸಿಮಿ, ಇದರ ಬಗ್ಗೆ ನಾನು ಮಾತನಾಡುತ್ತೇನೆ ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ ಆದಷ್ಟು ಮಟ್ಟಿಗೆ ನಿಯಂತ್ರಣದಲ್ಲಿ ಮಾತನಾಡಿದರೆ, ಪ್ರಚೋದನಕಾರಿಯಾಗಿ ನಿಮಗೆ ಅವರು ಉತ್ತರ ಕೊಡುವುದಕ್ಕೆ ಆಗುವುದಿಲ್ಲ ನಾವು ನಮ್ಮ ಸದಸ್ಯರಿಗೆ, ನಮ್ಮ ಮಿತ್ರರಿಗೆ ಹೇಳತಕ್ಕಂಥದ್ದು ಇಷ್ಟೆ ಒಂದು ವೇಳೆ ಅವರು ಸಂಘ ಪರಿವಾರ ಎಂದು ಪದ ಪ್ರಯೋಗ ಮಾಡಿದ್ದರೂ ತಮ್ಮ ಅಭಿಪ್ರಾಯದ ಪ್ರಕಾರ ತಪ್ಪು ಎಂದು ಭಾವಿಸಿಕೊಂಡಿದ್ದರೆ ನಾವು ಉತ್ತರ ಕೊಡುವಾಗ ಆ ಬಗ್ಗೆ ಉತ್ತರ ಕೊಡುವುದಕ್ಕೆ ಅವಕಾಶವಿದೆ ಆದುದರಿಂದ ಅವರು ಏನೇನು ಹೇಳಬೇಕೆಂದುಕೊಂಡಿದ್ದಾರೋ ಅವುಗಳನ್ನೆಲ್ಲಾ ಅವರು ಹೇಳಲಿ ಅವರು ಹೇಳಿದ ಮೇಲೆ ನಮ್ಮಲ್ಲೂ ಕೂಡ ಸದಸ್ಯರುಗಳು

ಮಾತನಾಡಬಹುದು ಏಕೆಂದರೆ ಈ ಚರ್ಚೆ ನಿಯಮ 69ಕ್ಕೆ ಪರಿವರ್ತನೆಯಾಗಿರುವುದರಿಂದ ಎಲ್ಲ ಸದಸ್ಯರಿಗೂ ಮಾತನಾಡುವುದಕ್ಕೆ ಅವಕಾಶವಿದೆ ನಮಗೂ ಮಾತನಾಡುವುದಕ್ಕೂ ಅವಕಾಶವಿದೆ ಅವರಿಗೆ ಮಾತ್ರ ಮಾತನಾಡುವುದಕ್ಕೆ ಸೀಮಿತವಾಗಿರತಕ್ಕಂಥದ್ದಲ್ಲ ಆದುದರಿಂದ ನೀವು ಹೇಳಿದ ಪ್ರತಿಯೊಂದು ವಿಚಾರವನ್ನು ನಾವು ವಿರೋಧಿಸಿ ಮಾತನಾಡುವುದಕ್ಕೆ ಅವಕಾಶವಿದೆ They have got every right to say But we have got every right to see, that we protest. ಆದುದರಿಂದ ತಾವು ದಯವಿಟ್ಟು ಅವರಿಗೆ ಇನ್ನೊಂದು ಸಲ ಅವಕಾಶ ಕೊಡಿ ನೋಡೋಣ ಅವರು ಏನು ಹೇಳುತ್ತಾರೋ ಹೇಳಲಿ ಬೇಗನೇ ಮುಕ್ತಾಯಗೊಳಿಸುವುದಕ್ಕೆ ತಾವು ಹೇಳಿ

ಅಧ್ಯಕ್ಷರು.– ಮಾನ್ಯ ಪ್ರಕಾಶ್‌ರವರೆ, ಬೇಗ ಮುಕ್ತಾಯ ಮಾಡಬೇಕೆಂದರೆ ನಾನು ಈಗಲೇ ಮುಕ್ತಾಯ ಮಾಡಿಬಿಡುತ್ತೇನೆ

ಶ್ರೀ ಎಂ ಪಿ ಪ್ರಕಾಶ್ – ಟೈಂ ಫಿಕ್ಸ್ ಮಾಡಿಬಿಡಿ

ಅಧ್ಯಕ್ಷರು – ಚರ್ಚೆ ಹೋಗುತ್ತಿರುವ ದಿಕ್ಕು ನೋಡಿದರೆ ನಿನ್ನೆ ಆಯಿತಲ್ಲಾ ಘಟನೆ, ಅದು ಇಲ್ಲಿ ಆಯಿತು, ಆ ರೀತಿ ಈಗ ಅಲ್ಲಿ ಆಗುತ್ತದೆ ಆದುದರಿಂದ ಸಂಯಮದಿಂದ ಚರ್ಚೆ ಮಾಡಬೇಕು ಆ ರೀತಿ ಚರ್ಚೆ ಮಾಡದಿದ್ದರೆ ಏನು ಪ್ರಯೋಜನ? ಏಕೆ ನಡೆಸಬೇಕು ಸದನವನ್ನು? ನೀವು ಹೊಡೆದಾಟ ಮಾಡುವುದಕ್ಕೆ ನಾನು ಸದನವನ್ನು ನಡೆಸಬೇಕೆ?

ಶ್ರೀ ಆರಗ ಜ್ಞಾನೇಂದ್ರ – ಮಾನ್ಯ ಅಧ್ಯಕ್ಷರೆ, ಅವರು ಎಲ್ಲ ರೀತಿಯಿಂದಲೂ ಮಾತನಾಡಲಿ ನಾವು ಅವರಿಗೆ ತೊಂದರೆ ಮಾಡುವುದಿಲ್ಲ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ನಾವು ಕೇಳುತ್ತಿರುತ್ತೇವೆ ನಾವು ಮಾತನಾಡುವಾಗ ಅದಕ್ಕೆ ಉತ್ತರವನ್ನು ಕೊಡುತ್ತೇವೆ ಆದರೆ ಪೋಲಿಸ್ ಕೇಸ್ ಹಾಕಿದ್ದೀವಿ, ಕೋರ್ಟ್‌ಗಳಿವೆ,

(ಗೊಂದಲ)

ಮಾನ್ಯ ಅಧ್ಯಕ್ಷರೆ, ಈ ಗಲಭೆಯನ್ನು ಕಣ್ಣಿಂದ ನೋಡಿದಂತೆ ಇಂಥಿಂಥವರೇ ಮಾಡಿದ್ದಾರೆ ಎಂದು ಹೇಳುವಂಥದ್ದು ಇದೆಯಲ್ಲಾ ಅದು ಅನವಶ್ಯಕವಾಗಿ ನಮ್ಮ ಮನಸ್ಸನ್ನು ಘಾಸಿಗೊಳಿಸುತ್ತದೆ

(ಗೊಂದಲ)

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಮಾನ್ಯ ಅಧ್ಯಕ್ಷರೆ, ಮಂಗಳೂರು ಗಲಭೆಗಳಲ್ಲಿ ಪೋಲಿಸ್‌ನವರ ಪಾತ್ರ ಕೂಡ ಬಹಳ ಪ್ರಮುಖವಾಗಿದೆ ಅವರ ನೇರ ಷಾಮೀಲಿನಿಂದಾಗಿಯೇ ಮಂಗಳೂರಿನಲ್ಲಿ ಈ ಘಟನೆ ನಡೆದಿರತಕ್ಕಂಥದ್ದು

ನಾನು ಆಗಲೇ ಹೇಳಿದೆ, ಮನೆಗಳಿಗೆ ಹೋಗಿ ಪೋಲಿಸ್‌ನವರು ಹೊಡೆದಿದ್ದಾರೆ ವೃದ್ಧರ ಮೇಲೆ ದಬ್ಬಾಳಿಕೆಯನ್ನು ಮಾಡಿರತಕ್ಕಂಥವರು ಪೋಲಿಸ್‌ನವರು, 80 ವರ್ಷದ ಮುದುಕಿಗೆ ಕೈ ಮುರಿದಿದ್ದಾರೆ ಆ ಮುದುಕಿ ಎಲ್ಲಿ ಹೋಗಿ ಕೋಮು ಗಲಭೆ ಮಾಡಿರಬಹುದು ಹೇಳಿ ಮಾನ್ಯ ಅಧ್ಯಕ್ಷರೆ ನೀವೆ ನಾನು ಅವರ ಮನೆಗೆ ಹೋಗಿ ನೋಡಿ ಬಂದೆ ಆ 80 ವರ್ಷದ ಮುದುಕಿಗೆ ಕೈ ಮುರಿದಿದ್ದಾರಲ್ಲ ಆಕೆ ಎಲ್ಲಿ ಕೋಮು ಗಲಭೆ ಮಾಡಿರಬಹುದು, ಎಲ್ಲಿಗೆ ಕಲ್ಲು ಹೊಡೆದಿರಬಹುದು, ಎಲ್ಲಿ ಚೂರಿ ಹಾಕಿರಬಹುದು ಆಕೆ ಬಂದು ಅವರೆಲ್ಲಾ ಕೋಮು ಗಲಭೆಯಲ್ಲಿ ಭಾಗವಹಿಸಿದ್ದವರೆ? 8 ವರ್ಷದ ಮಗುವಿಗೆ ಪೋಲಿಸ್‌ನವರು ಬಂದೂಕಿನ ಬ್ಯಾನೆಟ್‌ನಿಂದ ತಿವಿದಿದ್ದಾರೆ ಆ 8 ವರ್ಷದ ಮಗು ಎಲ್ಲಿ ಹೋಗಿ ಕೋಮು ಗಲಭೆ ಮಾಡಿರಬಹುದು? ಏಕೆ ತಿವಿದಿರಿ ಆ ಮಗುವಿಗೆ? ಯಾರು ಪ್ರಚೋದನೆಯನ್ನು ಮಾಡಿದರು? 6ನೇಯ ತಾರೀಖು ಬಂದ್‌ಗೆ ಕಾಲ್ ಕೊಟ್ಟಾಗ ಸ್ವತ ಪೋಲಿಸ್‌ನವರೇ ಎಲ್ಲಾ ಅಂಗಡಿಗಳನ್ನು ಬಂದ್ ಮಾಡಿಸಿದ್ದಾರೆ ಸಾರ್ವಜನಿಕರಿಗೆ ಹೆದರಿಸಿದ್ದಾರೆ ಯಾರ ಪರವಾನಗಿಯನ್ನು ತೆಗೆದುಕೊಂಡು ಹೆದರಿಸಿದ್ದಾರೆ ಇವರು? 4ನೆಯ ತಾರೀಖು ಕನ್ನಡ ಪರ ಸಂಘಟನೆಗಳು ಬಂದ್‌ಗೆ ಕಾಲ್ ಕೊಟ್ಟಿದ್ದಾರೆ ಕೋಮು ಗಲಭೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅವ್ಯಾಹತವಾಗಿ ನಡೆಯುತ್ತದೆ ಎಂದು ಗೊತ್ತು ಗೊತ್ತಿದ್ದೂ ಕೂಡ 4ನೆಯ ತಾರೀಖು ಒಂದು ಬಂದ್‌ಗೆ ಪರ್ಮಿಶನ್ ಕೊಡುತ್ತಾರೆ 6 ನೆಯ ತಾರೀಖು ಇನ್ನೊಂದು ಬಂದ್‌ಗೆ ಪರ್ಮಿಶನ್ ಕೊಡುತ್ತಾರೆ ಇವರೇನು ಪೋಲಿಸ್ ಕೆಲಸವನ್ನು ಮಾಡುತ್ತಿದ್ದಾರೆಯೆ, ಅಥವಾ ಬೇರೇನಾದರೂ ಮಾಡುತ್ತಿದ್ದಾರೆಯೆ? ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉಡುಪಿಯಲ್ಲಿ ಕಳೆದೆರಡೂರು ವರ್ಷಗಳಿಂದ ಏನೇನು ನಡೆಯುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿದೆ ಅಂಥ ಸೂಕ್ಷ್ಮವಾದಂಥ ಪ್ರದೇಶದಲ್ಲಿ ಬಂದ್‌ಗಳಿಗೆ ಕರೆ ಕೊಡತಕ್ಕಂಥ ಸಂದರ್ಭಗಳಲ್ಲಿ ಬೇರೆ ಯಾವುದಾದರೂ ಕಾರ್ಯಕ್ರಮಗಳು ನಡೆಯತಕ್ಕಂಥ ಸಂದರ್ಭಗಳಲ್ಲಿ ಮುನ್ನೆಚ್ಚರಿಕೆ ವಹಿಸಬೇಕಾದಂಥ ಪೋಲಿಸ್‌ನವರು ಬೇಜವಾಬ್ದಾರಿಯಿಂದ ವರ್ತಿಸಿ ಯಾರೋ ಒತ್ತಡಕ್ಕೆ ಮಣಿದು, ಅಲ್ಲಿರತಕ್ಕಂಥ ಪ್ರಭಾವಿ ವ್ಯಕ್ತಿಗಳ ಒತ್ತಡಕ್ಕೆ ಮಣಿದು, ಇವೊತ್ತು ಪೋಲಿಸ್‌ನವರು ಆ ರೀತಿಯಾದಂಥ ಬೇಜವಾಬ್ದಾರಿಯಿಂದ ನಡೆದುಕೊಂಡಿದ್ದಾರೆ ಇದನ್ನೆಲ್ಲಾ ನಾವಲ್ಲ ಹೇಳಿರತಕ್ಕಂಥದ್ದು ಅಂದಿನ ಐ ಜಿ ಸಿಯೋಲ್‌ರವರು ದಕ್ಷಿಣ ಕನ್ನಡ ಜಿಲ್ಲೆಗೆ ಭೇಟಿ ಕೊಟ್ಟಂಥ ಸಂದರ್ಭದಲ್ಲಿ ಅವರೇ ನೇರವಾಗಿ ಹೇಳಿದ್ದಾರೆ

ಟಿ ವಿ ಯಲ್ಲೆಲ್ಲಾ ಬಂದಿದೆ, ನೋಡಿರಬಹುದು, ಪೋಲಿಸ್‌ನವರು ನಡೆದುಕೊಂಡ ರೀತಿಯ ಬಗ್ಗೆ, ನಾನಲ್ಲ ಇದನ್ನು ಹೇಳಿರತಕ್ಕಂಥದ್ದು ನೀವು ಬೇಕಾದರೆ ಸಿಯೋಲ್‌ರವರ ಹೇಳಿಕೆಯನ್ನು ತೆಗೆದುನೋಡಿ ಅಂಥ ಸಂದರ್ಭದಲ್ಲಿ ಇವೊತ್ತು ಅಲ್ಲಿರತಕ್ಕಂಥ ಎಸ್ ಪಿ ನೇರವಾಗಿ ಇದರ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ ಇದರ ಬಗ್ಗೆ ಮಾನ್ಯ ಗೃಹ ಮಂತ್ರಿಗಳು ಮಂಗಳೂರಿಗೆ ಬಂದಾಗ ಸಾರ್ವಜನಿಕರು ದೂರು ಹೇಳಿದ್ದಾರೆ ಅವರ ಪಕ್ಷದ ಮುಖಂಡರೇ ಇದರ ಬಗ್ಗೆ ಹೇಳಿದ್ದಾರೆ ನಾನು ಏಕೆ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಮಂಗಳೂರಿನಲ್ಲಿ ನಡೆದಂಥ ಗಲಭೆ, ಬೆಂಗಳೂರಿನಲ್ಲಿ ನಡೆದಂಥ ಗಲಭೆ, ಹೀಗೆ ಎಲ್ಲಿ ನೋಡಿದರೂ ಕೂಡ ಪೋಲಿಸ್ ವಿಫಲತೆಯನ್ನು ನಾವು ಕಾಣಬಹುದು ಪೋಲಿಸ್‌ನವರ ಬೇಜವಾಬ್ದಾರಿತನವನ್ನು ನಾವು ನೋಡಬಹುದು ಕರ್ನಾಟಕದಲ್ಲಿ ಇವೊತ್ತು ಹಲವಾರು ಸಂದರ್ಭಗಳಲ್ಲಿ ಯಾವ ಯಾವ ಪ್ರದೇಶಗಳು ಸೂಕ್ಷ್ಮ, ಯಾವ ಯಾವ ಪ್ರದೇಶಗಳಲ್ಲಿ ಕೋಮು ಗಲಭೆಗಳು ನಡೆಯುತ್ತದೆ ಎನ್ನತಕ್ಕಂಥದ್ದು ಗೃಹ ಇಲಾಖೆಗೆ ಗೊತ್ತಿದೆ ಪೋಲಿಸ್‌ನವರಿಗೆ ಮಾಹಿತಿ ಇದೆ ಅಂಥ ಪ್ರದೇಶಗಳಲ್ಲಿ ಏನಾದರೂ ಘಟನೆ ನಡೆಯತಕ್ಕಂಥ ಸಂದರ್ಭದಲ್ಲಿ ಪೋಲಿಸ್‌ನವರು ಎಷ್ಟು ಎಚ್ಚರಿಕೆಯಿಂದ ಇರಬೇಕಾಗಿತ್ತು , ಗೃಹ ಇಲಾಖೆ ಎಷ್ಟು ಎಚ್ಚರಿಕೆಯಿಂದ ಇರಬೇಕಾಗಿತ್ತು, ಆ ಜವಾಬ್ದಾರಿಯನ್ನು ಇವರು ಹೊತ್ತಿದ್ದಾರೆಯೆ? ಇವರ ಬೇಜವಾಬ್ದಾರಿತನದಿಂದ ಆದಂಥ ನಷ್ಟಕ್ಕೆ ಯಾರು ಜವಾಬ್ದಾರರು? ಆದುದರಿಂದ ನಾನು ಹೇಳುತ್ತಿದ್ದೇನೆ, ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರಿನಲ್ಲಿ ನಡೆದಂಥ ಕೋಮುಗಲಭೆಗಳಿಗೆ ಪೋಲಿಸ್‌ನವರು ಮತ್ತು ಸಂಘ ಪರಿವಾರದವರೇ ನೇರ ಹೊಣೆ ಅದರಲ್ಲಿ ಬೇರೆಯವರದ್ದೂ ಕೂಡ ಪಾತ್ರವಿರಬಹುದು, ನಾನು ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ ಇಲ್ಲಿ ಗೃಹ ಇಲಾಖೆಯವರು ಆ ಬಗ್ಗೆ ಹೇಳಲಿ ಕೆ ಎಫ್ ಡಿ ಯದು ಏನು ಪಾತ್ರ, ಸಿಮಿ ಯದು ಏನು ಪಾತ್ರ, ಅವರೇನು ಮಾಡಿದ್ದಾರೆ ಎಂದು ಹೇಳಲಿ ಯಾರು ಭಾಗವಿಹಿಸಿದ್ದರೂ ಅದನ್ನು ಮುಲಾಜಿಲ್ಲದೇ ಹೇಳಲಿ ಮಾನ್ಯ ಅಧ್ಯಕ್ಷರೆ, ಇನ್ನು ಬೆಂಗಳೂರಿನಲ್ಲಿ ನಡೆದ ಘಟನೆ

ಅಧ್ಯಕ್ಷರು.– ಬೇಗ ಮುಗಿಸಿ ನಿಯಮ 69 ರಡಿಯಲ್ಲಿ ಆ ಕಡೆಯ ಸದಸ್ಯರುಗಳು ಮಾತನಾಡಬಾರದೇನು ನೀವೊಬ್ಬರೇ ಇಷ್ಟು ಹೊತ್ತು ಮಾತನಾಡಿದರೆ ಹೇಗೆ ಬೇಗ ಮುಗಿಸಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಮಾನ್ಯ ಅಧ್ಯಕ್ಷರೆ, 19ನೆಯ ತಾರೀಖು ಸದ್ದಾಂ ಹುಸೇನ್‌ರವರನ್ನು ಗಲ್ಲಿಗೆ ಹಾಕಿದ ವಿರುದ್ಧ ಒಂದು ಪ್ರತಿಭಟನೆ ನಡೆಯಿತು ಆ ಸಂದರ್ಭದಲ್ಲಿ ಗಲಭೆಗಳಾಯಿತು ಎಂದು ಹೇಳುತ್ತಾ ಇರತಕ್ಕಂಥದ್ದು ಸುದ್ದಿ 19ನೆಯ ತಾರೀಖು ಮೆರವಣಿಗೆಗೆ ಯಾವ ಪ್ರದೇಶದಲ್ಲಿ ಪೋಲಿಸ್‌ನವರು ಪರವಾನಗಿಯನ್ನು ಕೊಟ್ಟಿದ್ದಾರೆ ಸ್ವಾಮಿ ಹೇಳಲಿ ಗೃಹ ಇಲಾಖೆಯವರು ಆ ಪ್ರದೇಶಗಳ ಪರಿಸ್ಥಿತಿ ಏನು, ಏಕೆಂದರೆ ಕೋಮು ಗಲಭೆಯನ್ನು ಸೃಷ್ಟಿ ಮಾಡತಕ್ಕಂಥ ಜನ ಇಂಥ ಸಂದರ್ಭಗಳಿಗಾಗಿ ಕಾಯುತ್ತಿರುತ್ತಾರೆ ಎಲ್ಲಾ ಕಡೆಯಲ್ಲೂ ಕಾಯುತ್ತಿರುತ್ತಾರೆ ಆ ಪರಿಸ್ಥಿತಿಯನ್ನು ದುರುಪಯೋಗ ಮಾಡಿಕೊಳ್ಳುವುದಕ್ಕಾಗಿ ಕಾಯುತ್ತಿರುತ್ತಾರೆ ನಾನು ಬಹಳ ವಿಷಾದದಿಂದ ಒಂದು ವಿಚಾರವನ್ನು ಇಲ್ಲಿ ಹೇಳಬೇಕಾಗುತ್ತದೆ 19ನೇಯ ತಾರೀಖು ಗಾಂಧಿ ಸ್ಪ್ಯಾಚ್ಯುವಿನಿಂದ ಮೆರವಣಿಗೆ ಹೊರಟಂಥ ಸಂದರ್ಭದಲ್ಲಿ ರೋಡ್ ಬ್ಲಾಕ್ ಆಗಿ ಟ್ರಾಫಿಕ್ ಬ್ಲಾಕ್ ಆಗುತ್ತದೆ ನಾನು ಆ ಸಂದರ್ಭದಲ್ಲಿ ಆಗ ಎಂ ಜಿ ರೋಡ್‌ನಿಂದ ಬರುತ್ತಿದ್ದೆ ನಾನು ಕಣ್ಣಾರೆ ನೋಡಿದ್ದೇನೆ ಆ ಮೆರವಣಿಗೆಯಲ್ಲಿ ಹೋಗುತ್ತಿದ್ದಂಥ ಆ ಜನರ ಉನ್ಮಾದ, ಅವರು ವರ್ತನೆ ಮಾಡುತ್ತಿದ್ದಂಥ ವಿಧಾನವನ್ನು ನೋಡಿದಾಗಲೇ ನನಗೆ ಆಗಲೇ ಅವರ ಬಗ್ಗೆ ಡೌಟ್ ಬಂತು ಇವೊತ್ತು ಏನೋ ಬೆಂಗಳೂರಿನಲ್ಲಿ ನಡೆಯುತ್ತದೆಂದು ಎರಡನೆಯದಾಗಿ ಯಾರು ಇದಕ್ಕೆ ನಾಯಕರು ಯಾರ ಲೀಡರ್‌ಶಿಪ್, ಇದೇನೂ ಇಲ್ಲ ಹೀಗಾಗಿ ಯದ್ವಾತದ್ವ ಇದ್ದಂಥ ಪರಿಸ್ಥಿತಿಯಲ್ಲಿ ಈ ಮೆರವಣಿಗೆ ಆಗಿದೆ ಅಂಥ ಸಂದರ್ಭವನ್ನು ಉಪಯೋಗಿಸಿಕೊಳ್ಳಲು ಕೋಮುವಾದಿ ಶಕ್ತಿಗಳು ಕಾಯುತ್ತಿದ್ದರು ಏಕೆ? ಅವೊತ್ತು 19, 20 ಮತ್ತು 21ನೆಯ ತಾರೀಖಿನಂದು ಬೆಂಗಳೂರು ನಗರದಾದ್ಯಂತ ಹಿಂದೂ ಸಮಾಜದ ಮೆರವಣಿಗೆಗಳು ನಡೆಯುತ್ತಿದೆ ಹಬ್ಬಗಳು ನಡೆಯುತ್ತಿದೆ ಇಂಥ ಸಂದರ್ಭದಲ್ಲಿ ನಾವು ಯಾರು ಯಾರಿಗೆ ಅನುಮತಿಯನ್ನು ಕೊಡಬಹುದು, ಎಲ್ಲಿ ಕೊಡಬಹುದು ಎನ್ನತಕ್ಕಂಥ ವಿವೇಚನೆಯನ್ನು ಮಾಡಬೇಕಾದಂಥವರು ಯಾರು? ಯಾರು ವಿವೇಚನೆಯನ್ನು ಮಾಡಬೇಕಾಗಿತ್ತು? ಇದು ಇಡೀ ದೇಶಕ್ಕೇ ಗೊತ್ತಿರತಕ್ಕಂಥ ಸತ್ಯ ಆ ವಿವೇಚನೆ ಇಲ್ಲದೇ ಪೋಲಿಸ್‌ನವರು ಅನುಮತಿ ಕೊಟ್ಟಿದ್ದಾರೆ ಅದೇ ಸಂದರ್ಭದಲ್ಲಿ ಎರಡನೆಯ ದಿವಸ ಹಿಂದೂ ಸಮಾಜದ ಮೆರವಣಿಗೆ ನಡೆಯತಕ್ಕಂಥ ಸಂದರ್ಭದಲ್ಲಿ ಟ್ಯಾನರಿ ರೋಡ್ ಎಂದು ಒಂದು ಚಿಕ್ಕ ರೋಡ್ ಇದೆ ಅಲ್ಲಿ ಮೆರವಣಿಗೆಯನ್ನು ನಡೆಸುವುದಕ್ಕೆ ಪೋಲಿಸ್‌ನವರು ಪರ್ಮಿಶನ್ ಕೊಟ್ಟಿದ್ದಾರೆ ಯಾವ ವಿವೇಚನೆ ಇದು? ಯಾವ ಪರಿಸ್ಥಿತಿಯಲ್ಲಿ

ಅಲ್ಲಿ ಮೆರವಣಿಗೆಯನ್ನು ನಡೆಸುವುದಕ್ಕೆ ನೀವು ಪರ್ಮಿಶನ್‌ನ್ನು ಕೊಟ್ಟಿರಿ? ಅದರ ಪರಿಣಾಮ ಏನಾಯಿತು? 19ನೆಯ ತಾರೀಖು ಘಟನೆ ನಡೆದಿದೆ ಕಣ್ಣ ಮುಂದೆ ಇದೆ, ಹೀಗಿದ್ದರೂ 20ನೇಯ ತಾರೀಖಿಗೂ ನೀವು ಅನುಮತಿಯನ್ನು ಕೊಡುತ್ತೀರಿ 21ನೇಯ ತಾರೀಖಿಗೂ ಇವರು ಪರ್ಮಿಶನ್‌ನ್ನು ಕೊಟ್ಟಿದ್ದಾರೆ ಇದಕ್ಕೆ ಯಾರು ಜವಾಬ್ದಾರರು? ನಾನು ಹೇಳುತ್ತೇನೆ ಅದರಲ್ಲಿ ಕೆ ಎಫ್ ಡಿ, ಸಿಮಿ ಯವರ ಪಾತ್ರವೂ ಇದೆ ದುರಾದೃಷ್ಟವಶಾತ್ ನಮ್ಮ ಕೆಲವು ಮುಖಂಡರಿಗೆ, ಅವರಿಗೆ ದುರುದ್ದೇಶವಿರಲಿಲ್ಲ, ಆದರೆ ಆ ಪರಿಸ್ಥಿತಿಯನ್ನು ದುರ್ಲಾಭ ಮಾಡತಕ್ಕಂಥ ಶಕ್ತಿಗಳು ಕೂಡ ಅದರಲ್ಲಿ ಇವೆ ಎನ್ನತಕ್ಕಂಥದ್ದೂ ಕೂಡ ಬಹಳ ಸ್ಪಷ್ಟವಿದೆ ಯಾರು ಇದಕ್ಕೆ ಜವಾಬ್ದಾರರು? ಇವತ್ತು ಇಡೀ ವಿದೇಶಗಳ ಕಣ್ಣು ಬೆಂಗಳೂರಿನ ಮೇಲೆ ಇದೆ ಸಾವಿರಾರು ಕೋಟಿ ರೂಪಾಯಿ ಬಂಡವಾಳ ಬೆಂಗಳೂರಿಗೆ ಹರಿದು ಬರುತ್ತಿದೆ ಇದು ಪ್ರತಿಷ್ಠಿತ ನಗರ ಎಂದು ಹೆಸರುವಾಸಿಯಾಗಿದೆ ಇಡೀ ಜಗತ್ತೆ ಬೆಂಗಳೂರಿನ ಕಡೆ ನೋಡುತ್ತಿದೆ ಇಂತಹ ಕಡೆಗಳಲ್ಲಿ ಗಲಭೆಗಳು ನಡೆದರೆ ಯಾವರೀತಿ message ಅನ್ನು ಬೆಂಗಳೂರಿನಿಂದ ಜಗತ್ತಿಗೆ ಕೊಡುತ್ತಿದ್ದೇವೆ ಇಲ್ಲಿ ಸಾವಿರಾರು ಕೋಟಿ ರೂಪಾಯಿ ಬಂಡವಾಳ ಹೂಡುವವರು ಯಾವರೀತಿ ಯೋಚನೆ ಮಾಡುತ್ತಾರೆ ಬೆಂಗಳೂರು ನಗರದ ಪ್ರತಿಷ್ಠೆ ಪ್ರಶ್ನೆ ಯಾವತ್ತೂ ಕೂಡ ಬೆಂಗಳೂರು ನಗರದಲ್ಲಿ ಕೋಮು ಗಲಭೆಗಳು ನಡೆದಿಲ್ಲ ಎಂತಹ ಸಂದರ್ಭದಲ್ಲಿ ಕೂಡ ನಡೆದಿಲ್ಲ ಯಾರು ಪ್ರಚೋದನೆ ಕೊಟ್ಟರು? ಯಾರು ಅವಕಾಶ ಮಾಡಿಕೊಟ್ಟರು? ನನ್ನ ಹತ್ತಿರ ಚಾರ್ಜ್‌ಶೀಟ್‌ಗಳು ಇದೆ ಎಲ್ಲಾ ಚಾರ್ಜ್‌ಶೀಟ್‌ಗಳಲ್ಲಿ ಕೂಡ ಅಲ್ಪಸಂಖ್ಯಾತರೆ ಅಪರಾಧಿಗಳು ಅವರ ಮನೆಗಳಿಗೆ ನುಗ್ಗಿದ್ದಾರೆ, ಹೊಡೆದಿದ್ದಾರೆ ಹಾಸನದ ಹುಡುಗ private company ಯಲ್ಲಿ ಕೆಲಸ ಸಿಗುತ್ತದೆ ಎಂದು ಹುಡುಕಿಕೊಂಡು marks card ತೆಗೆದುಕೊಂಡು ಬಂದರೆ ಅವನಿಗೆ bullet ಈ ಕಡೆಯಿಂದ ಆ ಕಡೆಗೆ ತೂರಿಕೊಂಡು ಹೋಗಿದೆ ಅವನಿಗೂ ಇದಕ್ಕೂ ಏನೂ ಸಂಬಂಧವೆ ಇಲ್ಲ ನಾನು ಬೋರಿಂಗ್ ಆಸ್ಪತ್ರೆಗೆ ಹೋಗಿ ನೋಡಿದೆ ಇಂತಹ ಪರಿಸ್ಥಿತಿಯಲ್ಲಿ

ಅಧ್ಯಕ್ಷರು ಎಲ್ಲಾ ಚಾರ್ಜ್‌ಶೀಟ್‌ನಲ್ಲಿ ಅಲ್ಪಸಂಖ್ಯಾತರನ್ನು ಹೊಣೆ ಮಾಡಿದ್ದಾರೆ ಎಂದರೆ ಬೆಂಗಳೂರಿನಲ್ಲಿರುವಂತಹ ಪೋಲೀಸರು ಎಲ್ಲಾ ಸಂಘ ಪರಿವಾರದ ಪ್ರಭಾವಕ್ಕೆ ಒಳಗಾಗಿದ್ದಾರೇನ್ರಿ?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಸರ್ಕಾರವೇ ಅವರ ಪರವಾಗಿ ನಿಂತಿದೆ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ನ್ಯಾಯಾಲಯದ ಸಂಕೀರ್ಣದ ಪಕ್ಕದಲ್ಲಿ ಇರುವಂತಹ Government collegeನ ಮೈದಾನದಲ್ಲಿ ಸಭೆ ನಡೆಸುವುದಕ್ಕೆ ಯಾವರೀತಿಯ ಒಪ್ಪಿಗೆ ಇರಲಿಲ್ಲ ಅದರ ಬಗ್ಗೆ ಹಿಂದಿನ ಸರ್ಕಾರದವರು ನ್ಯಾಯಾಲಯದ ಸಂಕೀರ್ಣದ ಪಕ್ಕದಲ್ಲಿರುವಂತಹ Government collegeನ ಮೈದಾನವನ್ನು ಇಂತಹ ಸಭೆ ಸಮಾರಂಭ ಗಳಿಗೆ ಕೊಡಬಾರದು ಎಂದು ನಿರ್ಧಾರ ಮಾಡಿತ್ತು ಆದರೆ ಮಾನ್ಯ ಶೀರಾಮರೆಡ್ಡಿಯವರು ನನ್ನ ಹತ್ತಿರ ಬಂದು ನಾವು ಒಂದು ಸಭೆಯನ್ನು ನಡೆಸುತ್ತಿದ್ದೇವೆ ನಮ್ಮದು ರ್ಯಾಲಿ ಇದೆ ನಾವು ಅಲ್ಲಿಯೇ ಮಾಡಬೇಕೆಂದು ನಿರ್ಧಾರ ಮಾಡಿದ್ದೇವೆ ಅದಕ್ಕೆ ನೀವು ಒಪ್ಪಿಗೆ ಕೊಡಬೇಕೆಂದು ಕೇಳಿಕೊಂಡರು ಆಗ ಇದು ಒಂದು exception ಎಂದು ಮಾಡಿ, ಆಯಿತು ತಾವು ನಡೆಸಿ ಎಂದು ಹೇಳಿ ಅವತ್ತಿನ ದಿವಸ ನಿಮಗೆ permission ಕೊಟ್ಟೆವು ನಿಮಗೆ ಬೇಕಾದಂತಹ ಬಂದೋಬಸ್ತನ್ನು ಕೊಟ್ಟೆವು ಹಾಗಾದರೆ ಸರ್ಕಾರ communistರ ಪರವಾಗಿದೆ ಎಂದು ಯಾರಾದರೂ ನಮಗೆ ದೂರುತ್ತಾರಾ? ನಾವು ಎಲ್ಲವನ್ನು ಕೂಡ ಸರಿಯಾದಂತಹ ರೀತಿಯಲ್ಲಿ ವರ್ತಿಸಿದ್ದೇವೆ ತಾವು ಸರ್ಕಾರವೇ ಅವರ ಪರವಾಗಿ ನಿಂತಿದೆ ಎಂದರೆ ಏನರ್ಥ? ಹಾಗಾದರೆ ನಿಮ್ಮ ಸರ್ಕಾರ ಸಿಂಗೂರ್ ಟಾಟಾ ಅವರ ಪರವಾಗಿ ನಿಂತುಕೊಂಡಿದೆ ಅಲ್ಲವೇ? ಅದು ಮಾತ್ರ ಬಹಳ ಒಳ್ಳೆಯದಲ್ಲ? ಏನು ಮಾತನಾಡುತ್ತೀರಿ?

ಶ್ರೀ ಜಿ ವಿ ಶೀರಾಮರೆಡ್ಡಿ. ನಾವು Central college ground ನಲ್ಲಿ permission ಕೇಳಿದೆವು ನಾವು ಅವತ್ತು 50 ಸಾವಿರ ಜನ ಇದ್ದೆವು ಒಂದೇ ಒಂದು ಗಲಾಟೆ ನಡೆದಿದ್ದರೆ ನೀವು ಹೇಳಿ

ಶ್ರೀ ಎಂ ಪಿ ಪ್ರಕಾಶ್ ಬಂದೋಬಸ್ತು ಕೊಟ್ಟವರು ಯಾರು? Permission ಕೊಟ್ಟವರು ಯಾರು?

ಶ್ರೀ ಜಿ ವಿ ಶೀರಾಮರೆಡ್ಡಿ: ಬಂದೋಬಸ್ತು ಅವರು ಕೊಟ್ಟಿಲ್ಲವಾ? ಅವರಿಗೆ permission ಕೊಟ್ಟಿಲ್ಲವಾ?

ಶ್ರೀ ಎಂ ಪಿ ಪ್ರಕಾಶ್. ನಾವು permission ಕೊಟ್ಟಿದ್ದೇವೆ

ಶ್ರೀ ಜಿ ವಿ ಶೀರಾಮರೆಡ್ಡಿ: ಹೌದು, ಹಾಗಾದರೆ ಅಲ್ಲಿ ಏಕಾಯಿತು? ಇಲ್ಲಿ ಏಕಾಗಲಿಲ್ಲ? 50 ಸಾವಿರ ಜನರ ಮೆರವಣಿಗೆ ಇದ್ದಾಗ ಒಂದೇ ಒಂದು ಗಲಾಟೆಯಾಗಲಿಲ್ಲ ಅಲ್ಲಿ ಏಕೆ ಆಯಿತು?

ಶ್ರೀ ಎಂ ಪಿ ಪ್ರಕಾಶ್. ಆಮೇಲೆ ಈ ಸರ್ಕಾರ ಪ್ರಜಾಸತ್ತಾತ್ಮಕ ಗುಣದಲ್ಲಿ meeting ಮಾಡುವುದಕ್ಕೆ ನಾವು permission ಕೊಟ್ಟಿದ್ದೇವೆ

ಶ್ರೀ ಜಿವಿ ಶ್ರೀರಾಮರೆಡ್ಡಿ ನೀವು permission ಕೊಡಬಾರದು ಎಂದು ನಾನು ಹೇಳುತ್ತಿಲ್ಲ

ಶ್ರೀ ಎಂಪಿ ಪ್ರಕಾಶ್ ಅಲ್ಲ, ನೀವು ಸರ್ಕಾರ ಅವರ ಪರವಾಗಿದೆ ಎಂದು ಹೇಳುವುದು ಸರಿಯಾದುದಲ್ಲ

ಶ್ರೀ ಜಿವಿ ಶ್ರೀರಾಮರೆಡ್ಡಿ ನಾನು ಹೇಳುತ್ತಿರತಕ್ಕಂಥಾದ್ದು, 19 ನೇ ತಾರೀಖು ಘಟನೆಗಳು ನಡೆದಿದೆ 20ನೆ ತಾರೀಖು ಬೆಂಗಳೂರಿನಲ್ಲಿ ಘಟನೆಗಳು ನಡೆದಿದೆ ಘಟನೆಗಳು ನಡೆದಿರತಕ್ಕಂಥ

ಶ್ರೀ ಎಂಪಿ ಪ್ರಕಾಶ್. ಸರ್ಕಾರವೇ ಅವರ ಪರವಾಗಿದೆ ಎಂದರೆ ಏನು ಹಾಗೆಂದರೆ?

ಶ್ರೀ ಜಿವಿ ಶ್ರೀರಾಮರೆಡ್ಡಿ ಹೌದು

ಶ್ರೀ ಎಂಪಿ ಪ್ರಕಾಶ್ ಹಾಗಾದರೆ ನಿಮ್ಮ ಸರ್ಕಾರ ಟಾಟಾ ಪರ ಇದೆಯಾ?

ಶ್ರೀ ಜಿವಿ ಶ್ರೀರಾಮರೆಡ್ಡಿ ಹೌದು Industries ಪರವಾಗಿ ಇದ್ದೇವೆ ಟಾಟಾ ಪ್ರಶ್ನೆ ಅಲ್ಲ

ಶ್ರೀ ಎಂಪಿ ಪ್ರಕಾಶ್ ಬಂಡವಾಳಶಾಹಿಗಳ

(ಗೊಂದಲ)

ಶ್ರೀ ಜಿವಿ ಶ್ರೀರಾಮರೆಡ್ಡಿ ಯಾರು? ನೋಡಿ ಆ ರೀತಿ ಮಾತನಾಡಿದರೆ ನನಗೂ ಮಾತನಾಡುವುದಕ್ಕೆ ಬರುತ್ತದೆ

ಶ್ರೀ ಎಂಪಿ ಪ್ರಕಾಶ್. ನೋಡಿ ನೀವು ಮಾತನಾಡಿದ್ದು ಸರಿಯಲ್ಲ

ಶ್ರೀ ಜಿವಿ ಶ್ರೀರಾಮರೆಡ್ಡಿ. ಹೌದು, ನಾನು ಹೇಳುತ್ತಿದ್ದೇನೆ, ಪೊಲೀಸ್‌ನವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾರ ಪರವಾಗಿ ವರ್ತನೆ ಮಾಡಿದ್ದಾರೆ? ಪೊಲೀಸ್‌ನವರು ಯಾವ ಇಲಾಖೆ ಪರವಾಗಿದ್ದಾರೆ? ಅಲ್ಲಿ ಹೇಗೆ ವರ್ತನೆ ಮಾಡಿದ್ದಾರೆ?

ಶ್ರೀ ಎಂಪಿ ಪ್ರಕಾಶ್ ನೀವು ನನ್ನ ಹತ್ತಿರ ಬಂದು ಮಂಗಳೂರಿನಲ್ಲಿ ನಾವು ಕೊಟ್ಟಿರುವಂತಹ statement ಪರವಾಗಿ ಅಭಿನಂದನೆ ಸಲ್ಲಿಸಿದ್ದೀರಿ

ಶ್ರೀ ಜಿವಿ ಶ್ರೀರಾಮರೆಡ್ಡಿ. ಹೌದು, ನಾವು ಇಲ್ಲ ಎಂದು ಹೇಳಿದೆವಾ? ಪೋಲೀಸ್ ಇಲಾಖೆಯವರು

ಶ್ರೀ ಎಂಪಿ ಪ್ರಕಾಶ್. ಏನು ಮಾತನಾಡುತ್ತೀರಿ? ವಿಫಲವಾಗಿರುವಂತಹ ವಿಚಾರವನ್ನು ಪ್ರಸ್ತಾಪ ಮಾಡಿ ಆದರೆ ಇಲ್ಲದ ಆಪಾದನೆಗಳನ್ನು ಮಾಡಬೇಡಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ನೋಡಿ, ನಾನಲ್ಲ ಹೇಳಿರತಕ್ಕಂಥಾದ್ದು, ನಿಮ್ಮ ಪೋಲೀಸ್ IG ಅವರು ಅವತ್ತು ಹೇಳಿದ್ದಾರೆ ನಾನು ಅಥವಾ ನೀವು ಅಲ್ಲ ಹೇಳಿರತಕ್ಕಂಥಾದ್ದು ಪೋಲೀಸ್ ಕಮ ತೆಗೆದುಕೊಂಡಿರುವುದಕ್ಕೆ ನಾವು ಮಾನ್ಯ ಪ್ರಕಾಶ್‌ರವರನ್ನು ಅಭಿನಂದಿಸುತ್ತೇವೆ ನಾವು ಇಲ್ಲ ಎಂದು ಹೇಳಲಿಲ್ಲ

ಅಧ್ಯಕ್ಷರು ಈಗ ಮಾನ್ಯ ಶ್ರೀರಾಮರೆಡ್ಡಿಯವರೆ, ಈ ತರಹ sweeping ಆಗಿ ಹೇಳತಕ್ಕಂದಾದ್ದು ಸರಿಯಲ್ಲ ಏಕೆಂದರೆ ಈ ಇಲಾಖೆ, ಈ ಸರ್ಕಾರ ಆ ರೀತಿ ಮಾಡುವುದಕ್ಕೆ ಆಗುವುದಿಲ್ಲ ಏನಾಗಿದೆಯೆಂದರೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ. ನಾನು sweeping ಆಗಿ ಹೇಳಿಲ್ಲ ನಾನು 11 ತಿಂಗಳಲ್ಲಿ ಎಲ್ಲಿ ಕೋಮುಗಲಭೆಗಳು ನಡೆದಿದೆ? ಯಾರ ಅಧಿಕಾರಾವಧಿಯಲ್ಲಿ ನಡೆದಿದೆ ಅದನ್ನೆ ನಾನು ಹೇಳುತ್ತಿರುವುದು 11 ತಿಂಗಳಲ್ಲಿ ಕೋಮುಗಲಭೆಗಳು ನಡೆದಿರುವುದನ್ನು ಪ್ರಸ್ತಾಪ ಮಾಡಿದ್ದೇನೆ 11 ತಿಂಗಳು ಅಧಿಕಾರ ನಡೆಸಿರುವಂತಹ ಸರ್ಕಾರದ ಜವಾಬ್ದಾರಿನಾ? ಅದಕ್ಕೆ ಯಾರ ಜವಾಬ್ದಾರಿ ಹಾಗಾದರೆ? ಹೌದು, ನಮ್ಮದು ಕಲ್ಲು ಹೊಡೆಸುವುದಕ್ಕೆ, ಬೆಂಕಿ ಹಚ್ಚುವುದಕ್ಕೆ ಜವಾವ್ದಾರಿ ಇದೆ ಎಲ್ಲರಿಗೂ ಈ ರಾಜ್ಯದಲ್ಲಿ ಜವಾಬ್ದಾರಿ ಇದೆ, ಯಾರಿಗೆ ಜವಾಬ್ದಾರಿ ಇಲ್ಲ ಹೌದು, ಅದನ್ನು ಹಾಳು ಮಾಡಿರತಕ್ಕಂಥಾದ್ದು ಯಾರು ಎಂದು ದೇಶಕ್ಕೆ ಗೊತ್ತಿದೆ ನಾವು ನೀವು ಹೇಳಬೇಕಾಗಿಲ್ಲ, ಯಾರಿಗೆ ಯಾರೂ certificate ಕೊಡಬೇಕಾಗಿಲ್ಲ ಅದರ ಬಗ್ಗೆ ಬೆಳಿಗ್ಗೆಯಿಂದ ಸಾಕಷ್ಟು ಚರ್ಚೆಯಾಗಿದೆ ಮಾನ್ಯ ವಸಂತ ಬಂಗೇರರವರು ಏನು ಹೇಳಿದರು ಎಂದು ಮಾನ್ಯ ಪ್ರಕಾಶ್‌ರವರಿಗೆ ಗೊತ್ತಿದೆ

ಅಧ್ಯಕ್ಷರು ಈಗ ಮುಗಿಸಿ, ನಿಮ್ಮದು time ಆಯಿತು

ಶ್ರೀ ಜಿ ವಿ ಶ್ರೀರಾಮರೆಡ್ಡಿ ಆದ್ದರಿಂದ ಈ ಕೋಮುಗಲಭೆಗಳನ್ನು ನಿಯಂತ್ರಣ ಮಾಡುವುದರಲ್ಲಿ ಎಲ್ಲರೂ ಕೂಡ ವಿಫಲರಾಗಿದ್ದಾರೆ ಈ ಮುಗ್ಧರಿಗೆ ಏನು ಅನ್ಯಾಯವಾಗಿದೆ ಅವರಿಗೆ ನ್ಯಾಯ ದೊರಕಬೇಕು ಆ ಮುಗ್ಧರ ಮೇಲೆ ಯಾರು case ಹಾಕಿದ್ದಾರೆ, ಆ case withdraw ಮಾಡಬೇಕು ಅಲ್ಲಿ ಯಾರು ಬಲಿಪಶುಗಳಾಗಿದ್ದಾರೆ ಅವರಿಗೆ ಪರಿಹಾರ ಕೊಡಬೇಕು ಪೋಲೀಸ್ ಅಧಿಕಾರಿಗಳಾಗಿರಲಿ ಯಾರೇ ಇರಲಿ ತಪ್ಪಿತಸ್ಥರು ಯಾರಿದ್ದಾರೆ ಅವರ ಮೇಲೆ ಕಮ ತೆಗೆದುಕೊಳ್ಳಬೇಕು Abettor, ನಿಮ್ಮ ಮಾನ್ಯ ಮುಖ್ಯಮಂತ್ರಿಗಳೆ ಹೇಳಿದ್ದಾರೆ, ಬಂದ್ ಸಂದರ್ಭದಲ್ಲಿ ಗಲಾಟೆಯಾದರೆ ಯಾವ ಸಂಘಟನೆ ಬಂದ್‌ಗೆ ಕರೆ ಕೊಟ್ಟಿರುತ್ತಾರೆ ಅವರನ್ನು ಜವಾಬ್ದಾರಿ ಮಾಡುತ್ತೇವೆ ಮಾನ್ಯ ಮುಖ್ಯಮಂತ್ರಿಗಳು ಹೇಳಿರುವಂತಹ ಹೇಳಿಕೆಯನ್ನು ನಾವು ಸ್ವಾಗತ

ಮಾಡುತ್ತೇವೆ ಯಾವ ಸಂಘಟನೆ, ಯಾವ ಸಂದರ್ಭದಲ್ಲಿ, ಯಾವುದಕ್ಕೆ ಕರೆ ಕೊಟ್ಟಾಗ ಗಲಾಟೆಗಳಾಗುತ್ತದೋ ಅವರನ್ನು ಜವಾಬ್ದಾರರನ್ನಾಗಿ ಮಾಡಿ ಅದನ್ನು ನಾವು ಒಪ್ಪುತ್ತೇವೆ ಆದುದರಿಂದ ಆ ರೀತಿ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿ ನಾನು ನನ್ನ ಮಾತನ್ನು ಮುಗಿಸುತ್ತೇನೆ

ಅಧ್ಯಕ್ಷರು. ಈಗ ಮಾನ್ಯ ಆರಗ ಜ್ಞಾನೇಂದ್ರ ಮಾತನಾಡಿ No, You cannot direct ಅವರನ್ನು ಕರೆದಿದ್ದೇನೆ ನೀವು ಮಾತನಾಡಿ ಆ ಕಡೆ ಈ ಕಡೆ ಎಲ್ಲಾ ಮಾತನಾಡಲಿ

ಶ್ರೀ ಆರಗ ಜ್ಞಾನೇಂದ್ರ(ತೀರ್ಥಹಳ್ಳಿ) ಮಾನ್ಯ ಅಧ್ಯಕ್ಷರೆ, ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು ತಾವು ಕೋಮುಗಲಭೆಯ ವಿಚಾರದಲ್ಲಿ ನಿಯಮ 69 ಕ್ಕೆ convert ಮಾಡಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ ಒಳ್ಳೆಯ ವಿಷಯವನ್ನು ತಂದಿದ್ದಾರೆ ಸಮಗ್ರವಾಗಿ ಇದು ವಸ್ತುನಿಷ್ಟವಾಗಿ ಇದರ ಬಗ್ಗೆ ಚರ್ಚೆಯಾಗುವುದಾದರೆ ಖಂಡಿತವಾಗಿ ಒಳ್ಳೆಯದು ಅದರಲ್ಲಿ ಏನೂ ತೊಂದರೆಯಿಲ್ಲ ಇಡೀ ರಾಜ್ಯಕ್ಕೆ ಈ ಸದನದಿಂದ ಒಂದು ಒಳ್ಳೆಯ message ಹೋಗುತ್ತದೆ ಈ ಚರ್ಚೆ ಆರೋಗ್ಯಕರವಾಗಿ ಆಗಬೇಕು ಈ ಚರ್ಚೆಯಲ್ಲಿ ಭಾಗವಹಿಸುತ್ತಾ ಒಂದು ರೀತಿ ರಾಜಕೀಯವಾಗಿ ಎಲ್ಲೋ ಒಂದು ಕಡೆ mileage ಪಡೆಯುವಂತಹ ಕೆಲಸಗಳನ್ನು ಯಾರೂ ಕೂಡ ಚರ್ಚೆಯಲ್ಲಿ ಮಾಡಬಾರದು ಸಂಘ ಪರಿವಾರ ಹಾಗೂ ಹಿಂದೂ ಸಂಘಟನೆಗಳನ್ನು ದೂಷಣೆ ಮಾಡುವಂಥಾದ್ದು ಅದು ಒಂದು fashion ಆಗಬಾರದು ನಾನು ಹೇಳುತ್ತೇನೆ, ಯಾರೇ ಅನ್ಯಾಯ ಮಾಡಿದರೂ ಅದನ್ನು ಖಂಡಿಸೋಣ ವಸ್ತುನಿಷ್ಟವಾಗಿ ಚರ್ಚೆ ಮಾಡೋಣ ಈ fashion ಗೆ ಹೋಗಿ ಇಡೀ ದೇಶದಲ್ಲಿ ಇವತ್ತು ಯಾವರೀತಿ ಕೋಮುಶಕ್ತಿಗಳು ಹಾಗೂ ಭಯೋತ್ಪಾದಕ ಶಕ್ತಿಗಳು ತಲೆ ಎತ್ತಿವೆ ಎನ್ನುವುದು ಎಲ್ಲರಿಗೂ ಗೊತ್ತಿದೆ ಬಹುಷ ಖಾಸಗಿಯಾಗಿ ನೀವು ಮಾತನಾಡುವಾಗಲೇ ಒಂದು ಮಾತನಾಡುತ್ತೀರಿ ಈ ರೀತಿ ಬಹಿರಂಗವಾಗಿ ಮಾತನಾಡುವಾಗಲೇ ಒಂದು ಮಾತನಾಡುತ್ತೇವೆ ಎಲ್ಲೋ ಒಂದು ಕಡೆ ಮಾತನಾಡುವಾಗ ಕೋಮುಗಲಭೆಗಳ ಬಗ್ಗೆ ಮಾತನಾಡುವಂತಹ ಧಾಟಿನಲ್ಲಿ ಅಲ್ಪಸಂಖ್ಯಾತರನ್ನು ಓಲೈಸುವಂತಹ, ಅಲ್ಪಸಂಖ್ಯಾತರ ಮೇಲೆ ಯಾರೋ ದೌರ್ಜನ್ಯ ಮಾಡಿದ್ದಾರೆ ಎಂದು ಹೇಳಿ, ಈ ರೀತಿ ಅಲ್ಪಸಂಖ್ಯಾತರು ಬಹುಸಂಖ್ಯಾತರು ಎಂದು ತರಲೇಬಾರದು ಗಲಭೆಯಲ್ಲಿ ಪ್ರಚೋದನೆ ಮಾಡತಕ್ಕಂಥವರು ಯಾರಿದ್ದಾರೆ, ಇದಕ್ಕಿದ್ದ ಹಾಗೆ ಪ್ರಚೋದಿತವಾಗಿ ಕಲ್ಲು ಹೊಡೆಯುವುದು, ಬೆಂಕಿ ಹಚ್ಚುವವರು ಯಾರಿದ್ದಾರೆ, ಅವರೆಲ್ಲರನ್ನು

ಸಮಗ್ರವಾಗಿ ಖಂಡಿಸೋಣ ಅದರಲ್ಲಿ ಯಾವ ತೊಂದರೆಯಿಲ್ಲ ಇದು ಎಲ್ಲಿಂದ ಹುಟ್ಟುತ್ತದೆ? ಈ ಗಲಭೆಗೆ ಕೇವಲ ನಮ್ಮ ದೇಶದ ಶಕ್ತಿಗಳು ಅಲ್ಲ ವಿದೇಶಿ ಶಕ್ತಿಗಳು ಸಾಕಷ್ಟು ಕೈವಾಡವನ್ನು ನಡೆಸಿವೆ ಮೊನ್ನೆ ಸಂಝೋತ ರೈಲಿಗೆ ಬೆಂಕಿ ಬಿತ್ತು ಎಷ್ಟು ಜನ ಗಾಯಗೊಂಡರು? ಎಷ್ಟು ಕುಟುಂಬಗಳು ಅನಾಥವಾದವು? ಅವರು ಯಾವ ಕೋಮಿನವರು ಎನ್ನುವುದು ಮುಖ್ಯವಾಗುವುದಿಲ್ಲ ಅಲ್ಲಿ ಬೆಂಕಿ ಹಚ್ಚಿದ ಅಥವಾ ಬಾಂಬ್ ಹಾಕಿದಂತಹ ಜನರನ್ನು ನಾವು ವಸ್ತುನಿಷ್ಟವಾಗಿ ಖಂಡಿಸಬೇಕಾಗುತ್ತದೆ ಇದರಲ್ಲಿ ಧೈರ್ಯ ತೆಗೆದುಕೊಳ್ಳಬೇಕಾಗುತ್ತದೆ

ಅಧ್ಯಕ್ಷರು ವಿದೇಶಿ ಶಕ್ತಿಗಳನ್ನು ದೂಷಣೆ ಮಾಡುವುದು ಒಂದು ಫ್ಯಾಷನ್ ಆಗಿಬಿಟ್ಟಿದೆಯಲ್ರಿ

ಶ್ರೀ ಆರಗ ಜ್ಞಾನೇಂದ್ರ ಫ್ಯಾಶನ್ ಅಲ್ಲ ಸಾರ್ ಈಗ ನಮ್ಮ ವಿಜ್ಞಾನ ಕೇಂದ್ರದಲ್ಲಿ ಮುಗ್ಧ ವಿಜ್ಞಾನಿಗಳನ್ನು ಹೊಡೆದು ಹಾಕಿದರು ಇದಕ್ಕೆ ಯಾರು ರಕ್ಷಣೆ ಕೊಟ್ಟರು? ಈ ದುಡ್ಡು ಎಲ್ಲಿಂದ ಬಂತು? ಇವೆಲ್ಲಾ ಕೂಡ ಈ ರಾಜ್ಯದಲ್ಲಿ ಹಾಗೂ ಈ ದೇಶದಲ್ಲಿ ಧರ್ಮದ ಹಾಗೂ ಇನ್ನೊಂದು ಆಧಾರದ ಮೇಲೆ ಆಶ್ರಯ ಪಡೆದಿದ್ದಾರೆ ವಿದೇಶಿ ammunitions ತಂದು ಸಂಗ್ರಹ ಮಾಡುತ್ತಾರೆ ವಿದೇಶಿ ಹಣ ಬರುತ್ತದೆ ಎಲ್ಲಿಂದ? ತೆಲಗಿ ಹಗರಣದಿಂದ ಹಿಡಿದು ಸಾವಿರಾರು ಕೋಟಿ ರೂಪಾಯಿಗಳ ಹಗರಣವಾಯಿತು ಇದು ಎಲ್ಲಿಂದ ಬರುತ್ತದೆ? ಏಕೆ ರಕ್ಷಣೆ ಕೊಟ್ಟರು? ಎಲ್ಲಾ ಗಲಭೆಗಳಿಗೆ ಈ ದುಡ್ಡು ಸಾಧನವಾಗುತ್ತದೆ ಇವತ್ತು ಇದರಿಂದಾಗಿ ನಮ್ಮ ಯಾವ ಶಕ್ತಿಗಳು ತಡೆಯುವುದಕ್ಕಾಗುವುದಿಲ್ಲ ಕೊನೆಯಲ್ಲಿ ನಾವು ಯಾರಿಗೆ ಹೇಳುತ್ತೇವೆ? ಸಂಘ ಪರಿವಾರದವರಿಗೆ ಹೇಳುವುದು ಇಲ್ಲವೆಂದರೆ ಪೊಲೀಸಿನವರಿಗೆ ಇಬ್ಬರಿಗೆ ಹೇಳುವುದು ಯಾರಿಗೆ ಬಯ್ಯಬೇಕು ಅವರಿಗೆ ಬಯ್ಯದೆ ಹೋದರೆ, ಗಟ್ಟಿ ಧ್ವನಿಯಲ್ಲಿ ನಾವು ಮಾತನಾಡದೆ ಹೋದರೆ, ಮಾನ್ಯ ಶ್ರೀ ರಾಮರೆಡ್ಡಿಯವರೆ ನೀವು ಮಾತನಾಡಿ ಸಂಘ ಪರಿಹಾರದವರಿಂದ ಯಾವುದಾದರೂ ಬಹಿರಂಗವಾಗಿ ಆಗಿದ್ದು, ಅದು ಕೇಸ್‌ನಲ್ಲಿ ಇದ್ದು, ಅವರ ಮೇಲೆ ಏನಾದರೂ allegation ಇದ್ದು, ಅದು prove ಆಗಿದ್ದರೆ, ಖಂಡಿತವಾಗಿ ಬೈಯಿರಿ, ನಮಗೆ ಏನು ತೊಂದರೆ ಇಲ್ಲ ಅದಕ್ಕೆ ನಾವು ಯಾರು ಕೂಡ witness ಆಗಿ ಕುಳಿತುಕೊಳ್ಳುವುದಕ್ಕೆ ತಯಾರಿಲ್ಲ ನಾನು ಬಹಳ ಪ್ರಾಮಾಣಿಕವಾಗಿ ಇದನ್ನು ಹೇಳುತ್ತೇನೆ ಆದರೆ ಸುಮ್ಮಸುಮ್ಮನೆ ಎಲ್ಲೊ ಒಂದು ಕಡೆ ಪ್ರಚೋದಿತರಾಗಿ ಮಾತನಾಡುವಂತಹ ಅಗತ್ಯ ಇಲ್ಲಿ ಇಲ್ಲ ಡಾ ಚಿತ್ತರಂಜನ್‌ರವರ ಕೊಲೆಯಾಯಿತು, ಅವರನ್ನು ಯಾವ ಶಕ್ತಿಗಳು ಕೊಲೆ ಮಾಡಿತು? ಭಟ್ಕಳದಲ್ಲಿ

ಇದ್ದಕ್ಕಿದ್ದ ಹಾಗೆ ವಿಗ್ರಹವನ್ನು ತೆಗೆದುಬಿಟ್ಟರು ಅದನ್ನು ಯಾರು ಕೂಡ ಎದ್ದು ಹೇಳಲಿಲ್ಲ ಆದರ ಬಗ್ಗೆ ತನಿಖೆಯಾಗಲಿ, ಅಲ್ಲಿ ವಿಗ್ರಹವನ್ನು ತೆಗೆದವರ ಮೇಲೆ ತನಿಖೆಯಾಗಲಿ, ಎಂದು ನಮಗೆ ಧೈರ್ಯವಾಗಿ ಮಾತನಾಡುವಂಥ ಧೈರ್ಯವಿಲ್ಲ ಎಲ್ಲೊ ಒಂದು ಕಡೆ ನಮ್ಮ ರಾಜಕಾರಣ, ಎಲ್ಲೋ ಒಂದು ಕಡೆ ನಮ್ಮ ಓಟು ಬ್ಯಾಂಕ್, ನಮ್ಮ ಪೊಲೀಸ್‌ನವರು ಗಲಭೆಗಳಲ್ಲಿ ಎಷ್ಟು ಜನರು ಸತ್ತರು? ಎಷ್ಟು ಜನರು ಹೊಡೆತಗಳನ್ನು ತಿಂದಿದ್ದಾರೆ? ಎಷ್ಟು ಜನರು ಕೈ,ಕಾಲುಗಳನ್ನು ಮುರಿಸಿಕೊಂಡಿದ್ದಾರೆ? ಈ ಎಲ್ಲವನ್ನು ಕೂಡ ಪೊಲೀಸ್‌ನವರ ಮೇಲೆ ಹೇಳುವಂಥಾದ್ದು ಅಲ್ಲ ಅದನ್ನು ಯಾರಿಗೆ ಹೇಳಬೇಕೋ ಅವರಿಗೆ ಹೇಳಬೇಕು ಇರಾಕ್ ದೇಶದಲ್ಲಿ ಸದ್ದಾಂ ಹುಸೇನ್ ಅನ್ನು ನೇಣಿಗೆ ಏರಿಸಿದರೆ, ನಮ್ಮ ರಾಜಕೀಯ ಶಕ್ತಿಗಳು ಅದರಲ್ಲಿ ಸೇರಿಕೊಂಡು, ಹುಡುಗರಿಗೆ ಪ್ರಚೋದನೆಯನ್ನು ಕೊಟ್ಟುಕೊಂಡು ಮೊನ್ನೆ ಬೆಂಗಳೂರಿನಲ್ಲಿ ಶಿವಾಜಿನಗರ ಹತ್ತಿಕೊಂಡು ಉರಿಯಿತಲ್ಲಾ, ಏಕೆ ಇದನ್ನು ಬಹಿರಂಗವಾಗಿ ಖಂಡನೆ ಮಾಡುವುದಿಲ್ಲ ಆದರ ಹಿಂದೆ ಯಾವ ಯಾವ ರಾಜಕಾರಣಿಗಳು ಇದ್ದರು? ಅದು ಹೊರ ಬರಬೇಕಾಗುತ್ತದೆ ಇದು ಹೊರಗಡೆ ಬರದೇ ಹೋದರೆ ನಮ್ಮ ಓಟು ಬ್ಯಾಂಕ್‌ಗಳು ಹಾಳಾಗುತ್ತದೆನೋ ಎಂದು ಮುಜುಗರ ಪಟ್ಟುಕೊಂಡು, ಒಳಂಗಿದೊಳಗೆ ಇವರು ಕೆಟ್ಟವರು ಎಂದು ಹೇಳುವುದು, ಪೊಲೀಸ್‌ನವರ ಮೇಲೆ ಹೇಳುವುದು, ಎಲ್ಲರ ಬಗ್ಗೆಯೂ ಕೂಡ ಹೇಳಬೇಕಾಗುತ್ತದೆ ಇದನ್ನು ಯಾರೂ ಮಾಡನಾಡದೇ ಹೋದರೆ ಕಷ್ಟವಾಗುತ್ತದೆ ಮಂಗಳೂರಿನಲ್ಲಿ ನಡೆದಿರುವಂತಹ ಘಟನೆ, ಅಲ್ಲಿ ಕೊಲೆಯಾಗಿರುವಂಥಾದ್ದು, ನಾವೆಲ್ಲರೂ ಮನುಷ್ಯರಲ್ಲವೇ? ಅದನ್ನು ನಾವು ಸರಿಯೆಂದು ಒಪ್ಪುವುದಾ? ಅದನ್ನು ಯಾರು ಮಾಡಿದ್ದಾರೆ? ಆದರ ಹಿನ್ನೆಲೆ ಏನು? ಇದು ಬಹಿರಂಗವಾಗಿ ಚರ್ಚೆಯಾಗಲಿ, ಅದು ವಸ್ತು ನಿಷ್ಟವಾಗಿ ಆಗಲಿ ನಾವು ಇಲ್ಲಿ ಮಾತನಾಡಿದ್ದು ಅಷ್ಟು ಕೂಡ ನಮ್ಮ ಮಾಧ್ಯಮಗಳ ಮೂಲಕ ಮಂಗಳೂರು ಜನರಿಗೆ ಗೊತ್ತಾಗುತ್ತದೆ ಅವರು ನೋವನ್ನು ಉಂಡವರು, ಅವರು ಗಲಭೆಯನ್ನು ಪ್ರತ್ಯಕ್ಷವಾಗಿ ಕಂಡಿರುವವರು ಅವರು ಏನು ಅಂದು ಕೊಳ್ಳುತ್ತಾರೆ? ಈ ರಾಜಕೀಯ ಮುಖವಾಡಗಳು, ಈ ರಾಜಕಾರಣಿಗಳ ಬಗ್ಗೆ ಹೇಸಿಗೆ ಪಟ್ಟುಕೊಳ್ಳುತ್ತಾರೆ ನಾವು ಇಲ್ಲಿ ಏನೇನೊ ಸುಳ್ಳು ಕಥೆಗಳನ್ನು ಸೃಷ್ಟಿ ಮಾಡಿಕೊಂಡು ಹೇಳುತ್ತಾ ಹೋಗಿ ಬಿಟ್ಟರೆ, ಬಹಿರಂಗವಾಗಿ ಬಹಳ ಗಡುಸಿನಿಂದ ಅಂತಹ ಪ್ರಕರಣಗಳನ್ನು ಖಂಡಂ ಮಾಡುವಂತಹ ಪ್ರಯತ್ನವನ್ನು ನಾವು ಇವತ್ತು ಮಾಡಬೇಕಾಗುತ್ತದೆ ಆನೇಕ ಕಡೆಗಳಲ್ಲಿ, ಇದು ಒಂದು ಕಡೆ

ಎಂದು ಅಲ್ಲ, ಈ ಕೋಮುಗಲಭೆಗಳು ಎಲ್ಲಿ ಸೃಷ್ಟಿಯಾಗುತ್ತದೆ? ಅವು ಯಾವ ರೀತಿಯಲ್ಲಿ ಸೃಷ್ಟಿಯಾಗುತ್ತದೆ? ಇದನ್ನು ಪ್ರಚೋಚನೆ ಮಾಡುವ ಜನ ಯಾರು? ಇದನ್ನು ಖಂಡಿತವಾಗಿ ಬಹಿರಂಗ ಪಡಿಸಲಿ, ಪೊಲೀಸ್‌ನವರು action ತೆಗೆದುಕೊಳ್ಳಲಿ, ಇದರಿಂದ ಯಾರಿಗೂ ಏನೂ ತೊಂದರೆ ಇಲ್ಲ ನಮ್ಮ ಹಿರಿಯರು ಮುಖ್ಯಮಂತ್ರಿಯಾಗಿದ್ದಂಥವರು, ಸದನದಲ್ಲಿ ಎದ್ದು ನಿಂತು ಮಂಗಳೂರಿನ ಉಸ್ತುವಾರಿ ಸಚಿವರ ಮೇಲೆ allegation ಮಾಡಿದರು ಅವರು ಹೇಳಿ ಕುಳಿತುಕೊಂಡು ಬಿಡುವುದು, ಅಲ್ಲಿಗೆ ಆಗಿ ಹೋಯಿತು, ಇಷ್ಟೆನಾ ನಮ್ಮ ಕರ್ತವ್ಯ? ಇದರಿಂದಾಗಿ ಯಾರ ಮೇಲೊ ಬೆರಳನ್ನು ತೋರಿಸುತ್ತಾ, ನಮ್ಮ ರಾಜಕಾರಣವನ್ನು ಭದ್ರ ಮಾಡಿಕೊಳ್ಳಬಹುದು, ನಮ್ಮ ರಾಜಕೀಯ ತೀಟೆಯನ್ನು ತೀರಿಸಿಕೊಳ್ಳಬಹುದೇ ಹೊರತು, ಇವತ್ತು electronic media ಇದೆ, ಗಲಭೆಯಾಗುವ ಸಂದರ್ಭಗಳಲ್ಲಿ electronic mediaದಲ್ಲಿ ಬಂದಿದೆ, ಯಾರ್‍ಯಾರು ಅದರಲ್ಲಿ ಭಾಗವಹಿಸಿದ್ದರು ಇವತ್ತು ಕಾರ್ಪೊರೇಷನ್ ಚೇರ್ಮನ್ ಭಾಗವಹಿಸಿದ್ದರೆಂಬುದನ್ನು ಇಲ್ಲಿ ಯಾರು ಹೇಳಿದಂಥಾದ್ದು ಅಲ್ಲ ಅದನ್ನು ಟಿ ವಿ ಯಲ್ಲಿ ಇಂಥ ಮನುಷ್ಯನೆಂದು ಆ ವ್ಯಕ್ತಿ ಮುಖವನ್ನು ರೌಂಡ್ ಮಾರ್ಕ್ ಮಾಡಿ ತೋರಿಸಿದರು ಅದನ್ನು ಇಲ್ಲವೆಂದು ಯಾರಾದರೂ ಹೇಳಲಿ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಮಾನ್ಯ ಅಧ್ಯಕ್ಷರೆ, ಒಂದು **clarification** ಮಾನ್ಯ ಸದಸ್ಯರು ಮಾತನಾಡುವಾಗ ಕಾರ್ಪೊರೇಷನ್ ಚೇರ್ಮನ್ ಎಂದು ಹೇಳಿದರು ಅದು ರೆಕಾರ್ಡ್‌ಗೆ ಹೋಗಬಾರದು

ಶ್ರೀ ಆರಗ ಜ್ಞಾನೇಂದ್ರ ಮಾನ್ಯ ಅಧ್ಯಕ್ಷರೆ, ಬೆಂಗಳೂರು ಮಹಾನಗರ ಪಾಲಿಕೆಯ ಅಧ್ಯಕ್ಷರು ಅವತ್ತು ಭಾಗವಹಿಸಿದ್ದರೆಂಬುದನ್ನು ಟಿ ವಿ ಯಲ್ಲಿ ತೋರಿಸಿದ್ದು ನಾವು ಇಲ್ಲಿ ಯಾರು ಹೇಳಿದಂಥಾದ್ದು ಅಲ್ಲ ಅವರು ತೋರಿಸಿರುವಂಥಾದ್ದನ್ನು ಅಲ್ಲಗಳೆಯುವಂಥಾದ್ದು, ಅವರನ್ನು ಸಮರ್ಥನೆ ಮಾಡುವುದಕ್ಕೆ ಹೋಗುವುದು ಇದು ಎಲ್ಲೊ ಒಂದು ಕಡೆ ಇಬ್ಬಗೆಯ ನೀತಿಯನ್ನು ನಾವು ತೋರಿಸುತ್ತಿದ್ದೇವೆ ನಾವು open ಆಗಿ discussion ಮಾಡೋಣ ಇಡೀ ಕರ್ನಾಟಕ ರಾಜ್ಯದಲ್ಲಿ ಶಾಂತಿ ನೆಲೆಸಲಿಯೆಂದು ಎಲ್ಲರ ಹೃದಯದಲ್ಲೂ ಇದೆ ಯಾರದೋ ರಕ್ತವನ್ನು ಚೆಲ್ಲಿ, ಯಾರದೋ ಪ್ರಾಣಹರಣವನ್ನು ಮಾಡಿ, ನಾವು ದೊಡ್ಡಸ್ತಿಕೆಯನ್ನು ಮಾಡಿಕೊಳ್ಳುವಂಥ, ನಾವು ಓಟು ಬ್ಯಾಂಕ್ ಅನ್ನು ಗಳಿಸಿಕೊಳ್ಳುವಂಥಾದ್ದು, ನಾವು ಸಂಘದಿಂದ ಬಂದಿರುವಂಥವರು ನಾನು ರಾಷ್ಟ್ರೀಯ ಸ್ವಯಂ ಸೇವಾ ಸಂಘದಲ್ಲಿ ಚಿಕ್ಕ ವಯಸ್ಸಿನಿಂದಲೂ ಪಳಗಿ ಬಂದಿರುವುದು ಆ ಸಂಘಟನೆಯು ಎಲ್ಲೂ ಕೂಡ

ಯಾರ ಮೈ ಮೇಲೆ ಹೋಗಿ, ಅಥವಾ ಪ್ರಚೋದನೆಯನ್ನು ಮಾಡಿ ಎಂದು ನಮಗೆ ಎಲ್ಲೂ ಕೂಡ ಹೇಳಿ ಕೊಡಲಿಲ್ಲ ನಾವು ಶಾಸಕರಾಗಿ ಇಷ್ಟು ಎತ್ತರಕ್ಕೆ ಬೆಳೆದಿದ್ದೇವೆ ಇವತ್ತಿಗೂ ಕೂಡ ತಾವು ಬಂದು ನಮ್ಮ ಕ್ಷೇತ್ರಗಳಲ್ಲಿ ನೋಡಿ, ನಾವೆಲ್ಲಾ ಅವರ ಜೊತೆಯಲ್ಲಿ ಚೆನ್ನಾಗಿ ಇದ್ದೇವೆ ನೀವು ಸಂಘಟನೆಗಳ ಮೇಲೆ ಏಕೆ ಅನವಶ್ಯಕವಾಗಿ ಪ್ರಚೋದನೆಯನ್ನು ಮಾಡುತ್ತೀರಿ? ಇವತ್ತು ಹಿಂದೂ ಸಮಾಜೋತ್ಸವವನ್ನು ಆಚರಿಸಿದರು ಇಡೀ ಹಿಂದೂ ಸಮಾಜ ಜಾತಿಯನ್ನು ಹೊಡೆದು ಇಟ್ಟಿದ್ದೇವೆ ಇವರು ಹಿಂದುಳಿದವರು, ಇವರು ಮುಂದುವರೆದವರು, ಎಂದು ಎಲ್ಲೋ ಒಂದು ಕಡೆ ಜಾತಿ ಎಂಬ ಅಡ್ಡಗೋಡೆಗಳನ್ನು ನಿರ್ಮಾಣ ಮಾಡಿದ್ದೇವೆ ಈ ದೇಶ ಬೇರೆ ಬೇರೆ ರಾಜಕೀಯದ ಹಿಡಿತದಲ್ಲಿ ಇದ್ದಾಗಲೂ ಕೂಡ, ದೇಶ ಒಂದಾಗಿತ್ತು ಅದು ಹೇಗೆಂದರೆ, ಸಾಂಸ್ಕೃತಿಕವಾಗಿ ಒಂದಾಗಿತ್ತು ಇವತ್ತು ಎಲ್ಲಿ ಆಗಿದೆ? ಜಮ್ಮು ಕಾಶ್ಮೀರವೇ ಬೇರೆಯಾಗುತ್ತಿದೆ ಬೇರೆ ಬೇರೆ ರಾಜ್ಯಗಳೂ ಬೇರೆ ಬೇರೆಯಾಗಿ ಹೊರಟು ಹೋಗುತ್ತಿವೆ ನಮ್ಮ ಈ ಪ್ರಚೋದನೆಯಿಂದಾಗಿ, ನಮ್ಮ ಈ cynic ತನದಿಂದಾಗಿ, ಈ ವಸ್ತುನಿಷ್ಠತನದಿಂದ ನಾವು ಚರ್ಚೆ ಮಾಡುವ ಪ್ರಯತ್ನವನ್ನು ದಯವಿಟ್ಟು ಮಾಡೋಣ ಕೋಮು ಗಲಭೆಯ ಬಗ್ಗೆ ಯಾರು ಪ್ರಚೋದನೆಯನ್ನು ಮಾಡಿದ್ದಾರೆ, ಅದನ್ನು ನಾವು ಸಾಮೂಹಿಕವಾಗಿ ಖಂಡನೆ ಮಾಡುತ್ತೇವೆ ನಮ್ಮ ಪೊಲೀಸರ ಬಗ್ಗೆ ದೂರುವುದಲ್ಲವೇ ಅಲ್ಲ ನಮ್ಮ ಪೊಲೀಸ್‌ನವರು ಎಲ್ಲೊ ಒಂದು ಕಡೆ ನಿಯಂತ್ರಣಕ್ಕೆ ತಂದರು ನಾನು ನಮ್ಮ ಪೊಲೀಸ್ ಇಲಾಖೆಯನ್ನು ಅಭಿನಂದಿಸುತ್ತೇನೆ ಮಾನ್ಯ ಜಿ ವಿ ಶ್ರೀರಾಮರೆಡ್ಡಿಯವರು ಕೂಡ ಅಭಿನಂದಿಸುತ್ತಾರೆ ಹಿಂದೆ 8, 10 ತಿಂಗಳುಗಳ ಕಾಲ ಹತ್ತಿ ಉರಿಯುತ್ತಿತ್ತು ಇವತ್ತು ಪೊಲೀಸ್ ಇಲಾಖೆ ಸಮರ್ಥವಾಗಿ ಇದೆ ಅವರು ಯಾರನ್ನು ಬೇಕಾದರೂ ಜೈಲಿನೊಳಗೆ ಹಾಕಲಿ, ಯಾರಿಗೆ ಬೇಕಾದರೂ ಹೊಡೆಯಲಿ, ಯಾರನ್ನು ಬೇಕಾದರೂ ತೆಗೆದುಕೊಂಡು ಹೋಗಿ ಇಡಲಿ ಆದರೆ ಮುಗ್ಧರನ್ನು ಆ ರೀತಿ ಮಾಡಬಾರದೆಂದು ನಮ್ಮೆಲ್ಲರ ಕಳಕಳಿ ಇದೆ ಆದರೆ ಅವರು control ಮಾಡಿರುವಂಥ ಸ್ಥಿತಿಯನ್ನು ಎಲ್ಲಾದರೂ ಒಂದು ಕಡೆ ನಾವು ಅಭಿನಂದಿಸಬೇಕಾಗುತ್ತದೆ, ನಮ್ಮ ಇಡೀ ಪೊಲೀಸ್ ಇಲಾಖೆ demoralize ಆಗಬಾರದು ಅವರು ತಪ್ಪು ಮಾಡಿದರೆ, ನಾವು ಖಂಡಿತವಾಗಿ ತಪ್ಪು ಎಂದು ಹೇಳೋಣ ಆದರೆ ಅವರು ಒಳ್ಳೆಯ ಕೆಲಸವನ್ನು ಮಾಡಿದಾಗ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀ ಜೀವರಾಜ್‌ರವರು ಇಲ್ಲಿ ಕುಳಿತುಕೊಂಡಿದ್ದಾಗ ಯಾರೋ ಪೊಲೀಸ್‌ನವರು

ನನಗೆ ಮಾತನಾಡುವುದಕ್ಕೆ ಬಿಡಲಿಲ್ಲ, ಹೊಡೆದ ಎಂದು ಅವನ ಮೇಲೆ privilege move ಆಗಿತ್ತಲ್ಲಾ

ಶ್ರೀ ಆರಗ ಜ್ಞಾನೇಂದ್ರ ಖಂಡಿತವಾಗಿ ಮಾಡಿದ್ದ, ಮಾನ್ಯ ಜೆ ಸಿ ಮಾಧುಸ್ವಾಮಿಯವರೆ, ನಾನು ಏನು ಹೇಳಿದೆ? ಅವರು ಒಳ್ಳೆಯ ಕೆಲಸವನ್ನು ಮಾಡಿದಾಗ ನಾವು ಬೆನ್ನು ತಟ್ಟದೇ ಹೋದರೆ, ಅವರು ಏನು ಯಂತ್ರಗಳೇ, ಅವರು ಭಾವನಾತ್ಮಕವಾಗಿ ಇರುವಂಥವರು ನಾನು ಪಕ್ಕದ ಕ್ಷೇತ್ರದವನು

ಶ್ರೀ ಎಸ್ ರಾಜೇಂದ್ರನ್ ತಾವು ಹಾಗೆ ಹೇಳಲಿಲ್ಲ ತಾವು ಹೇಗೆ ಹೇಳಿದ್ದೀರೆಂದರೆ, ನಮ್ಮ ರಾಜ್ಯದಲ್ಲಿರುವ ಪೊಲೀಸ್‌ನವರೆಲ್ಲಾ ಬಹಳ ಒಳ್ಳೆಯವರು, ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆಂದು ಹೇಳಿದ್ದೀರಿ ಡಾ ಚಿತ್ತರಂಜನ್‌ರವರ ಕೊಲೆಯಾದ ಸಂದರ್ಭದಲ್ಲಿ ಪೊಲೀಸ್‌ನವರೆ ಸರಿ ಇಲ್ಲವೆಂದು ಹೇಳಿಲ್ಲವೇ?

ಶ್ರೀ ಆರಗ ಜ್ಞಾನೇಂದ್ರ ನಾನು wholesale ಆಗಿ ಮಾತನಾಡುವುದಕ್ಕೆ ಹೋಗುವುದಿಲ್ಲ

ಅಧ್ಯಕ್ಷರು ಅಯಿತು, ಮಾತನಾಡಿ ಬೇಗ ಮುಗಿಸಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಡಾ ಚಿತ್ತರಂಜನ್‌ರವರ ಕೊಲೆಯಾದಂಥ ಸಂದರ್ಭದಲ್ಲಿ ತಾವು ಮಾಡಿದಂಥ ಭಾಷಣದ ರೆಕಾರ್ಡ್ ಅನ್ನು ತೆಗೆಸಿ ನೋಡಿ, ತಾವು ಆಗ ಏನು ಹೇಳಿದ್ದೀರೆಂಬುದನ್ನು ನೋಡಿ ಈಗ ವಿಪ್ ಇದ್ದಾರಲ್ಲಾ, ಅವರು ಇಲ್ಲಿ privilege motion ಅನ್ನು move ಮಾಡಿದ್ದಾಗ, ನೀವೆಲ್ಲಾ ಏನು ಮಾತನಾಡಿದ್ದೀರೆಂಬುದನ್ನು ರೆಕಾರ್ಡ್ ತೆಗೆಸಿ ನೋಡಿ

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ. ಮಾನ್ಯ ರೇಣುಕಾಚಾರ್ಯರವರು ಎಸ್ ಪಿ ಯವರ ಬಗ್ಗೆ ಏನು ಮಾತನಾಡಿದ್ದಾರೆಂಬುದನ್ನು ತೆಗೆಸಿ ಹೇಳಿ

ಶ್ರೀ ಆರಗ ಜ್ಞಾನೇಂದ್ರ ನಾವು ಹೇಳಿದ್ದೇವೆ, ಇಲ್ಲವೆಂದು ಹೇಳುವುದಕ್ಕೆ ಆಗುತ್ತದಾ, ಅದು ರೆಕಾರ್ಡ್ ಆಗಿದೆ

ಶ್ರೀ ಡಿ ಎನ್ ಜೀವರಾಜ್ ತಮಗೆ ನಾನು ಅದಕ್ಕೆ ಧನ್ಯವಾದವನ್ನು ಹೇಳುತ್ತೇನೆ ನನ್ನ privilegeಗೆ ತಾವೆಲ್ಲರೂ ಸಹಕಾರವನ್ನು ಕೊಟ್ಟಿದ್ದೀರಿ ನನ್ನನ್ನು ಹನ್ನೊಂದು ದಿವಸಗಳು ಜೈಲಿನಲ್ಲಿ ಇಡಲಾಗಿತ್ತು ಅವತ್ತು, ಇವತ್ತು ಪೊಲೀಸ್‌ನವರ ಬಗ್ಗೆ ಹೇಳುತ್ತಿರುವವರೆಲ್ಲಾ ಅವತ್ತು ಪೊಲೀಸರು ಸರಿ ಇದ್ದಾರೆಂದು ಏನು ಹೇಳಿರಲಿಲ್ಲ ಅದಕ್ಕೆ ನಾನು ಧನ್ಯವಾದವನ್ನು ಹೇಳುತ್ತೇನೆ

ಶ್ರೀ ಆರಗ ಜ್ಞಾನೇಂದ್ರ ಮಾನ್ಯ ಅಧ್ಯಕ್ಷರೆ, ನಾನು ಈಗಲೂ ಕೂಡ wholesale ಆಗಿ ಅಲ್ಲ ನಾನು ಇತ್ತೀಚೆಗೆ ನಡೆದಂಥ ಕೋಮು ಗಲಭೆಗಳಲ್ಲಿ ಪೊಲೀಸರು ಹದ್ದು ಬಸ್ತಿಗೆ ತಂದಿರುವಂಥಾದ್ದನ್ನು, controlಗೆ ತಂದಿರುವಂಥಾದ್ದನ್ನು, ಹೆಚ್ಚು ಸಾವು ನೋವು ಆಗದಂಥ ರೀತಿಯಲ್ಲಿ ತಡೆದಿರುವಂಥಾದ್ದನ್ನು, ಮೊನ್ನೆ ಅವರು ಸರಿಯಾದ ರೀತಿಯಲ್ಲಿ ಇಲ್ಲಿ ವ್ಯವಹಾರವನ್ನು ಮಾಡದೇ ಹೋಗಿದ್ದರೆ, ಬೆಂಗಳೂರಿನ ಶಿವಾಜಿನಗರದಲ್ಲಿ ಇನ್ನೇನೋ ಇರುತ್ತಿತ್ತು ಆದರ ಹಿಂದಕ್ಕೆ ಬೇರೆ ಬೇರೆ ಶಕ್ತಿಗಳು ಇತ್ತೆಂಬುದು ಎಲ್ಲರಿಗೂ ಗೊತ್ತಿದೆ ನಿಮಗೂ ಗೊತ್ತಿದೆ, ನಮಗೂ ಗೊತ್ತಿದೆ ಆದರೆ ಅದನ್ನು ಅಲ್ಲಿ ಅವರು controlಗೆ ತಂದಿದ್ದಾರೆ ಅವರು ತಪ್ಪು ಮಾಡಿದಾಗ ನಾವು ತಪ್ಪೆಂದು ಹೇಳೋಣ ಆದರೆ ಒಳ್ಳೆಯ ಕೆಲಸಗಳನ್ನು ಮಾಡಿದಾಗ ನಾವು ಅಭಿನಂದಿಸುವ ಕೆಲಸವನ್ನು ಮಾಡಬೇಕಾಗುತ್ತದೆ ಕೋಮು ಗಲಭೆಗಳನ್ನು ಹತ್ತಿಕ್ಕುವುದರಲ್ಲಿ ಸರಿಯಾದ ರೀತಿಯಲ್ಲಿ ಇದನ್ನು ತಂದಿದ್ದಾರೆ ನನ್ನ ವಿನಂತಿ ಇದೆ, ನಮ್ಮ ಆನೇಕ ಶಾಸಕ ಮಿತ್ರರು ಹೇಳಿದ್ದಾರೆ ಸಂಘ ಪರಿವಾರಕ್ಕೆ ದುರುದ್ದೇಶಪೂರ್ವಕವಾಗಿ ದೂಷಣೆ ಮಾಡುವಂಥ ಚಟವನ್ನು ನಮ್ಮ ಮೈಗೆ ಅಂಟಿಸಿಕೊಳ್ಳುವುದು ಬೇಡ ಈ ಸಂಘ ಪರಿವಾರಗಳು ಪವಿತ್ರವಾದ ಸಂಘಟನೆಯಾಗಿದೆ ಅದು ನಮ್ಮಲ್ಲೆರ ಭಾವನೆಗಳಿಗೆ ಧಕ್ಕೆಯಾಗುತ್ತದೆ ನಾವೆಲ್ಲರೂ ಅದರಲ್ಲಿ ಬೆಳೆದು ಬಂದಿದ್ದೇವೆ ಇವತ್ತು ಇಲ್ಲಿರುವಂಥ ಆನೇಕ ಶಾಸಕರು ಸಂಘಟನೆಗಳಿಂದ ಬೆಳೆದು ಇಷ್ಟು ಎತ್ತರಕ್ಕೆ ಆಗಿ, ಜನರು ನಮ್ಮನ್ನು ಗೆಲ್ಲಿಸುವ ಹಾಗಿದೆಯೆಂದರೆ, ನಮ್ಮ ನಡವಳಿಕೆಗಳನ್ನು ಆ ಸಂಘಟನೆ ತಿದ್ದಿದೆ ನಮ್ಮ ನಡವಳಿಕೆಗಳನ್ನು ಸರಿಮಾಡಿದೆ ಅದುದರಿಂದ ನೀವು ಏನಾದರೂ ಹೇಳಿದರೆ, ನಮ್ಮ ಮನಸ್ಸಿಗೆ ಸ್ವಲ್ಪ ನೋವು ಆಗುತ್ತದೆ ನಾವು ಅಂಥಾದ್ದನ್ನು ಪ್ರತಿಭಟನೆ ಮಾಡುವುದು ಅನುವಾರ್ಯವಾಗುತ್ತದೆ ಅದುದರಿಂದ ಕೋಮು ಗಲಭೆಗಳ ಬಗ್ಗೆ ವಸ್ತುನಿಷ್ಠವಾಗಿ ಚರ್ಚೆ ನಡೆಯಲಿ, ಅದಕ್ಕೆ ನಮ್ಮದು ಬೆಂಬಲವಿದೆಯೆನ್ನುವ ಮಾತನ್ನು ಹೇಳುತ್ತಾ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟದ್ದಕ್ಕೆ ತಮಗೆ ಧನ್ಯವಾದಗಳನ್ನು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ(ಬ್ರಹ್ಮಾವರ) ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀರಾಮರೆಡ್ಡಿಯವರು, ಇತರರು ಮತ್ತು ನಾವು ಸೇರಿ ಕೊಟ್ಟಿರುವ ಸೂಚನೆಯಲ್ಲಿನ ವಿಷಯವು ಅನೇಕ ವರ್ಷಗಳಿಂದ ನಡೆದುಕೊಂಡು ಬಂದಂಥಾದ್ದು ಪ್ರಥಮವಾಗಿ ನಾನು ಬೆಂಗಳೂರಿನಿಂದಲೇ ಪ್ರಾರಂಭಿಸುತ್ತೇನೆ

ಮಾನ್ಯ ಶ್ರೀರಾಮರೆಡ್ಡಿಯವರು ಆ ವಿಷಯದಿಂದ ಮುಕ್ತಾಯ ಮಾಡಿದರು ಸದ್ದಾಂ ಹುಸೇನ್‌ರವರು ಸತ್ತ 20 ದಿವಸಗಳ ನಂತರ ಆ ಸಭೆಯನ್ನು ಮಾಡುವ ಅವಶ್ಯಕತೆ ಇತ್ತೇ? ಅದರ ಔಚಿತ್ಯವೇನು, ಎಂದು ಕೇಳುವುದರ ಮೂಲಕವೇ ಪ್ರಾರಂಭವನ್ನು ಮಾಡುತ್ತೇನೆ ಅದು ರಾಜ್ಯದ ಬೇರೆ ಯಾವುದೇ ಭಾಗದಲ್ಲಿಯೂ ನಡೆದಿಲ್ಲ ಬೆಂಗಳೂರಿನಲ್ಲಿ ಮಾತ್ರ ನಡೆದಂಥಾದ್ದು ಇದು ಇದನ್ನು ಏಕೆ ಮಾಡಿದರು? ಅದರಿಂದ ಏನೇನು ಘಟನೆಗಳು ನಡೆದವು? ಅದರಿಂದ ಯಾರು ತೊಂದರೆಗೊಳಗಾದರು, ಎನ್ನುವುದರ ಬಗ್ಗೆಯೂ ಬಹಳ ದೀರ್ಘವಾದ ಚರ್ಚೆಯಾಗಬೇಕು ತಾವು ಅದಕ್ಕೆ ಸಮಯವಿಲ್ಲ ಎಂದು ಹೇಳುತ್ತೀರಿ ಅದರ ಬಗ್ಗೆ ದೂಷಣೆಯನ್ನು ಬೇರೆಯವರಿಗೆ ಮಾಡಲಿಕ್ಕಿಲ್ಲ ಸಚಿವರುಗಳೇ ಹೋಗಿದ್ದರು ನಾನು ಸಚಿವರ ಹೇಳಿಕೆಯನ್ನು ನೋಡಿದ್ದೇನೆ, ಪೊಲೀಸಿನವರ ಮೇಲೆಯೇ ಅವರು ಹೇಳಿಕೆಯನ್ನು ಕೊಟ್ಟಿದ್ದಾರೆ ಇಲ್ಲಿ ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದರೆ ತಪ್ಪಾಗುತ್ತದೆ, ಆದರೆ ಸಚಿವರು ಹೇಳಿಕೆಯನ್ನು ಕೊಟ್ಟಿರುವ ಬಗ್ಗೆ ಮಾನ್ಯ ಗೃಹ ಸಚಿವರು ಏನು ಹೇಳುತ್ತಾರೆ ಎಂದು ನಾನು ಕೇಳುತ್ತೇನೆ ಮಾನ್ಯ ಇಕ್ಬಾಲ್ ಅನ್ಸಾರಿಯವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ ಪೊಲೀಸಿನವರೇ ತಪ್ಪು ಮಾಡಿದ್ದಾರೆ, ಅದರಿಂದಲೇ ಇದೆಲ್ಲಾ ಆಯಿತು ಎಂದು ಹೇಳಿಕೆ ಕೊಟ್ಟಿದ್ದಾರೆ ತಮ್ಮ ಮುಖಾಂತರ ಸರ್ಕಾರವನ್ನು ಕೋರಿಕೊಳ್ಳುವುದೇನೆಂದರೆ, ಮುಂದಿನ ದಿನಗಳಲ್ಲಿ ಯಾವುದೇ ಸಭೆ ಸಮಾರಂಭಗಳನ್ನು ಮಾಡಲಿ, ಅದು ಜಾತಿಯದ್ದಾಗಿರಲಿ, ಧರ್ಮದ್ದಾಗಿರಲಿ, processionಅನ್ನು ಮಾಡಲು ಬಿಡಬಾರದು ಆಗ ಮಾತ್ರ ಇಂಥ ಗಲಾಟೆಗಳು ನಿಲ್ಲುವಂಥಾದ್ದು ಆಗುತ್ತದೆ ಯಾವಾಗಲೂ ಗಲಾಟೆಗಳಾಗುವುದು processionಅನ್ನು ಮಾಡಲು ಅವಕಾಶ ಕೊಟ್ಟಾಗ CPM ನವರು ಮಾಡಿದ್ದರ ಬಗ್ಗೆ ಮಾನ್ಯ ಪ್ರಕಾಶ್‌ರವರು ಹೇಳಿದರು ಹೌದು, CPMನವರು ಮಾಡಿದಾಗ ಅಲ್ಲಿ ಯಾವುದೊಂದೂ ಗಲಾಟೆಯೂ ಆಗಲಿಲ್ಲ ಅದು political ಅದು ಒಂದು ಜಾತಿಗೆ ಸಂಬಂಧಪಟ್ಟಂಥಾದ್ದಲ್ಲ, ಧರ್ಮಕ್ಕೆ ಸಂಬಂಧಪಟ್ಟಂಥಾದ್ದಲ್ಲ ಆದ್ದರಿಂದಾಗಿ ಅಲ್ಲಿ ಏನೂ ಆಗಲಿಲ್ಲ ಅದೇ ರೀತಿ ಕಾಂಗ್ರೆಸ್‌ನವರು ರ್ಯಾಲಿ ಮಾಡಿದ್ದಾರೆ, ಜನತಾದಳದವರು ಮಾಡಿದ್ದಾರೆ ಎಲ್ಲಿಯೂ ಗಲಾಟೆಯಾಗಲಿಲ್ಲ ಧರ್ಮಕ್ಕೆ ಸಂಬಂಧಪಟ್ಟಂತೆ ಈ ರೀತಿಯಾದುದನ್ನು ಮಾಡಿದಾಗ ಗಲಾಟೆಯಾಗುವಂಥಾದ್ದು ಸರ್ವೇ ಸಾಮಾನ್ಯ ಎನ್ನುವುದು ಸರ್ಕಾರದ ಗಮನಲ್ಲಿದ್ದಾಗ, ಇನ್ನು ಮುಂದೆ ಇಂಥಾದ್ದಕ್ಕೆ ಎಲ್ಲಿಯೂ ಅವಕಾಶವನ್ನು ಕೊಡಬೇಡಿ ಎಂದು ಹೇಳುತ್ತಿದ್ದೇನೆ ಆಗ ಇಂಥ ಘಟನೆಗಳು ನಡೆಯುವುದಿಲ್ಲ

ಸದ್ದಾಂ ಹುಸೇನ್‌ರವರು ಸತ್ತದ್ದಕ್ಕೆ ಒಂದು ಸಭೆ, ಅದರ ಜೊತೆಗೆ ಅಂದೇ ಒಂದು ಹಿಂದೂ ಸಮಾವೇಶ ನಡೆದಿದೆ ಇದರಿಂದಾಗಿ ಒಂದು ದೊಡ್ಡ ಸಮಸ್ಯೆ ಉದ್ಭವವಾಗಿದೆ ಹಿಂದೂ ಸಮಾವೇಶವನ್ನು ಮಾಡಿದಂಥ ಸಂದರ್ಭ ಯಾವುದು, ಅದರ ಅಗತ್ಯವೇನಿತ್ತು, ಎನ್ನುವುದು ನನ್ನ ಪ್ರಶ್ನೆ ಮಾನ್ಯ ಇಕ್ಬಾಲ್ ಅನ್ಸಾರಿಯವರು ಮುಸ್ಲಿಂ ಎಂದು ಹೇಳಬೇಕಾದರೆ ಅವರಿಗೆ ಮುಸ್ಲಿಂ ಸಂಘಟನೆ ಬೇಕಾಗಿಲ್ಲ, ನಾನು ಹಿಂದೂ ಎಂದು ಹೇಳಲಿಕ್ಕೆ ನನಗೆ ಹಿಂದೂ ಸಂಘಟನೆ ಬೇಕಾಗಿಲ್ಲ Champions of Communal Forums ಏಕೆ ಬೇಕು? ಅಗತ್ಯವಿಲ್ಲವೆಂದು ಕಾಣುತ್ತದೆ ಎಲ್ಲ ಜನಗಳನ್ನು ಅವರವರಷ್ಟಕ್ಕೇ ಬಿಟ್ಟರೆ, ಅವರು ಸುಖವಾಗಿ ಎಲ್ಲರೊಂದಿಗೆ ಹೊಂದಿಕೊಂಡಿರುತ್ತಾರೆ ಎನ್ನುವ ಭಾವನೆ ನನ್ನದು ಮತ್ತು ಅನೇಕರದ್ದಾಗಿದೆ ಒಂದು ಗಲಾಟೆಯಾದಾಗ ಕೇವಲ್ ಒಂದು ಕೋಮಿಗೆ ಮಾತ್ರ ಸಮಸ್ಯೆ ಉದ್ಭವವಾಗುವುದಿಲ್ಲ ಆ ಭಾಗದಲ್ಲಿರುವ ಎಲ್ಲರಿಗೂ ಸಮಸ್ಯೆಯಾಗುತ್ತದೆ ಹಿಂದೂಗಳು ಪ್ರಾರಂಭ ಮಾಡಿದರೆ ಮುಸ್ಲಿಮ್ಮರಿಗೆ ಮಾತ್ರವಲ್ಲದೆ ಹಿಂದೂಗಳಿಗೂ ಸಮಸ್ಯೆಯಾಗುತ್ತದೆ ಮುಸ್ಲಿಮ್ಮರು ಪ್ರಾರಂಭ ಮಾಡಿದರೆ ಮುಸ್ಲಿಮ್ಮರಿಗೂ ಸಮಸ್ಯೆಯಾಗುತ್ತದೆ ಅದು ಜನರಿಗೆ ಗೊತ್ತಿದೆ ಆದರೆ ಅದರ ಲಾಭವನ್ನು ಪಡೆಯಲು ಪ್ರಯತ್ನ ಪಡುವವರಿಗೆ ಇದ್ಯಾವುದೂ ಬೇಕಾಗಿಲ್ಲ ಏಕೆಂದರೆ ಗಲಾಟೆಯನ್ನು ಎಬ್ಬಿಸಿ ಓಡಿಹೋಗುವಂಥಾದ್ದು ಮಾತ್ರ ಅವರ ಕರ್ತವ್ಯವಷ್ಟೇ ಆದರೆ ನೋವನ್ನು ತಿನ್ನುವಂಥಾದ್ದು ಸಾಮಾನ್ಯ ಜನರು ಒಬ್ಬ ಹುಡುಗ Marks card ಇಟ್ಟುಕೊಂಡು ಉದ್ಯೋಗ ಕ್ಕಾಗಿ ಬಂದಂಥವನ ತೊಡೆಗೆ ಬುಲೆಟ್ ಹೊಕ್ಕಿತು ಎಂದು ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದರು ಅದಕ್ಕೋಸ್ಕರವಾಗಿ ಮಾನ್ಯ ಪ್ರಕಾಶ್‌ರವರು ಇದರ ಬಗ್ಗೆ ಒಂದು ಕಾನೂನನ್ನು ಮಾಡಿ, ಇಂಥ ಸಭೆಗಳನ್ನು ಮಾಡುವಂಥಾದ್ದನ್ನು ನಿಲ್ಲಿಸಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ ಮಾನ್ಯ ಜ್ಞಾನೇಂದ್ರರವರು vote bank politics ಎಂದು ಹೇಳಿದರು Vote bank politicsನಿಂದ ಇದೆಲ್ಲ ಪ್ರಾರಂಭವಾಗಿದ್ದು ಏಕೆಂದರೆ, ಮುಸ್ಲಿಂ ಎದುರಿಗೆ ಇಂಥಾದ್ದನ್ನು ಮಾಡಿದರೆ ಬಿಜೆಪಿಗೆ ಓಟು ಬರುತ್ತದೆ ಎನ್ನುವ ಭಾವನೆ ಎಲ್ಲ ನಡೆದದ್ದೇ ಹೀಗೆ ಅದನ್ನು ನಿಲ್ಲಿಸುವಂಥ ಪ್ರಯತ್ನವನ್ನು ಮಾಡಬೇಕು ಅದನ್ನು ನಿಲ್ಲಿಸಲಿಕ್ಕೆ ನಾವೆಲ್ಲರೂ ಸೇರಬೇಕಾಗುತ್ತದೆ ಅದನ್ನು ಮಾಡದೇ ಏನೂ ಆಗುವುದಿಲ್ಲ ಉದಾಹರಣೆಗೆ, ಡಾ ಚಿತ್ತರಂಜನ್‌ರವರ ಕೊಲೆ ಪ್ರಕರಣವನ್ನು CBIಗೆ ವಹಿಸಲಾಗಿತ್ತು ಆಗ ಕೇಂದ್ರ ಸರ್ಕಾರ ನಿಮ್ಮದಿತ್ತು ಆದರೂ, ಅದನ್ನು ಯಾರು ಮಾಡಿದರು ಎನ್ನುವುದು ಏಕೆ ಹೊರಗೆ ಬರಲಿಲ್ಲ? ಏಕೆ ಅದರ ಬಗ್ಗೆ ಹೆಚ್ಚು ಒತ್ತಡವನ್ನು

ತರಲಿಲ್ಲ ನಿಮ್ಮದೇ ಕೇಂದ್ರ ಸರ್ಕಾರವಿದ್ದಾಗ, ಚಿತ್ತರಂಜನ್‌ರವರ ಕೊಲೆಯ ವಿಚಾರಣಾ ವರದಿ ಹೊರಗೆ ಬರದಿದ್ದರೆ, ಇನ್ನು ಯಾವ ಸರ್ಕಾರ ಬಂದಾಗ ಅದು ಹೊರಬರುತ್ತದೆ? ಏಕೆ ಬೇರೆಯವರನ್ನು ದೂಷಣೆ ಮಾಡುವಂಥಾದ್ದು ಆಗುತ್ತಿದೆ ನಮ್ಮ ಜಿಲ್ಲೆಯಲ್ಲಿ ನಡೆದಂಥ ಘಟನೆಗಳನ್ನು ತೆಗೆದುಕೊಂಡರೆ, ಬಜ್ಪೆಯಿಂದ ಪ್ರಾರಂಭವಾಯಿತು ಅದರ ಅಗತ್ಯವಿತ್ತೇ? ಬಪ್ಪ ಬ್ಯಾರಿಯವರು ಅದನ್ನು ಟ್ಯಾಬುಲೋದಲ್ಲಿ ಹಾಕಿಕೊಂಡು ಹೋಗುವಂಥ ಅಗತ್ಯವಿತ್ತೇ? ಬಪ್ಪ ಬ್ಯಾರಿ ಅವರು secular ಬಪ್ಪನಾಡು ದೇವಸ್ಥಾನವನ್ನೇ ಕಟ್ಟಿದಂಥ ವ್ಯಕ್ತಿ ಅವರು ಅವರನ್ನು ಟ್ಯಾಬುಲೋದಲ್ಲಿ ಹಾಕಿಕೊಂಡು, ಒಂದು ಗಲಭೆಗೆ ಪ್ರೇರಣೆಯನ್ನು ಕೊಡುವಂಥ ಅವಶ್ಯಕತೆ ಇತ್ತೇ? ಒಂದು ದಿವಸ ನನ್ನ ಕ್ಷೇತ್ರದಲ್ಲಿ ಒಂದು ದೊಡ್ಡ ಗಲಾಟೆ ಪ್ರಾರಂಭವಾಯಿತು ಚೀಲದಲ್ಲಿದ್ದಂಥ ವೇಸ್ಟ್ ಮಾಂಸದ ಮುದ್ದೆಗಳು ಅನೇಕ ಕಡೆಗಳಲ್ಲಿ ಬಿದ್ದು ಹೋಯಿತು ಗ್ರಹಚಾರಕ್ಕೆ, ಒಂದು ದೇವಸ್ಥಾನದ ಎದುರಿಗೆ ಬಿದ್ದಿತ್ತು ಬೇರೆ ಕಡೆಗಳಲ್ಲಿ ಬಿದ್ದುದರ ಬಗ್ಗೆ ಏನೂ ಗಲಾಟೆಯಾಗಲಿಲ್ಲ ದೇವಸ್ಥಾನ ಎದುರಿಗೆ ಬಿದ್ದುದಕ್ಕೆ ಒಂದು ದೊಡ್ಡ ಗಲಾಟೆಯಾಯಿತು ಬೇಕೆಂದೇ ದೇವಸ್ಥಾನ ಎದುರಿಗೆ ಹಾಕಿದ್ದಾರೆ ಎಂದು ಪ್ರಚೋದನೆಯಾಯಿತು ಸಾಯಂಕಾಲ ಒಂದು ಸಭೆಯನ್ನು ಮಾಡಿದರು ಅದನ್ನು ಯಾರು ಬಿಸಾಡಿದರೋ ಅಥವಾ ವಾಹನದಲ್ಲಿ ಸಾಗಾಟ ಮಾಡುವಾಗ ಬಿದ್ದು ಹೋಯಿತೋ ಏನೋ ಗೊತ್ತಿಲ್ಲ ಸಾಯಂಕಾಲ ಸಭೆಯನ್ನು ಮಾಡಿ ನನಗೆ ದೂಷಣೆಯನ್ನು ಮಾಡಿದರು ಅದಕ್ಕೆ ನಾನು ಉತ್ತರವನ್ನೇ ಕೊಡಲಿಕ್ಕೆ ಹೋಗಲಿಲ್ಲ ಏಕೆಂದರೆ, ಉತ್ತರವನ್ನು ಕೊಟ್ಟರೆ ದೊಡ್ಡದಾಗುತ್ತದೆ, ಉತ್ತರವನ್ನು ಕೊಡದಿದ್ದರೆ ಅದು ಅಲ್ಲಿಗೇ ನಿಂತು ಹೋಗುತ್ತದೆ ಎಂದು ನನಗೆ ಗೊತ್ತಿತ್ತು ಅಹಂಕಾರಕ್ಕೆ ಉದಾಸೀನವೇ ಮದ್ದು ಎಂದು ಏನು ಹೇಳುತ್ತಾರೆ, ಆ ರೀತಿ ಇಂಥ ಘಟನೆಗಳು ನಡೆದಾಗ ಅದಕ್ಕೆ ಉತ್ತರವನ್ನು ಕೊಡದಿರುವುದೇ ಒಳ್ಳೆಯದು ಅದರ ನಂತರ, ತಕ್ಷಣದಲ್ಲಿ ಇನ್ನೊಂದು ಘಟನೆಯಾಯಿತು ಮಾನ್ಯ ಗೃಹ ಸಚಿವರಿಗೆ ಗೊತ್ತಿರಬೇಕು ಅಲ್ಲಿ ಪೊಲೀಸ್ ಎಸ್ ಪಿ ಯವರ ಜೀಪನ್ನು ಪುಡಿಪುಡಿ ಮಾಡಿದರು ಗ್ರಹಚಾರ ಏನೆಂದರೆ, ಗಲಭೆಯಲ್ಲಿ ತೊಡಗಿದ್ದರು ಎಂದು ಯಾರ ಹೆಸರನ್ನು ಕೊಟ್ಟಿದ್ದರೋ ಅವರು ಸಿಕ್ಕಲಿಲ್ಲವೆಂದು, ಎರಡು ದಿವಸದಲ್ಲಿ ಮದುವೆ ನಡೆಯಲಿದ್ದ ಮದುಮಗನನ್ನು ಮತ್ತು ಆತನ ಸಹೋದರನನ್ನು ಹಿಡಿದುಕೊಂಡು ಹೋದರು ಆಗ ನಾನು ಬೆಂಗಳೂರಿನಲ್ಲಿದ್ದೆ ನಾನು phone ಮಾಡಿ request ಮಾಡಿದ ನಂತರ, ಮದುಮಗನನ್ನು ಬಿಟ್ಟರು ಆದರೆ ಆತನ ಸಹೋದರನನ್ನು ಜೈಲಿನಲ್ಲಿ ಇಟ್ಟುಕೊಂಡರು ಇವತ್ತಿಗೂ ಅವರು

ಓಡಾಡುವಂಥ ಪರಿಸ್ಥಿತಿ ಇದೆ ನಾನು ಕೇಳಿಕೊಳ್ಳುವುದೇನೆಂದರೆ, ಇಂಥ ಘಟನೆಗಳ ಬಗ್ಗೆ ಏನು ಕೇಸುಗಳು ದಾಖಲಾಗಿವೆ, ಅವುಗಳ ಬಗ್ಗೆ FIRಅನ್ನು ಹಾಕಿ ಆಗಿದೆ ಎಂದು Charge Sheetಅನ್ನು ಹಾಕುವಂಥಾದ್ದಲ್ಲ ಏಕೆಂದರೆ FIR ಹಾಕುವಾಗ ಹೇಗೋ ಹಾಕಿ ಆಗಿದೆ Charge Sheet ಹಾಕುವುದಕ್ಕೆ ಮೊದಲು ತನಿಖೆಯನ್ನು ಮಾಡಿ, ಯಾರ್ಯಾರು ಭಾಗಿಯಾಗಿಲ್ಲ ಅಂಥವರನ್ನು ಬಿಡುವಂಥ ಒಂದು ಪ್ರಯತ್ನ ನಡೆಯಬೇಕಾಗುತ್ತದೆ ಇಲ್ಲದಿದ್ದರೆ ಆ ಜನರ ಮಧ್ಯೆ ದ್ವೇಷ ಉಳಿದುಕೊಂಡು ಹೋಗುತ್ತದೆ ಯಾರು ಆ ಘಟನೆಯಲ್ಲಿ ಭಾಗಿಯಾಗಿರುವುದಿಲ್ಲವೋ, ಅಂಥವರ ಮೇಲೆ ಏನು ಸುಮ್ಮನೆ ಕೇಸನ್ನು ಹಾಕಿರುತ್ತೀರಿ, ಆ ದ್ವೇಷ ಉಳಿದುಕೊಂಡು ಹೋಗುತ್ತದೆ ಅದನ್ನು ನಿಲ್ಲಿಸುವಂಥ ಪ್ರಯತ್ನವನ್ನು ದಯವಿಟ್ಟು ಮಾಡಬೇಕು ಮುಲ್ಕಿಯಲ್ಲಿ ನಡೆದಂಥ ಸುಖಾನಂದ ಶೆಟ್ಟಿಯ ಕೊಲೆಯ ಪ್ರಕರಣವನ್ನೇ ತೆಗೆದುಕೊಳ್ಳಿ ಸುಖಾನಂದ ಶೆಟ್ಟಿಯ ಕೊಲೆಯ ಪ್ರಕರಣಕ್ಕೂ ಅದರ ಹಿಂದೆ ಇದ್ದ ಘಟನೆಗಳಿಗೂ ಅನೇಕ ವಿಷಯಗಳಿವೆ ಅದರ ಬಗ್ಗೆ ಚರ್ಚೆಯನ್ನು ಮಾಡಿದೆವು ನಂತರ ಎರಡು encounter ಆಯಿತು ಒಬ್ಬನು ಸುಧೀರ್ ಎನ್ನುವವನು, ಇನ್ನೊಬ್ಬನು ಮುಲ್ಕಿ ರಫೀಕ್ ಎನ್ನುವವನ encounter ಆಯಿತು ಅದರ ಬಗ್ಗೆ ಯಾರೂ ಕಣ್ಣೀರು ಹಾಕಲಿಲ್ಲ ಸಮಾಜಘಾತುಕರನ್ನು ಪೊಲೀಸರು encounter ಮಾಡಿದಾಗ ಯಾರೂ ಕಣ್ಣೀರು ಹಾಕಲಿಲ್ಲ ಅಂಥಾದ್ದನ್ನು ನಾವು ಬೇಡ ಎಂದು ಹೇಳುವುದಿಲ್ಲ ಅಲ್ಲಿ ಪೊಲೀಸರದ್ದು ತಪ್ಪು ಎಂದು ಹೇಳುವುದಿಲ್ಲ ಆದರೆ, ಅಮಾಯಕರನ್ನು ತೆಗೆದುಕೊಂಡು ಹೋಗಿ ಒಳಗೆ ಇಟ್ಟಾಗ, ಅಮಾಯಕರಿಗೆ ನೋವಾದಾಗ ಮಾತ್ರ ಅದು ಸರಿಯಲ್ಲ ಎಂದು ಹೇಳುತ್ತೇವೆ ನಮಗೆ ಗೊತ್ತಿದೆ, ಪೊಲೀಸಿನವರು ಕಡಿಮೆ ಪ್ರಕರಣಗಳನ್ನು ಹಿಡಿದರೆ ಪೊಲೀಸಿನವರು ಮಾಡಿರುವಂಥ ಕೆಲಸ ಕಡಿಮೆಯಾಯಿತು ಎಂದು ಹೇಳುವಂಥಾದ್ದು ಇದೆ, ಸ್ವಲ್ಪ ಜಾಸ್ತಿಯಾದರೆ excess ಎಂದು ಹೇಳುವಂಥಾದ್ದು ಇದೆ ನಾವು ಇವೆಲ್ಲವನ್ನೂ ಕಂಡಿದ್ದೇವೆ ಆದರೆ ಈ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಸರ್ಕಾರ ಯಾವ ರೀತಿ ತೀರ್ಮಾನ ತೆಗೆದುಕೊಳ್ಳುತ್ತದೆ, ಅದಕ್ಕೆ ಸರ್ಕಾರದ ಬೆಂಬಲ ಇದೆ ಎಂದು ಶ್ರೀರಾಮರೆಡ್ಡಿಯವರು ಹೇಳಿದಾಗ ಮಾನ್ಯ ಪ್ರಕಾಶ್‌ರವರು ಎದ್ದು ಹೇಳಿದರು ಆದರೆ, ನಿಮ್ಮೊಬ್ಬರ ಬಗ್ಗೆ ಹೇಳುತ್ತಿಲ್ಲ, ಅಂದರೆ ಗೃಹ ಸಚಿವರ ಬಗ್ಗೆ ಮಾತ್ರ ಹೇಳುತ್ತಿಲ್ಲ, ನಿಮ್ಮ ಸಮ್ಮಿಶ್ರ ಸರ್ಕಾರದ ಬಗ್ಗೆ ಹೇಳಿದರೇ ವಿನಾ ಕೇವಲ ಗೃಹ ಸಚಿವರ ಬಗ್ಗೆ ಹೇಳಲಿಲ್ಲ ಇದರ ಪರಿಣಾಮ ಸರ್ಕಾರಗಳ ಮೇಲೆ ಹೇಗಾಗುತ್ತದೆ

ಎಂದರೆ, ಏನಾಗುತ್ತಿದೆ ಎನ್ನುವಂಥಾದ್ದು, it is reflection on the Government ಅದಕ್ಕಾಗಿ, ಹಿಂದೆ ನಡೆದಂಥ ಘಟನೆಗಳನ್ನು ನೋಡಿ ಮುಂದಿನ ದಿನಗಳಲ್ಲಿ ಅವು ಆಗದಂತೆ ನಾವು ಹತೋಟಿಗೆ ತರುವಂಥಾದ್ದು ಬಹಳ ಅಗತ್ಯವಿದೆ ಸಂಘ ಪರಿವಾರದ ಬಗ್ಗೆ ಹೇಳುವಂಥಾದ್ದು, ಭಜರಂಗದಳದ ಬಗ್ಗೆ ಹೇಳುವಂಥಾದ್ದು ಆಗುತ್ತಿದೆ ಎಂದರೂ ಅದನ್ನು ಎಲ್ಲ ಕಡೆಗಳಲ್ಲಿ ಹೇಳುತ್ತಿಲ್ಲ ಮಾನ್ಯ ಜ್ಞಾನೇಂದ್ರರವರು ತಾವು ಸಂಘ ಪರಿವಾರದಿಂದ ಬಂದಿದ್ದೇವೆ ಎಂದು ಹೇಳಿದರು, ನಿಮ್ಮ ಮೇಲೆ ಯಾರೂ ಹೇಳುತ್ತಿಲ್ಲ ಆದರೆ ಭಜರಂಗ ದಳದವರು ಏನನ್ನು ಮಾಡುತ್ತಿದ್ದಾರೆ ಎನ್ನುವುದನ್ನು ನಾವು ಕಣ್ಣಾರೆ ಕಂಡಂಥಾದ್ದು ಇದೆ ನಿಮ್ಮಲ್ಲಿನ ಕೆಲವು ನಾಯಕರುಗಳು ಹಿಂದೆ ಕುಳಿತು ಪ್ರಚೋದನೆ ಮಾಡುವಂಥಾದ್ದನ್ನೂ ಕಂಡಿದ್ದೇವೆ ಅದನ್ನು ನಿಲ್ಲಿಸಿ ಎಂದು ನಾವು ನಿಮ್ಮನ್ನು ಕೇಳುತ್ತಿದ್ದೇವೆಯೇ ಹೊರತು ಇದಕ್ಕೆ ಎಲ್ಲರನ್ನೂ ಸಾರಾಸಗಟಾಗಿ ಜವಾಬ್ದಾರರರು ಎಂದು ಹೇಳುತ್ತಿಲ್ಲ ಅದನ್ನು ನಿಲ್ಲಿಸುವಂಥ ಪ್ರಯತ್ನವನ್ನು ನೀವು ಸಹ ಮಾಡಬೇಕಾಗುತ್ತದೆ ನಮ್ಮೆಲ್ಲರ ಸಮಸ್ಯೆಯಿಂದಾಗಿ ಜನರು ತೊಂದರೆಗೀಡಾಗಬಾರದು ಎನ್ನುವುದು ನಮ್ಮ ಅಭಿಪ್ರಾಯ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ ಕೊನೆಯದಾಗಿ, ಮಂಗಳೂರಿನಲ್ಲಿ ಗಲಭೆಯಾದ ನಂತರ ಮಾನ್ಯ ಗೃಹ ಸಚಿವರು ಅಲ್ಲಿಗೆ ಹೋಗಿದ್ದರು ಮತ್ತು ಅದರ ಬಗ್ಗೆ ಸಿ ಒ ಡಿ ಎನ್‌ಕ್ವೈರಿಯನ್ನು ಮಾಡಿದ್ದಾರೆ ಆ ಸಿ ಒ ಡಿ ಎನ್‌ಕ್ವೈರಿ ವರದಿ ಏನಾಯಿತು? ಅದನ್ನಾದರೂ ಸದನದ ಮುಂದೆ ಇಡಬೇಕಲ್ಲವೇ? ಯಾರಯಾರ ಮೇಲೆ ಕ್ರಮ ತೆಗೆದು ಕೊಂಡಿದ್ದಾರೆ ಎಂದು ಹೇಳಬೇಕಲ್ಲವೇ? ಯಾರ ಮೇಲೂ ಕ್ರಮವನ್ನು ತೆಗೆದುಕೊಳ್ಳದಿದ್ದರೆ ಇಂಥ ಘಟನೆಗಳು ನಡೆಯುವುದು ಜಾಸ್ತಿಯಾಗುತ್ತಾ ಹೋಗುತ್ತದೆ ಅದಕ್ಕೋಸ್ಕರ ಇಂಥಾದ್ದಕ್ಕೆ ಯಾರು ಜವಾಬ್ದಾರರಾಗಿರುತ್ತಾರೆ, ಅವರು ಯಾವುದೇ ಕೋಮಿಗೆ ಸೇರಿರಲಿ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಕೋಮು ಗಲಭೆ ಎಂದು ಹೇಳಿದ ಕೂಡಲೇ ನಾವು ಒಬ್ಬರ ಮೇಲೆ ಆಪಾದನೆಯನ್ನು ಹೊರಿಸುವಂಥಾದ್ದಲ್ಲ ಯಾರ್‍ಯಾರು, ಯಾವಯಾವ ಕೋಮಿನವರು ಜವಾಬ್ದಾರರಾಗಿರುತ್ತಾರೆ ಅವರೆಲ್ಲರ ಮೇಲೆ ಕ್ರಮವನ್ನು ತೆಗೆದು ಕೊಳ್ಳಿ ಎಂದು ಹೇಳುತ್ತಾ, ಇದರ ಬಗ್ಗೆ ಅತೀ ಶೀಘ್ರವಾಗಿ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತಾ, ಇದಕ್ಕೆ ಸರ್ಕಾರದವರು ಜವಾಬ್ದಾರರು ಎಂದು ಹೇಳಿದರೆ ಅವರು ತಪ್ಪು ಭಾವಿಸಬಾರದು ಇದು ಅವರ ಜವಾಬ್ದಾರಿಯಾಗುತ್ತದೆ ಕೊನೆಯದಾಗಿ, ಪತ್ರಿಕೆಯಲ್ಲಿ ಬಂದಂಥ ಒಂದು ವಿಚಾರವನ್ನು ಹೇಳುತ್ತೇನೆ "ಸಂಸ್ಕೃತಿ ಆರಕ್ಷಕರ

ಎಡೆಬಿಡದ ಕಾರ್ಯಾಚರಣೆ" ಎಂದು ಕನ್ನಡಪ್ರಭ ದಿನಪತ್ರಿಕೆಯಲ್ಲಿ ಒಂದು ಲೇಖನ ಬಂದಿದೆ ಅಲ್ಲಿ ಆ ರೀತಿಯ ಒಂದು ಪಡೆ ಆಗಿದೆ ಒಂದೇ ಕೋಮಿನ ಒಂದು ಹುಡುಗ, ಹುಡುಗಿ ಜೊತೆಯಲ್ಲಿ ಹೋದರೂ ಸಹ ನೀವು ಬೇರೆಬೇರೆ ಕೋಮಿನವರು ಎಂದು ಹೇಳಿ, ಬಸ್ಸಿನಿಂದ ಇಳಿಸಿ ಹೊಡೆಯುವಂಥಾದ್ದು, ಬೇರೆಬೇರೆ ಕೋಮಿಗೆ ಸೇರಿದ ಕ್ಲಾಸ್‌ಮೇಟ್‌ಗಳು ಒಟ್ಟಿಗೆ ಹೋದರೂ ಸಹ ಅವರನ್ನು ಹಿಡಿದುಕೊಂಡು ಹೊಡೆಯುವಂಥಾದ್ದು ಆಗುತ್ತಿದೆ ಅದರಿಂದ ಅವರಿಗೇನಾಗಬೇಕು? ಆ ರೀತಿ ಇದ್ದರೆ ಅವರು ಪೊಲೀಸಿನವರಿಗೆ complaint ಕೊಡುವುದಕ್ಕಾಗುವುದಿಲ್ಲವೇ? ಇವರು moral police ಅಂತೆ ಇವರಿಗೆ ಈ ರೀತಿಯ ಅಧಿಕಾರವನ್ನು ಕೊಟ್ಟವರು ಯಾರು? ಇವರಿಗೆ Police Departmentನವರೇನಾದರೂ Power of Attorneyಯನ್ನು ಕೊಟ್ಟಿದ್ದಾರೆಯೇ? ಇದನ್ನು ತಮಗೆ ಕಳುಹಿಸಿಕೊಡುತ್ತೇನೆ ದಯವಿಟ್ಟು ಇಂಥವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಎಸ್ ರಾಜೇಂದ್ರನ್ (ಕೆ ಜಿ ಎಫ್) ಮಾನ್ಯ ಅಧ್ಯಕ್ಷರೆ, Communal rights ಬಗ್ಗೆ ಸಂಘ ಪರಿವಾರಗಳ ಏನೇನು organization ಇವೆ, ಅವರ ಪರ ಮಾತನಾಡಬೇಕೇ? ಅಥವಾ ಅವರ ವಿರುದ್ಧ ಮಾತನಾಡಬೇಕೆನ್ನುವುದಲ್ಲ ಪೊಲೀಸರು ಬಹಳ ಕೆಟ್ಟವರು, ಈ ರಾಜ್ಯದಲ್ಲಿ ಮೂರ್ಖರು ಎಂದು ಹೇಳುವುದಕ್ಕಾಗುವುದಿಲ್ಲ ಹಾಗೆಯೇ, ಪೊಲೀಸನವರೆಲ್ಲ ಬಹಳ ಒಳ್ಳೆಯವರೆಂದು ಸಹ ಹೇಳುವುದಕ್ಕಾಗುವುದಿಲ್ಲ ಅವರು ಎಷ್ಟೆಷ್ಟು percentage ಒಳ್ಳೆಯವರು, ಕೆಟ್ಟವರಿದ್ದಾರೆಂದು Hon'ble Home Minister ರವರು ಹೇಳಬೇಕು ಇದನ್ನು ನಾನು ಹೇಳುವುದಕ್ಕಾಗುವುದಿಲ್ಲ ಹಿಂದೂ ಆಗಿರಲಿ, ಮುಸಲ್ಮಾನರಾಗಿರಲಿ, Christian ಆಗಿರಲಿ, Buddhist ಆಗಿರಲಿ, ಜೈನರಾಗಿರಲಿ, ಇಡೀ ದೇಶವಾಗಿರಲಿ ಅಥವಾ ಇಡೀ ರಾಜ್ಯವಾಗಿರಲಿ, former Prime Minister ಆಗಿದ್ದಂಥ ಶ್ರೀಮಾನ್ ದೇವೇಗೌಡರು 'ವಿರಾಟ್ procession ಗೆ permission ಕೊಡಬಾರದು' ಎಂದು ಪತ್ರಿಕೆಗಳಲ್ಲಿ ಒಂದು message ಕೊಟ್ಟರು ಕಾರಣವೇನೆಂದರೆ, experience counts ಸದ್ದಾಂ ಹುಸೇನ್‌ರವರದು procession ತೆಗೆದುಕೊಂಡು ಹೋದ ಮೇಲೆ ಅವರು ಬಹಳ ಸೂಕ್ಷ್ಮವಾಗಿ ಹೇಳಿದರು ವಿರಾಟ್ procession ಗೆ permission ಕೊಡಬಾರದು' ಎಂದು cautious ಆಗಿ ಒಂದು message ಕೊಟ್ಟರು ಅವರ ಮೇಲೆ ಗೌರವ ಇಟ್ಟುಕೊಂಡು ತಾವು ಅದನ್ನು ತಡೆಹಿಡಿದಿದ್ದರೆ ಈ ಘಟನೆ ನಡೆಯುವುದಕ್ಕೆ ಸಾಧ್ಯವಾಗುತ್ತಿತ್ತೇ? ತಾವೇನು ಮಾಡಿದಿರಿ? Coalition

Government ನಲ್ಲಿ ಬೇಡ ಎಂದು ಹೇಳಿದರೆ ನಮ್ಮ ಜೊತೆಯಲ್ಲಿರುವ friends ನಮ್ಮ ಮೇಲೆ ಕೋಪಗೊಳ್ಳುತ್ತಾರೆಂದು ಅವರನ್ನು satisfy ಮಾಡುವುದಕ್ಕೆ ತಾವು ವಿರಾಟ್ procession ಗೆ permission ಕೊಟ್ಟಿರಿ ಸದ್ದಾಂ ಹುಸೇನ್‌ರವರು ನಮ್ಮ ದೇಶದಲ್ಲಿ ಹುಟ್ಟಿರುವವರೇ? ಅವರು ಯಾರು? ಅವರಿಂದ ನಮಗೇನು benefit? ಇದರ ಬಗ್ಗೆ demonstration ಮಾಡುವುದಕ್ಕಾಗುವುದಿಲ್ಲ ಅವರು ನಮ್ಮ ದೇಶದವರೇ ಅಲ್ಲ, ಏತಕ್ಕೆ procession ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಕೆಲವರು ಹೇಳಬಹುದು ಆದರೆ, ಚುನಾವಣೆ time ನಲ್ಲಿ ಹೇಳುವುದಕ್ಕೆ ಬರುವುದಿಲ್ಲ ಚುನಾವಣೆ time ನಲ್ಲಿ Muslims ನಮ್ಮ friends, ನಾವು ಅವರ ಮನೆಗೆ ಊಟಕ್ಕೆ ಹೋಗುತ್ತೇವೆ, ಇತ್ಯಾದಿ ಎಲ್ಲ ಮಾತನಾಡಿದರು But, police ನವರು ಚಿಂತನೆ ಮಾಡಿ ಇವತ್ತಲ್ಲ ಅಂದರೆ ಇನ್ನು ಎರಡು ತಿಂಗಳು ಬಿಟ್ಟು ಮಾಡಿ ಅಥವಾ 3 ತಿಂಗಳು ಬಿಟ್ಟು ಮಾಡಿ ಎಂದು procession ಮಾಡುವವರಿಗೆ ಹೇಳಬೇಕಾಗಿತ್ತು ಆದರೆ, ಆ ಕೆಲಸವನ್ನು ಪೊಲೀಸನವರು ಮಾಡಿಲ್ಲ General ಆಗಿ ಒಂದು ಸುದ್ದಿ ಏನೆಂದರೆ, ಆ procession ನಲ್ಲಿ ಕೆಲವು police ನವರೆಲ್ಲ ನುಗ್ಗಿದರು Islamic Muslims ನವರು ಆದ್ದರಿಂದ, ವಿರಾಟ್ procession ಬರುವ time ನಲ್ಲಿ ನಾವು ಸುಮ್ಮನೆ ಇರೋಣ, ಹೊಡಿಯಲಿ ಇವರನ್ನೇ, ಎಂದು ಹೇಳುವಂಥಾದ್ದು ಒಂದು ಸುದ್ದಿ ಯಾವುದು right? ಯಾವುದು correct? ಇದು ಪತ್ರಿಕೆಯಲ್ಲಿ ಬಂದಿರುವ ಸುದ್ದಿ ಸ್ವಾಮಿ, ನಾವು ಹಿಂದೂ ಸಮಾಜದಿಂದ procession ಹೋಗುತ್ತೇವೆಂದು ಹೇಳಿದರೆ ಬೇಡ ಎಂದು ಯಾರೂ ಹೇಳುವುದೇ ಇಲ್ಲ ಪೊಲೀಸ್‌ನವರು permission ಕೊಟ್ಟಿಲ್ಲವೆಂದರೆ, ಏತಕ್ಕೆ permission ಕೊಡಬೇಕೆಂದು ಈಗ ಎಲ್ಲರೂ ಹೇಳಿದರು Article 14 is my right. Permission ಕೊಡಲಿಲ್ಲವೆಂದರೆ ನಾನು ಸುಮ್ಮನಿರುವುದಿಲ್ಲವೆಂದು ಹೇಳುತ್ತಾರೆ ಸರ್ ನಾವೇನು ಮಾಡುವುದಕ್ಕಾಗುತ್ತದೆ ಸರ್? Political, ರಾಜಕೀಯವಿದೆ ಸರ್, ಎಂದು police ನವರು permission ಕೊಡುವುದು Police ನವರು permission ಕೊಟ್ಟಿಲ್ಲವೆಂದರೆ, ಈ police ನವರು purpose ಆಗಿ ನಮಗೆ permission ಕೊಟ್ಟಿಲ್ಲ, ಆದ್ದರಿಂದ ಈ police ನವರನ್ನು ಇಲ್ಲಿಂದ transfer ಮಾಡಿ, ಇವರು ಸರಿಯಿಲ್ಲ ಎಂದು ಹೇಳಿ ಮಾಡುವುದಿದೆ ಇದನ್ನು ಸರಿಪಡಿಸುವುದು ಹೇಗೆಂದರೆ, ಆತ್ಮೀಯವಾಗಿ ಸರಿಪಡಿಸಬೇಕಾಗುತ್ತದೆ ಶ್ರೀಮಾನ್ ಧರ್ಮಸಿಂಗ್ ಸಾಹೇಬರು Chief Minister ಆಗಿ ಅಲ್ಲಿ ಕುಳಿತುಕೊಂಡಿರುವ ಸಮಯದಲ್ಲಿ ಶ್ರೀಮಾನ್ ಯಡಿಯೂರಪ್ಪನವರು ವಿರೋಧ

ಪಕ್ಷದ ಸಾಲಿನಿಂದ Christians ನವರ prayer ಗೆ ನೀವು ಹೋಗಿರುವುದು ತಪ್ಪು ಎಂದು ಹೇಳುತ್ತಾರೆ ಹೇಗಿದೆ? Christians ನವರ prayer ಗೆ ಹೋಗಿರುವುದು ತಪ್ಪು ಎಂದು ಹೇಳುವುದಾದರೆ, Islamic ಸದ್ದಾಂ ಹುಸೇನ್‌ಗೆ ಇಲ್ಲಿ procession ಮಾಡಿರುವುದು ನ್ಯಾಯವೇ? ಪ್ರತಿಯೊಂದನ್ನೂ ಸಹ ನಾನು ಇದನ್ನೂ Home Minister ರವರ shoulder ಮೇಲೆ ಹಾಕುವುದಕ್ಕೆ ತಯಾರಿಲ್ಲ ಇದನ್ನು ಯಾರು ಚಿಂತನೆ ಮಾಡಬೇಕೆಂದರೆ ಪೊಲೀಸ್ ಅಧಿಕಾರಿಗಳು ಸ್ವಲ್ಪ ಚಿಂತನೆ ಮಾಡಬೇಕು ಉದಾಹರಣೆಗೆ ಹೇಳುವುದಾದರೆ, ಒಳ್ಳೆಯ ಅಧಿಕಾರಿಗಳಿದ್ದಾರೆ, ಆದರೆ, ಅವರ ಕೈ ಕಟ್ಟಿಸಿದ್ದಾರೇನೋ ಗೊತ್ತಿಲ್ಲ ಅಥವಾ ಅವರಿಗೆ freedom ಕೊಟ್ಟಿದ್ದಾರೆಯೋ, ಇಲ್ಲವೋ? ಗೊತ್ತಿಲ್ಲ Advantage ತೆಗೆದುಕೊಂಡು ಕೆಟ್ಟ ಅಭಿಪ್ರಾಯ ಇಟ್ಟುಕೊಂಡಿರುವ ಪೋಲೀಸ್ ಅಧಿಕಾರಿಗಳು purpose ಆಗಿ problem create ಆಗಲಿ ಎಂದು ಇವರು ಎರಡೂ ಕಡೆಯೂ case book ಮಾಡುತ್ತಾರೆ ನೋಡೀ, ಅವರು ಹೊಡೆದಿದ್ದಾರೆಂದು ಕೊಟ್ಟಿದ್ದೀರಲ್ಲವೇ, ಇವರೂ ಹೊಡೆದಿದ್ದಾರೆಂದು ಕೊಡಿ, ಇಬ್ಬರ ಮೇಲೆ case ಹಾಕಿದ್ದೇನೆಂದು ಹೇಳುತ್ತಾರೆ ಬಹಳ ಗಂಭೀರವಾಗಿ uniform ಹಾಕಿಕೊಂಡು ಇಬ್ಬರ ಮೇಲೆ case fix ಮಾಡಿಬಿಟ್ಟಿದ್ದೇವೆ! ಇಬ್ಬರ ಮೇಲೂ case file ಮಾಡುವುದಕ್ಕೆ Police Officer ಬೇಕೆ? ಅದನ್ನು ನಾವೇ ಮಾಡಿಕೊಳ್ಳುತ್ತೇವೆ ಬಿಡಿ That shows you are not scrutinizing properly ಯಾರು ತಪ್ಪು ಮಾಡಿದ್ದಾರೆಯೋ, ಯಾರು ತಪ್ಪು ಮಾಡಿಲ್ಲ ಎಂದು ನೋಡಿ ನೀವು case file ಮಾಡುವುದಿಲ್ಲ ನೀವು, ನಾವು ಒಳ್ಳೆಯ ಅಧಿಕಾರಿಯಾಗಬೇಕು, ಒಳ್ಳೆಯ ಹೆಸರು ಇರಬೇಕು, ಮೇಲಧಿಕಾರಿಗೆ ಏನು ಹೇಳುತ್ತಾರೆಂದರೆ, ಸ್ವಾಮಿ, ಇಬ್ಬರ ಮೇಲೆಯೂ case book ಮಾಡಿದ್ದೇನೆ ಈ ಕಡೆ 10 ಜನ Muslim ರ ಮೇಲೆ case ಹಾಕಿದ್ದೇನೆ, ಆ ಕಡೆ 10 ಹಿಂದೂ ಜನರ ಮೇಲೆ case book ಮಾಡಿದ್ದೇನೆ ಎಂದು ಹೇಳಿದಾಗ, ಇನ್ನೊಂದು 10 ಜನ Christians ಮೇಲೆ case book ಮಾಡಿಬಿಡಿ, 10 ಜನ ಜೈನರ ಮೇಲೆ case book ಮಾಡಿಬಿಡಿ ಎಂದು ಹೇಳುತ್ತಾರೆ ಸ್ವಾಮಿ, ಈ ರಾಜ್ಯದ ಎಲ್ಲಾ religions ನವರ ಮೇಲೆ 10-10 case ಗಳನ್ನು book ಮಾಡಿದ್ದೇವೆ ಈಗ peaceful ಆಗಿದೆ This is the way of police behavior ಅದನ್ನು ಹೇಗೆ ಸರಿಪಡಿಸುವುದು? ಅದಕ್ಕೆ ಅಧಿಕಾರಿಗಳು ಸತ್ಯಾಂಶ ಇಟ್ಟುಕೊಂಡು ಒಳ್ಳೆಯ ಕೆಲಸದಲ್ಲಿ interfere ಆಗುವುದಕ್ಕೆ ಮುಂಚೆ ಯೋಚನೆ ಮಾಡಬೇಕು ತಿಮ್ಮಯ್ಯ ರೋಡ್‌ನಲ್ಲಿ ಒಬ್ಬ ಹಿಂದೂ ವ್ಯಕ್ತಿ, ನನಗೆ ಸಿಕ್ಕಾಪಟ್ಟೆ ಹೊಡೆಯುತ್ತಿದ್ದರು,

ಅಂತಹ ಸಂದರ್ಭದಲ್ಲಿ ಒಬ್ಬ ಮುಸಲ್ಮಾನರು ನನ್ನನ್ನು ಕರೆದುಕೊಂಡು ಹೋಗಿ save ಮಾಡಿದ್ದಾರೆಂದು ಪತ್ರಿಕೆಯವರು ಭೇಟಿ ಮಾಡಿ ಕೇಳಿದಾಗ ಹೇಳಿದ್ದಾನೆ ಅವರ photo ಚಿತ್ರ ಪತ್ರಿಕೆಯಲ್ಲಿ ಬಂದಿದೆ ಮುಸಲ್ಮಾನ ವ್ಯಕ್ತಿ ಇರಲಿಲ್ಲವೆಂದರೆ ನಾನು ತೀರಿ ಹೋಗಿಬಿಡುತ್ತಿದ್ದೆ ಎಂದು ಹೇಳಿದರು ಅವರು friends ಆಗಿದ್ದಾರೆ ಆದರೆ, leaders ಏನು ಮಾಡುತ್ತಿದ್ದಾರೆಂದರೆ, ದೊಡ್ಡ ಗಲಾಟೆಯಾಗುವಂತೆ creation ಮಾಡಬೇಕು, ಯಾರು ಕಾರಣ? ಎಷ್ಟು ನಷ್ಟವಾಗಿದೆ? Record ಮಾಡಿದ್ದೀರಾ? ಎಷ್ಟು - amount waste, loss ಆಗಿರಬಹುದು? ನಿಮ್ಮ ಹತ್ತಿರ ಮಾಹಿತಿ ಇದೆಯೇ? ಇನ್ನೂ ಹುಡುಕುತ್ತಿದ್ದಾರೆ ಅದರಲ್ಲಿ ಯಾರಾದರೂ ಸಿಕ್ಕಿಬಿಟ್ಟರೆ, ಈ ಹಿಂದೆ ಏನಾದರೊಂದು report ಅವನ ಮೇಲಿದ್ದರೆ ಅವನನ್ನು ಸೆಕ್ಷನ್ 120(b)ಯಲ್ಲಿ ಸೇರಿಸಿಕೊಳ್ಳಬೇಕು ಇಂಥ ಪೋಲೀಸ್ ಅಧಿಕಾರಿಗಳ ಮೇಲೆ ನಾವೇ ಬಂದು Home Minister ಹತ್ತಿರ ಕೇಳಿದರೆ, ಉದಾಹರಣೆಗೆ ಒಂದು ಕೇಳುತ್ತೇನೆ, Hon'ble Home Minister ರವರು ತಮ್ಮ ಹೃದಯದಿಂದ ಉತ್ತರ ಕೊಡಲಿ Sir, ಈ Police Officer ನಮಗೆ ಹೀಗೆ ಮಾಡಿದರು, ಹಾಗೆ ಮಾಡಿದರೆಂದು ಹೇಳಿದ ತಕ್ಷಣ, ಇವರು Police Officer ಮೇಲೆ ಅಲ್ಲಿ ಏನಾಗಿದೆ ಎಂದು verify ಮಾಡುತ್ತಾರೆ Police Officer ಗೌರವವಾಗಿ, sir, ಆ ಶಾಸಕರು ಬಂದ ತಕ್ಷಣ ನನಗೆ ಹೊಡೆಯುವುದಕ್ಕೆ ಬಂದರು, ನಾನು ಎಷ್ಟೋ ಹೇಳಿದೆ ಸಾರ್ ನನ್ನನ್ನು ಮುಟ್ಟಿಬಿಟ್ಟರು ಸಾರ್ ಎಂದು ಹೇಳುತ್ತಾರೆ ಆಮೇಲೆ, ಉತ್ತರ ಹೀಗೆ ಬರುತ್ತದೆ, ಶಾಸಕರು ಮಾಡಿರುವುದು ತಪ್ಪು ಎಂದು ನಮ್ಮ Police Officer ಹೇಳುತ್ತಾರೆ ನಿಮ್ಮ Police Officer ಮೇಲಿರುವ faith ನಮ್ಮ ಮೇಲಿಲ್ಲವೇ? ನಮ್ಮ ಮೇಲಿರಬಾರದೇ? ಒಳ್ಳೆಯ ಅಧಿಕಾರಿಗಳಿರಬೇಕು ಉದಾಹರಣೆಗೆ ಹೇಳುತ್ತೇನೆ, ಒಬ್ಬ ಸ್ವಾಮೀಜಿ, ಹೂ ಎಲ್ಲ ಇಡುವ ಒಂದು rose pot ಅನ್ನು ಮೇಜಿನ ಮೇಲಿಟ್ಟಿದ್ದಾನೆ, ಯಾರೋ ಒಬ್ಬರು ಅವರನ್ನು ನೋಡುವುದಕ್ಕೆ ಬಂದಿದ್ದಾರೆ, ಬಂದ ತಕ್ಷಣ ಅವರಿಗೆ ಆಶ್ಚರ್ಯ, ಅದರಲ್ಲಿ ಹೂ ಏನೂ ಇಟ್ಟಿಲ್ಲ, pot ಖಾಲಿಯಾಗಿತ್ತು But, ಅವರ garden ನಲ್ಲಿ ತುಂಬಾ flowers ಇವೆ ಇವರಿಗೆ ಯೋಚನೆ ಬಂತು, ಏನು ಮನುಷ್ಯ ಇವನು, ಇಷ್ಟು flowers ಎಲ್ಲಾ ಇವೆ, ಆ rose pot ನಲ್ಲಿಟ್ಟರಬೇಕೆಲ್ಲವೇ, ಎಂದು ಮನಸಿನಲ್ಲಿಟ್ಟುಕೊಂಡು, ಏನು ಸ್ವಾಮೀಜಿ, ನೀವು ಎಂಥ ಮಹಾನ್ ವ್ಯಕ್ತಿ, pot ಎಲ್ಲಾ ಖಾಲಿಯಾಗಿಬಿಟ್ಟಿದೆ, ಇಷ್ಟು flowers ಇವೆ, flowers ಅನ್ನು pot ನಲ್ಲಿಡುವುದಕ್ಕೆ ನಿಮಗೆ ಪ್ರೀತಿಯೇ ಇಲ್ಲವೇ, ಎಂದು ಕೇಳಿದ ಅದಕ್ಕೆ ಆ ಮಹಾನ್ ವ್ಯಕ್ತಿ ಏನು ಹೇಳಿದನೆಂದರೆ,

ಪ್ರೀತಿ ಇರಬೇಕೆಂದರೆ flowers ಅನ್ನು pot ನಲ್ಲಿಡಬೇಕೆ? ಅದಕ್ಕೆ ಹೌದು, flowers ಎಲ್ಲ cut ಮಾಡಿ pot ನಲ್ಲಿಡಬೇಕೆಂದು ಹೇಳಿದ ನನಗೆ ಪುಟಾಣಿ ಮಕ್ಕಳ ಮೇಲೆ ಅಪಾರ ಪ್ರೀತಿ, ಅವರ ತಲೆಯೆಲ್ಲ ಕಿತ್ತು table ನಲ್ಲಿಟ್ಟುಕೊಳ್ಳಬೇಕೆ ಎಂದು ಕೇಳಿದ್ದಾನೆ ಹಾಗೇ ಬಿಟ್ಟು ಆ ಪುಟಾಣಿ ಮಕ್ಕಳನ್ನೆಲ್ಲ ನಾವು ಬಹಳ ಸಂತೋಷವಾಗಿ ನೋಡಿದರೆ ಎಷ್ಟು ಚೆನ್ನಾಗಿರುತ್ತದೆ, ಆ ತರಹ ಈ flowers ಆ plant ನಲ್ಲಿಯೇ ಇರಲಿ, ಅದನ್ನು ನೋಡಿಕೊಂಡು ಇರೋಣ, ಅದಕ್ಕೇಕೆ pot ನಲ್ಲಿಡಬೇಕೆಂದು ಹೇಳಿದ ಆ ತರಹ ಈ Police Officer ಆ ಬೀದಿಗೆ ಹೋಗಿ ಇವರು protection ಕೊಡುವುದು ಯಾವಾಗ ಎಂದರೆ procession ಹೋಗುವುದಕ್ಕೆ permission ಕೊಟ್ಟಮೇಲೆ ಅದಕ್ಕೆ ಮೊದಲೇ ಯೋಚನೆ ಮಾಡುವುದಿಲ್ಲವೇ? ಈಗ ಮುಸ್ಲಿಂನವರು procession ತೆಗೆದುಕೊಂಡು ಹೋಗಿದ್ದಾರೆ, ಅಲ್ಲಿ ಸ್ವಲ್ಪ ಗಲಾಟೆಯಾಗಿದೆ, ಇದನ್ನು ಮನಸಿನಲ್ಲಿಟ್ಟುಕೊಂಡು ಹಿಂದೂಗಳ ಒಂದು ದೊಡ್ಡ procession ಹೋಗುವ ಸಮಯದಲ್ಲಿ ಗಲಾಟೆ ಮಾಡಿದರೆ ಏನಾಗುತ್ತದೆಂಬ ಬಗ್ಗೆ ಪೋಲೀಸ್ ಅಧಿಕಾರಿಗಳು ಆಲೋಚನೆ ಮಾಡುವುದಿಲ್ಲವೇ? ಹಾಗೆ ಯೋಚನೆ ಮಾಡಿ ಹೇಳುವುದಕ್ಕೆ ಒಂದು committee ಮಾಡಬೇಕೆ? What is this happening? Where you are standing? ನಾವೆಲ್ಲ Police Officers ಒಳ್ಳೆಯವರೆಂದು ಹೇಳಿಕೊಂಡು ಹೋಗಬೇಕೆ? ಅಥವಾ ಎಲ್ಲ Police officers ಕೆಟ್ಟವರೆಂದು ಹೇಳಬೇಕೆ? ಒಂದು ದಿವಸ ತಾವು ಈ ಬಗ್ಗೆ ಯೋಚನೆ ಮಾಡಿ ಕೊಟ್ಟಿಲ್ಲವೆಂದರೆ ತಪ್ಪಾಗುತ್ತದೆ ಎನ್ನುವ ತಪ್ಪು ಭಾವನೆ ಬರುತ್ತದೆ ಕೊಟ್ಟುಬಿಟ್ಟರೆ ಈ ತರಹ ಗಲಾಟೆ ಬರುತ್ತದೆನ್ನುವ ಭಾವನೆ ಬರುತ್ತದೆ ಇದನ್ನು ಹೇಗೆ ಸರಿಪಡಿಸುವುದು? ಈಗ ಎಲ್ಲ, ಕಾವೇರಿ issue ಮೇಲೆ ಈಗ ಯಾವ religion ನವರೆ ಆಗಿರಲಿ, ಯಾವ ಮತದವರೇ ಆಗಿರಲಿ, procession ಮಾಡುವುದಕ್ಕೆ ಮುಂದೆ, ಯಾವ ಕಾರಣಕ್ಕಾಗಿ procession ಮಾಡುತ್ತಾರೆ, ಎಂದು ನೋಡಬೇಕು ಹಿಂದೂಸ್, ಹಿಂದೂಸ್ ಎಂದು ಹೇಳುತ್ತಾರೆ Who is the Hindu? ತಾವು policemen ಹೇಳಲಿ ಅವರಿಗೆ ಬಹಳ ಗೊತ್ತಿದೆ You know, he has learnt a lot. All the epics like Ramayana, Mahabharata, everything he knows Who is Hindu? Who ever accepts these, is Hindu Who is Christian? Who ever accepts Christian Vedas is a Christian Who ever accepts quran is a Muslim That's all ನಾನೀಗ ಕುರಾನ್‌ನಲ್ಲಿ ಬಹಳ ಚೆನ್ನಾಗಿದೆ ಎನ್ನುವ

ಒಂದು ಮಾತು ಹೇಳಿದ ತಕ್ಷಣ ನಾನು Muslims ಆಗಿಬಿಡುತ್ತೇನೆಯೇ? Bible ನಲ್ಲಿರುವುದು ಚೆನ್ನಾಗಿದೆ, correct, Jesus loves me ಎಂದು ಹೇಳಿದ ತಕ್ಷಣ Christian ಆಗಿಬಿಡುತ್ತೇನೆಯೇ? ಹಿಂದೂ ಗುಡಿಗೆ ಹೋಗಿ ನಾನು ನಮಸ್ಕಾರ ಹೇಳಿದ ತಕ್ಷಣ ನಾನು ಹಿಂದೂ ಆಗುತ್ತೇನೆಯೇ? ಇಲ್ಲ Hindu is different, Christian is different, Muslim is different. But, ಅದರಲ್ಲಿ ಇರುವ anti social elements ಏನಿದ್ದಾರೆ, ಅವರನ್ನು ನಿಮ್ಮ Police Officers ಹೇಗೆ ಕಂಡುಹಿಡಿಯುತ್ತಾರೆ? ಹಿಡಿಯುವುದಕ್ಕೆ ಸಾಧ್ಯವಾಗುತ್ತದೆಯೇ? ಇಲ್ಲ

ಅಧ್ಯಕ್ಷರು ಬೇಗ ಮುಗಿಸಿ

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) ಶ್ರೀರಾಮರೆಡ್ಡಿಯವರೇನು ವಿಷಯ ತಂದಿದ್ದಾರೆ, Rule 69 ಮೇಲೆ ಚರ್ಚೆಯಾಗಬೇಕಾದರೆ ದೊಡ್ಡ ವಿಷಯವಿದೆ ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕು ಇಲ್ಲ, time ಆಗಿದೆ, ಒಂದೇ ಒಂದು ಗಂಟೆಯಲ್ಲಿ ಮಾತನಾಡಬೇಕೆಂದರೆ ಹೇಗೆ? Urgent ಮಾಡಿದರೆ ಏನು ಮಾಡಲಿಕ್ಕಾಗುತ್ತದೆ?

ಅಧ್ಯಕ್ಷರು: Rule 69ಕ್ಕೆ ಒಂದು ಗಂಟೆ ಕೊಡುವುದಕ್ಕೆ ಸಾಧ್ಯವಾಗುತ್ತದೆ (ಗೊಂದಲ) Rule 69 ರಲ್ಲಿ ನಾವು 3 ಗಂಟೆ, 4 ಗಂಟೆ ಕೊಡುವುದಕ್ಕೆ ಬರುವುದಿಲ್ಲ 4 30 ಗಂಟೆಗೆ ಆರಂಭವಾಯಿತು, ಈಗ 6 ಗಂಟೆ ಸಮಯವಾಗುತ್ತಿದೆ ಇನ್ನೂ ಸಹ ಸರ್ಕಾರದ ಕಡೆಯಿಂದ ಉತ್ತರ ಕೊಡಬೇಕು ನೀವು ಮುಖ್ಯಮಂತ್ರಿಗಳಾಗಿದ್ದವರು ಈ ತರಹ ಹೇಳಿದರೆ ಹೇಗೆ? ಇಷ್ಟೊಂದು ಹಿರಿಯ ಸದಸ್ಯರು ನೀವು

ಶ್ರೀ ಎನ್ ಧರ್ಮಸಿಂಗ್ ಬೆಂಗಳೂರು ರಾಜಧಾನಿಯಲ್ಲಿ ಗಲಭೆ ಏನಾಗಿದೆ, ಮಂಗಳೂರಿನಲ್ಲಿ ಗಲಭೆ ಏನಾಗಿದೆ,

ಅಧ್ಯಕ್ಷರು ಒಪ್ಪಿಕೊಂಡೆ One hour

ಶ್ರೀ ಎನ್ ಧರ್ಮಸಿಂಗ್ ಬೇರೆ ಕಡೆ ಏನಾಗಿದೆ, ಇವುಗಳ ಬಗ್ಗೆ ಎಲ್ಲ ಪ್ರಸ್ತಾಪ ಮಾಡಬೇಕಾಗುತ್ತದೆ ಮತ್ತು ಸಮಗ್ರವಾದ ಉತ್ತರ ಕೊಡಬೇಕಾಗುತ್ತದೆ ಎಂದು ನಾವು ಸರ್ಕಾರದಿಂದ ನಿರೀಕ್ಷೆ ಮಾಡುತ್ತೇವೆ ಇಲ್ಲ, ಮುಗಿಸಿ, ಮುಗಿಸಿ ಎಂದು ಹೇಳಿದರೆ ಹೇಗಾಗುತ್ತದೆ?

ಅಧ್ಯಕ್ಷರು ಏನು ಮಾಡುವುದು?

ಶ್ರೀ ಎನ್ ಧರ್ಮಸಿಂಗ್: ಇಲ್ಲದಿದ್ದರೆ, ಮುಂದಕ್ಕೆ ಹಾಕಿ, ಮುಂದೆ ಚರ್ಚೆ ಮಾಡೋಣ

ಅಧ್ಯಕ್ಷರು ಮುಂದಕ್ಕೆ ಹಾಕಿ ಎಂದರೆ, ಹಾಗಾದರೆ next ಇದಕ್ಕೆ ಹಾಕಿ

ಶ್ರೀ ಎನ್ ಧರ್ಮಸಿಂಗ್ ಇಲ್ಲ, ನಾಳೆ ಮಾಡಲಿಕ್ಕೆ ನಾನು ಹೇಳುತ್ತಿಲ್ಲ ಕೋಮು ಗಲಭೆ ನಿರಂತರವಾಗಿ ನಡೆಯುತ್ತಿದೆ ಇದರ ಬಗ್ಗೆ ಸಮಗ್ರವಾದಂಥ ಚರ್ಚೆಯಾಗಬೇಕು ಸುಮ್ಮನೆ piece ಆಗಿ piece ಆಗಿ ಹೇಳಿ ಮುಗಿಸಿರಿ ಎಂದರೆ ಆಗುವುದಿಲ್ಲ

ಅಧ್ಯಕ್ಷರು ಈಗ ಏನಾಗಿದೆ ಎಂದರೆ, ಸಮಗ್ರವಾಗಿ ಚರ್ಚೆಯಾಗಬೇಕೆಂದು ಹೇಳಿ, ಹೇಳಿದ್ದನ್ನೇ ಹೇಳಿ ಹೀಗೆ ಹತ್ತಾರು ಜನ ಅದನ್ನೇ ಹೇಳುವುದಲ್ಲ ಏನೇನು ಹೊಸ ಹೊಸ ವಿಚಾರವನ್ನು effective ಆಗಿ ಹೇಳಬೇಕಾಗುತ್ತದೆ ನೀವು ಹೇಳಿದ ವಿಚಾರವನ್ನು ಅವರು ಪ್ರಸ್ತಾಪ ಮಾಡುವ ಅಗತ್ಯವಿಲ್ಲ ಅವರು ಹೇಳಿದ್ದನ್ನು ಮತ್ತೊಬ್ಬರು ಪ್ರಸ್ತಾಪ ಮಾಡುವುಕ್ಕಾಗುವುದಿಲ್ಲ ಅದನ್ನು ಸರಿಯಾದ ರೀತಿಯಲ್ಲಿ ಮಾಡಿದರೆ ಆಗುತ್ತೆ ಸ್ವಾಮಿ ಎಲ್ಲಾ ವಿಚಾರಗಳಿಗೂ ಅವಕಾಶ ಕೊಡಬೇಕಾಗುತ್ತದೆ

ಶ್ರೀ ಎನ್ ಧರ್ಮಸಿಂಗ್. ರಾಜ್ಯದ ಜನರಿಗೆ ಸಂಬಂಧಪಟ್ಟ ವಿಷಯವಾಗಿದೆ

ಅಧ್ಯಕ್ಷರು. ಒಪ್ಪಿಕೊಂಡೆ

ಶ್ರೀ ಎನ್ ಧರ್ಮಸಿಂಗ್ ಕರ್ನಾಟಕ ರಾಜ್ಯದಲ್ಲಿ ಜನ ವಿಶ್ವಾಸ ಕಳೆದುಕೊಂಡಿದ್ದಾರೆ ಇದರ ಬಗ್ಗೆ ನಾವು ಚರ್ಚೆ ಮಾಡಬೇಕಾಗುತ್ತದೆ ವಿಷಯವನ್ನು ಗಮನಕ್ಕೆ ಬರಬೇಕಾಗುತ್ತದೆ ಉತ್ತರ ಪಡೆಯಬೇಕಾಗುತ್ತದೆ

(ಗೊಂದಲ)

ಶ್ರೀ ಹೆಚ್ ಸಿ ಬಾಲಕೃಷ್ಣ ಸನ್ಮಾನ್ಯ ಅಧ್ಯಕ್ಷರೆ, 4 ದಿವಸಗಳ ಹಿಂದೆ ಈ ಒಂದು ಪರಿಜ್ಞಾನವಿದ್ದಿದ್ದರೆ ಇದೆಲ್ಲಾ ಆಗುತ್ತಿರಲಿಲ್ಲ ಇನ್ನಷ್ಟು ಚರ್ಚೆ ಮಾಡಬಹುದಿತ್ತು ಕಡೆಯ ದಿವಸ ತೆಗೆದುಕೊಂಡು ಇದನ್ನು ಅನವಶ್ಯಕವಾಗಿ ಸುಮ್ಮನೆ ಎಳೆದುಕೊಂಡು ಹೋಗುತ್ತಿದ್ದಾರೆ (ಗೊಂದಲ) ನಾವಲ್ಲ ನೀವು ಮಾಡಿದ್ದು ಯಾವುದೋ ವಿಚಾರ ತೆಗೆದುಕೊಂಡು ಬಂದು ಗೊಂದಲ ಮಾಡಿ (ಗೊಂದಲ) ಹಿಂದೆ ನೀವೆಲ್ಲ ಯಾವ ರೀತಿ ಮಾಡಿದ್ದೀರೆಂದು ತೆಗೆದು ನೋಡಿ (ಗೊಂದಲ) ಅನವಶ್ಯಕವಾಗಿ time ಎಲ್ಲವನ್ನು ಹಾಳು ಮಾಡಿದಿರಿ ಚರ್ಚೆಗಳನ್ನೆಲ್ಲ ಹಾಳು ಮಾಡಿದಿರಿ ಇವಾಗ ಏನೋ ದೊಡ್ಡದಾಗಿ ಚರ್ಚೆ ಮಾಡಬೇಕು, ದೊಡ್ಡದಾಗಿ ಮಾಡಬೇಕು

(ಗೊಂದಲ)

ಅಧ್ಯಕ್ಷರು ಆಯಿತು, ಮಾತನಾಡಲಿ ಬಿಡಿ (ಗೊಂದಲ)

ಶ್ರೀ ಎಸ್ ರಾಜೇಂದ್ರನ್ Whether Police has failed or not? ಅಂದರೆ, totally police has failed ಹೇಗೆಂದರೆ, Russel market area ಮತ್ತು ತಿಮ್ಮಯ್ಯ ರೋಡ್ ನಿಂದ, totally entire area, small children, old people, everybody has been beaten by the police ಏನು ಮಾಡುತ್ತಾರೆ? Law and Order maintain ಮಾಡಬೇಕೆಂದರೆ ಯಾರ್ಯಾರು ಬೀದಿಯಲ್ಲಿ ಹೋಗುತ್ತಾರೆ, ಅವರನ್ನೆಲ್ಲ ಹೊಡೆಯಬೇಕು ಇದುವೇ ಲಾ? ಯೋಚನೆ ಮಾಡಿ It is a jungle law The law system has failed ಅಲ್ಲಿ ಗಲಾಟೆಯಾಗುತ್ತದೆಂದರೆ ಎಲ್ಲ block ಮಾಡುವುದು, innocent ಗಳನ್ನೆಲ್ಲ ಹೊಡೆಯುವುದು ಯಾರ್ಯಾರು ಸಿಕ್ಕುತ್ತಾರೆಯೋ, ನಾನು ಬಂದಿಲ್ಲವೆಂದು ಹೇಳಿದ ತಕ್ಷಣ ಸೆಕ್ಷನ್ 125 ಅಡಿಯಲ್ಲಿ ಒದ್ದು ಒಳಗೆ ಹಾಕಿರಿ ಎಂದು ಹೇಳುತ್ತಾರೆ ಈ ರಾಜಕೀಯ ಮಾಡಿಕೊಂಡು ಹೋದರೆ it is going to be a feudal lord system King Monarchy style ಆಗುತ್ತದೆ ಇದನ್ನು ಸರಿಪಡಿಸುವುದಕ್ಕೆ ನಾವು ಸುಮ್ಮನೆ ಯಾವ ಪಕ್ಷ ಮಾಡಿವೆ, ಕಾಂಗ್ರೆಸ್ ಪಕ್ಷದವರು ಮಾಡಿದ್ದಾರೆಯೇ ಅಥವಾ coalition Government ನವರು ಮಾಡಿದ್ದಾರೆಯೇ? ಇದನ್ನು safeguard ಮಾಡಬೇಕೋ ಎಂದು ಮಾತನಾಡುವ ಅವಶ್ಯಕತೆ ಇಲ್ಲ ಮಾನ್ಯ ಶ್ರೀರಾಮರೆಡ್ಡಿಯವರು ಬಹಳ ಗಂಭೀರವಾಗಿ ಅವರ ಕರ್ತವ್ಯವನ್ನು ಅವರು ಹೇಳಿದರು ಕಲ್ಪನೆ ಹೇಳಲಿಲ್ಲ ಸಂಘ ಪರಿವಾರದಿಂದ ಹೀಗಾಗಿದೆ ಎಂದು ನಾನು ಹಾಗೆ ಹೇಳುವುದಕ್ಕಾಗುವುದಿಲ್ಲ Because I have some legitimate right to speak about the police ಹೇಗೆ ಪೋಲೀಸ್‌ನವರು ತಪ್ಪು ಮಾಡುತ್ತಾರೆಂದರೆ, ಇವರು Section 144 ಜಾರಿಗೆ ತರುವುದು Section 144 ಅನ್ನು ಜಾರಿಗೆ ತರುವುದೇಕೆ? When you have efficient police in Karnataka, what made you to put Section 144? Curfew declare ಮಾಡುವುದು You are more efficient, you know Why do you want to put curfew? ಯೋಚನೆ ಮಾಡಿ ಸಾರ್ ತಾವು encounter ಮಾಡಿದರೆ ನಿಮಗೆ authority ಇದೆ But, ನಮ್ಮನ್ನು ಹೊಡೆಯುವುದಕ್ಕೆ ಪೋಲೀಸ್‌ನವರು ಬರುತ್ತಾರೆ ಅವರನ್ನು ನಾವು ಮುಟ್ಟಿದರೆ ನಮ್ಮ ಮೇಲೆ case ಹಾಕುವುದೇ? ಇದು ನ್ಯಾಯವೇ? ನಿಮಗಿರುವ rights ನಮಗಿದೆ ಎಂದು ನಾವು ಹೊಡೆಯುವುದಕ್ಕೆ ಶುರು ಮಾಡಿದರೆ ಏನು ಮಾಡುತ್ತೀರಿ? Curfew,

encounter ಮಾಡಿ ಎಂದು ಹೇಳುವುದು ಆ ತರಹ ಆಗಿದೆ ಇದು Permission ಏಕೆ ಕೊಟ್ಟಿದ್ದಿರಿ? ಸದ್ದಾಂ ಹುಸೇನ್ ಬಗ್ಗೆ ನಿಮಗೆ history ಗೊತ್ತಿದೆಯೇ? ಸದ್ದಾಂ ಹುಸೇನ್ ಯಾರೆಂದು ಗೊತ್ತಿದೆಯೇ? Commercial Street ನಲ್ಲಿ Sub-Inspector ಯಾರಾರೂ ಆಗಿರಲಿ, ಅವರನ್ನು ಕರೆಯಿರಿ What is the history of Saddam Hussein ಎಂದು ಕೇಳಿ ಗೊತ್ತಿದೆಯೇ? ಎಲ್ಲಿ ಓದಿದ್ದಾರೆಂದು ಗೊತ್ತಿದೆಯೇ, ಗೊತ್ತಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ಪದೇ ಪದೇ ಸದ್ದಾಂ ಹುಸೇನ್ ಬಗ್ಗೆ ಮಾತನಾಡಬಾರದು Entire world ನಲ್ಲಿ India ಕ್ಕೆ ಯಾರಾದರೂ best friend ಇದ್ದಿದ್ದರೆ ಸದ್ದಾಂ ಹುಸೇನ್ ಇದ್ದಿದ್ದು You cannot comment on Saddam Hussein like that every time ಸಾರ್, ಇಡೀ Muslim ವಿಶ್ವದಲ್ಲಿ ಸದ್ದಾಂ ಹುಸೇನ್ ಭಾರತಕ್ಕೆ ಕಷ್ಟ ಕಾಲದಲ್ಲಿ ಆಗಿರುವುದನ್ನು ಯಾರೂ ಮರೆಯುವ ಹಾಗಿಲ್ಲ You cannot comment like that

ಶ್ರೀ ಎಸ್ ರಾಜೇಂದ್ರನ್ ಮಾನ್ಯ ಅಧ್ಯಕ್ಷರೆ, comment ಅಂದರೆ ಅದು ಯಾವ subject ನಲ್ಲಿ conclusion ಆಗುತ್ತದೆಂದು ನಮ್ಮ hon'ble friend ಗೆ ಗೊತ್ತಿಲ್ಲ ನಾನು ಏತಕ್ಕೆ ಹೇಳಿದ್ದೇನೆಂದರೆ, ಸದ್ದಾಂ ಹುಸೇನ್‌ರವರನ್ನು quote ಮಾಡುವ ತರಹ ಹಿಂದೂ ರಾಜ್ಯ ಮಾಡಿದ್ದಾರಲ್ಲ, ಅದನ್ನೂ quote ಮಾಡುತ್ತೇನೆ ನಾನು ಇನ್ನೂ ಯಾವುದನ್ನೂ conclusion ಮಾಡದಿದ್ದಾಗ ಸದ್ದಾಂ ಹುಸೇನ್ ಎಂದರೆ, It is a very important subject ಸದ್ದಾಂ ಹುಸೇನ್‌ಗೆ ಈ ತರಹ ಆಗಬಾರದೆಂದು ಇಡೀ ದೇಶ ಅವರಿಗೋಸ್ಕರ mercy ಕೊಟ್ಟಿದೆ ಅದೇ ಸದ್ದಾಂ ಹುಸೇನ್ ಬಗ್ಗೆ ತಮಿಳುನಾಡು Chief Minister ಏನು ಹೇಳಿದ್ದಾರೆ 'ನನ್ನ ಮುಖವನ್ನೇ cover ಮಾಡಬಾರದು, ತೆಗೆಯಿರಿ, ನನ್ನ ಪ್ರಾಣ ಹೋದರೇನೂ ಚಿಂತೆಯಿಲ್ಲ' ಎಂದು ಸದ್ದಾಂ ಹುಸ್ಸೇನ್ ಹೇಳಿದ್ದಾರೆಂದು ಹೇಳಿದ್ದಾರೆ Why I am quoting Mr Saddam Hussein ಅಂದರೆ, ಮಾನ್ಯ ಮಾಧುಸ್ವಾಮಿಯವರು ಹೇಳಿದ ಪ್ರಕಾರ, ನಾನು ಸದ್ದಾಂ ಹುಸೇನ್ ವಿರುದ್ಧವಾಗಿ ಮಾತನಾಡುತ್ತಿಲ್ಲ I am not saying against him Why I am quoting is, ಒಬ್ಬ Police Officer ಗೆ ಅವರ ಬಗ್ಗೆ ಗೊತ್ತಿದೆಯೇ? Freedom fighter ಮೇಲೆ ಮಾತನಾಡುವ ಸಂದರ್ಭದಲ್ಲಿ ಮಹಾತ್ಮಗಾಂಧಿಯವರೊಂದಿಗೆ, ನಾವು quote ಮಾಡುತ್ತೇವೆ ಅವರನ್ನು ಯಾರು shoot ಮಾಡಿದ್ದಾರೆಯೋ ಅವರನ್ನೂ quote ಮಾಡಿದ್ದೇವೆ ಅದರಲ್ಲಿ ತಪ್ಪೇನಿಲ್ಲವೇ? ಪ್ರತಿಯೊಂದಕ್ಕೂ ಅವರು ಓದಿರುವುದು ನಿಮಗೆ

ಗೊತ್ತಿದೆಯೇ? ಅವರೇನು ಕೆಲಸ ಮಾಡಿದ್ದಾರೆಂದು ಗೊತ್ತೇ? ಅವರು ನಮ್ಮ ಊರಿಗೆ ಎಷ್ಟು ಸಹಾಯ ಮಾಡಿದ್ದಾರೆಂದು ಗೊತ್ತೆ? ನಾನು ಇನ್ನೂ subject ಗೇ ಬಂದಿಲ್ಲವೇ? ಪ್ರತಿಯೊಂದನ್ನೂ ಅವರು quote ಮಾಡಲೇಬೇಕು ಇಂಥವೆಲ್ಲ ಗೊತ್ತಿಲ್ಲವೆನ್ನುವ ಅಧಿಕಾರಿಗಳಿದ್ದಾರೆ Simply, Circle Inspector ಆಗಿರಲಿ, Sub-Inspector ಆಗಿರಲಿ ಅಷ್ಟು easy ಯಾಗಿ permission ಕೊಟ್ಟುಬಿಡುತ್ತಾರೆಯೇ? ಅವರ history ಏನೂ ಗೊತ್ತಿಲ್ಲ, ಯಾರ್ಯಾರು ಅದನ್ನು lead ಮಾಡುತ್ತಿರುವುದು ಗೊತ್ತಾಗುವುದಿಲ್ಲ ಅವರಿಗೂ ಹಾಗೇ ಮಾಡುತ್ತಿದ್ದಾರೆಯೋ, ಅದೇ ತರಹ ಹಿಂದೂ procession ಅಂದರೆ ಅವರಿಗೂ ಹಾಗೇ ಮಾಡುತ್ತಾರೋ? ಅವನು ಹಿಂದೂ procession ಹೋಗುತ್ತಿದ್ದಾನೆ ಅವನು Hinduism ಹೇಳುತ್ತಿದ್ದಾನೆ ಬ್ರಾಹ್ಮಣರ ಗುಡಿಗೆ Schedule Casteನವರನ್ನು ಹಾಕಿಬಿಡುತ್ತಾರೆ Schedule Casteನವನು ಆದಿದ್ರಾವಿಡರನ್ನು ಹಿಂದೂ ಎನ್ನುತ್ತಾನೆ Who is Hindu? Who is Christian? Who is Muslim? Who accepts the Prophet, ಇದು religion ಈ religion ನದ್ದು Law and Order ಯಾವ ಕಾರಣದಿಂದಲೂ ಆಗಬಾರದು ಆ Law and Order ಕಾರಣ ಬರುವುದಕ್ಕೆ ಕೇವಲ ಆ religious leaders ಮಾತ್ರವಲ್ಲ, police also Police should conduct a proper enquiry with the leaders Who is leading this? ನಾಳೆ ಇದು ಏನಾದರೂ ಆದರೆ ಯಾರ ಮೇಲೆ ನಾನು action ತೆಗೆದುಕೊಳ್ಳಬೇಕೆಂದು ಅವರು failure ಆಗಿದ್ದರಿಂದ police has failed in this matter ಎಂದು ಹೇಳಿ ನನಗೆ ಅವಕಾಶ ಕೊಟ್ಟಿದ್ದಕ್ಕೆ ನಾನು ಧನ್ಯವಾದ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ

ಶ್ರೀ ಆರ್ ರೋಷನ್ ಬೇಗ್ (ಜಯಮಹಲ್) ಸನ್ಮಾನ್ಯ ಸಭಾಧ್ಯಕ್ಷರೆ, ಬೆಂಗಳೂರಿನಲ್ಲಿ ಹಾಗೂ ಮಂಗಳೂರಿನಲ್ಲಿ ಏನು ಗಲಭೆಗಳಾಯಿತು, ನಾನು ಆ ಬಗ್ಗೆ ಯಾವ ಸದಸ್ಯರು ಮಾತನಾಡಿದ್ದಾರೆ ಅದನ್ನೇ repeat ಮಾಡುವುದಕ್ಕೆ ಹೋಗುವುದಿಲ್ಲ 2-3 ವಿಷಯಗಳನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ ಪ್ರತಿಯೊಂದು ಸಾರಿ ಇಂಥ ಗಲಭೆಗಳಾದರೆ, ಏನಾದರೂ ಇಂಥ tension ಆದರೆ, ನಮ್ಮ Home Minister ರವರು, ನಮ್ಮ Home Secretary ಯವರು ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯುವುದು, ಆಮೇಲೆ, Central CRPF ತರಿಸುವುದು ಇದೆ ಬೇರೆ forces ಬಂದರೆ ಏನು ಮಾಡಬೇಕೆಂದು ಹೇಳಿದರೆ, allowances ನಾವು ಕೊಡಬೇಕು, ಮತ್ತೆ ಅವರಿಗೆ ಹೈದರಾಬಾದ್‌ನಿಂದ ಬರಬೇಕು, ಇಲ್ಲವೆಂದರೆ ಕೊಯಮುತ್ತೂರಿನಿಂದ ಬರಬೇಕು, ಮದ್ರಾಸ್‌ನಿಂದ

ಬರಬೇಕು ಮೊನ್ನೆ ಬೆಂಗಳೂರು ನಗರದಲ್ಲಿ ಗಲಾಟೆಗಳು ಏನಾಯಿತು, ಆ ಗಲಾಟೆಗಳು Rapid Action Force ಬೆಂಗಳೂರು ನಗರಕ್ಕೆ ಬಂದ ಮೇಲೆ stop ಆಯಿತು ಅಂದರೆ, ನಾನು ತಮ್ಮ ಮುಖಾಂತರ ಸರ್ಕಾರಕ್ಕೇನು ಮನವಿ ಮಾಡಿಕೊಳ್ಳುತ್ತೇನೆಂದರೆ, ಬೆಂಗಳೂರು ನಗರದಲ್ಲಿ ದಯವಿಟ್ಟು ಒಂದು permanent Rapid Action Force station ಮಾಡಿಸಿ ಮುಂದೇನಾದರೂ ಒಂದು ಗಲಾಟೆಯಾದರೆ, ಬೇರೆ ಕಡೆಯಿಂದ RAF ತರಿಸುವುದು ಬೇಡ Rapid Action Force ತರಿಸಿಕೊಂಡರೆ ಅದು ಇಲ್ಲಿ ಬೆಂಗಳೂರಿನಲ್ಲಿದ್ದರೆ ನೀವು ಅವರಿಗೆ ಭತ್ಯೆ ಕೊಡುವ ಪ್ರಶ್ನೆ ಬರುವುದಿಲ್ಲ ಊಟ ಕೊಡುವ ಪ್ರಶ್ನೆ ಬರುವುದಿಲ್ಲ ಅವರದೇ ಎಲ್ಲಾ arrangements ಇರುತ್ತದೆ ಹೀಗಾಗಿ ನಾನು ಮಾನ್ಯ ಗೃಹ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ ದಯಮಾಡಿ ಬೆಂಗಳೂರಿನಲ್ಲಿ ಒಂದು Rapid Action Force ನ permanent station ಮಾಡಿ ನಾನೇನು ಆ ಪಕ್ಷ ಈ ಪಕ್ಷ ಎಂದು ಅವರಿವರ ಬಗ್ಗೆ ಆಪಾದನೆ ಮಾಡುವುದಿಲ್ಲ ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು ಆ ದಿವಸ ಗಲಾಟೆಯಾದ ನಂತರ ರಾತ್ರಿ ಒಂದು ಗಂಟೆಯ ಸಮಯದಲ್ಲಿ ಆಸ್ಪತ್ರೆಗೆ ಬಂದಿದ್ದರು ಆಗ ನಾನೂ ಕೂಡ ಅವರ ಜೊತೆಯಲ್ಲಿದ್ದೆ ಅವರು ಆ ದಿವಸ ರಾತ್ರಿ ಆಸ್ಪತ್ರೆಗೆ ಬಂದು ಎಲ್ಲರನ್ನು ನೋಡಿ ಎಲ್ಲರಿಗೂ ಸಹಾಯ ಮಾಡಿ ಹೋದರು ನಾನು ಈ ಮೊದಲು ಶಿವಾಜಿನಗರ ಕ್ಷೇತ್ರದಿಂದ ಎರಡು ಸಾರಿ ಎಂಎಲ್ಎ ಆಗಿದ್ದೇನೆ ಈಗ ಅವರು ಆ ಕ್ಷೇತ್ರದಿಂದ ಪ್ರತಿನಿಧಿಸುತ್ತಿದ್ದಾರೆ ನಾನೇನು ಅವರ ಮೇಲೆ ಆಪಾದನೆ ಮಾಡುವುದಿಲ್ಲ 19, 20, 21, ನೇ ತಾರೀಖಿನ ದಿನಗಳಂದು ಮೂರು ದಿವಸ ಏನು ಗಲಾಟೆಯಾಯಿತು ಆ ಸಂದರ್ಭದಲ್ಲಿ ಮಾನ್ಯ ಕಟ್ಟಾ ಸುಬ್ರಹ್ಮಣ್ಯರವರು ಬಹಳ ಒಳ್ಳೆಯ ಕೆಲಸ ಮಾಡಿದರು ಆದರೆ, 19 ರಂದು ಏನು ಇವರು ಸದ್ದಾಂ ಹುಸೇನ್ ರ್ಯಾಲಿ ಎಂದು ಹೇಳುತ್ತಿದ್ದಾರೆ, ಸದ್ದಾಂ ಹುಸೇನ್ ರ್ಯಾಲಿಗೆ people's front ಎಂದು ಒಬ್ಬರು ರ್ಯಾಲಿಯನ್ನು organize ಮಾಡಿದರು ಅದರಲ್ಲಿ, it was all party meeting ಮಾನ್ಯರಾದ ಧರ್ಮಸಿಂಗ್ ರವರು, ಮಲ್ಲಿಕಾರ್ಜುನ ಖರ್ಗೆಯವರು, ಇಕ್ಬಾಲ್ ಅನ್ಸಾರಿ ಯವರು, ಮೆರಾಜುದ್ದೀನ್ ಪಟೇಲ್‌ರವರು, ಜನತಾ ದಳದ ಎಂಎಲ್‌ಸಿ ಯಾಗಿರತಕ್ಕಂಥ ಅಜೀಮ್ ರವರು, ಬಂಗಾರಪ್ಪನವರು, ಹೀಗೆ all party meeting ಆಯಿತು ಆದರೆ, procession ಅನ್ನು ಮಾಡುತ್ತೇವೆಂದು ಯಾರೂ ಹೇಳಿರಲಿಲ್ಲ ಇವತ್ತು ಬೆಂಗಳೂರು ನಗರದಲ್ಲಿ ಹೇಗಿದೆ ಎಂದರೆ, ಹೆಣ ತೆಗೆದುಕೊಂಡು ಹೋಗುವುದಕ್ಕಾಗುವುದಿಲ್ಲ ಹೆಣ ತೆಗೆದುಕೊಂಡು

ಹೋದರೂ ಅದನ್ನು van ನಲ್ಲಿ ಹಾಕಿಕೊಂಡು ಹೋಗಬೇಕೆ ಹೊರತು procession ನಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಆಗುವುದಿಲ್ಲ ಅಷ್ಟರ ಮಟ್ಟಿಗೆ ಇವತ್ತು ಬೆಂಗಳೂರಿನಲ್ಲಿ traffic ಇದೆ ಅದರೆ, ಆ ದಿವಸ police ನವರ permission ಇಲ್ಲದೆ ಎಲ್ಲಿಂದ procession ಶುರುವಾಯಿತು? ಏಕೆ permission ಕೊಟ್ಟರು? ನನಗೆ ಆ Sunday ದಿವಸ ಬಹಳ ನೋವಾಯಿತು 19ನೇ ತಾರೀಖು 4-30 ಇರಬೇಕು ಆಗ ನಾನು ಬೆಂಗಳೂರು ನಗರದಲ್ಲಿರತಕ್ಕಂಥ ಒಬ್ಬ Additional Commissioner ರವರಿಗೆ phone ಮಾಡಿದೆ ಅವರಿಗೆ ಏನು ರೋಗ ಬಂದಿದೆಯೋ ಏನೋ! ಮೊದಲು ಮಂಗಳೂರಿನಲ್ಲಿದ್ದಾಗ ಅವರು ಒಳ್ಳೆಯ dynamic officer ಆಗಿದ್ದರು ಆ ದಿವಸ ನಾನು 4-30 ಕ್ಕೆ phone ಮಾಡಿ Seppings road ನಲ್ಲಿ ಏನು ಗಲಾಟೆಯಾಗಿದೆ ನೋಡಿ ಎಂದು ಹೇಳಿದರೆ, ಅವರು Seppings road ಎಲ್ಲಿದೆ ಎಂದು ಕೇಳಿದರು ಆಗ ನಾನು, ಸ್ವಾಮಿ ಭಾರತಿ ನಗರ police station ನ ವ್ಯಾಪ್ತಿಯಲ್ಲಿ ಬರುತ್ತದೆ ಎಂದು ಹೇಳಿದೆ ನಂತರ Commissioner ರವರಿಗೂ ಹೇಳಿದೆ ಇವರಿಗೆ ಏನು seriousness ಇಲ್ಲ ಆಲ್ಲಿ procession ಶುರುವಾದ ತಕ್ಷಣ ಅಲ್ಲಿ ಎರಡು ತುಕಡಿಗಳನ್ನು ಹಾಕಿದರೆ, I strongly condemn the procession ಸದ್ದಾಂ ಹುಸೇನ್ ರ್ಯಾಲಿಯ ಮೀಟಿಂಗ್ ದಿವಸ procession ಆಗಬಾರದಾಗಿತ್ತು ಯಾರು ಹೇಳಿದರು? ಆ processionನಲ್ಲಿ ದೊಣ್ಣೆಗಳನ್ನು ಹಿಡಿದುಕೊಂಡು, ಕತ್ತಿಗಳನ್ನು ಹಿಡಿದುಕೊಂಡು, procession ಅನ್ನು ಮಾಡುವುದಕ್ಕೆ ಯಾರು permission ಕೊಟ್ಟರು? I strongly condemn. ಅವರು ಕೆಲವು ಕಡೆ ಗಲಾಟೆ ಮಾಡಿದ್ದರೆ ಅದು ನಿಜ ಅದನ್ನು ನಾನು condemn ಮಾಡುತ್ತೇನೆ ಅದರೆ police ನವರು Tannery road ನಿಂದ procession ಆಗಿ ದೇವರಜೀವನಳ್ಳಿಯಿಂದ procession ಆಗಿ Seppings road ವರೆಗೂ ಬಂದು Palace Talkies road ಗೆ ಬರುವವರೆಗೂ ಇವರೇನು ಕಣ್ಣುಮುಂಚಿಕೊಂಡಿದ್ದರೆ? ನಾನು ಎಲ್ಲಾ ಪೋಲಿಸರ ಬಗ್ಗೆ condemn ಮಾಡುವುದಿಲ್ಲ Shivaginagar Police Inspector Mr Kalyana Shettey, ಇಡೀ ಜನಾಂಗದವರು ಅಲ್ಲಿ, both Hindus and Muslims of that area ಆ ಕಲ್ಯಾಣ ಶೆಟ್ಟಿರವರನ್ನು ಏನು ಹೊಗಳುತ್ತಿದ್ದಾರೆ, ಅವರು ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ ಅವರಿಗೇನಾದರೂ President medal ಕೊಡಬೇಕೆಂದು ನನ್ನ ವಿನಂತಿ ಆತ ಒಳ್ಳೆಯ ಕೆಲಸ ಮಾಡಿದ್ದಾನೆ ಎಲ್ಲರ ಬಗ್ಗೆ ಸುಮ್ಮಸುಮ್ಮನೆ ಹೇಳಿ ಬಿಡುವುದಲ್ಲ, ಇವರು ಚೆನ್ನಾಗಿ ಮಾಡಿದರು,

ಅವರು ಚೆನ್ನಾಗಿ ಮಾಡಲಿಲ್ಲ ಎನ್ನುವುದಲ್ಲ ಯಾರು ಚೆನ್ನಾಗಿ ಕೆಲಸ ಮಾಡುತ್ತಾರೆ ಜನ ಕೂಡ ಅವರನ್ನು ಹೊಗಳುತ್ತಾರೆ 19 ರಂದು ಆ ತರಹ ಆಯಿತು 20 ನೇ ತಾರೀಖು ಬೆಳಿಗ್ಗೆ ತಿಮ್ಮಯ್ಯ ರೋಡ್, Seppings road, ಅಲ್ಲಿರತಕ್ಕಂಥ ಮಾರ್ವಾಡಿಗಳ ಅಂಗಡಿಗಳನ್ನು ಸುಟ್ಟುಬಿಟ್ಟಿದ್ದರು ನಾನು ಅಲ್ಲೆಲ್ಲಾ ಹೋಗಿ ಬಂದೆ 20 ನೇ ತಾರೀಖು ಲಾವಣ್ಯ ಟಾಕೀಸ್, ನಾಗ ಟಾಕೀಸ್, ಆ ಕಡೆಗೆ ರಾತ್ರಿ ಗಲಾಟೆಯಾಗಿದೆ ಆಗ ಪೋಲಿಸ್‌ನವರೇನು ನಿದ್ದೆ ಮಾಡುತ್ತಿದ್ದರಾ? 21 ನೇ ತಾರೀಖಿನ ದಿವಸ ಒಂದು ವಿರಾಟ್ ಹಿಂದೂ ಸಮಾವೇಶ ಇದೆ ಎಂದು ಇವರಿಗೆಲ್ಲ ಗೊತ್ತಿತ್ತು ಅಲ್ಲಿಂದ procession ಬರುತ್ತದೆಂದು ಗೊತ್ತಿತ್ತು ನಾನು Sunday ಬೆಳಿಗ್ಗೆ 11–30 ಕ್ಕೆ Police Commissioner office ಗೆ ಹೋಗಿ ನೇರವಾಗಿ Police Commissioner ರವರ ಹತ್ತಿರ ಮಾತನಾಡಿದ್ದೇನೆ ಇಲ್ಲಿ ಎಲ್ಲಾ ನಮಗೆ ಫ್ಯಾಕ್ಸ್ ಬಂದಿದೆ ಇಲ್ಲಿ ಎಲ್ಲಾ ಗಲಾಟೆಯಾಗಬಹುದು ಎಂದು ಹೇಳಿದ್ದಕ್ಕೆ Police Commissioner ರವರು ಆಯಿತು ಚೇಸ್ತಾಂ ಚೂಸ್ತಾಂ ಎಂದು ಹೇಳಿದರು ಅಲ್ಲಿಂದ ನನಗೇಕೋ convince ಆಗಿಲ್ಲ ಸನ್ಮಾನ್ಯ ದೇವೇಗೌಡರವರಿಗೆ ಫೋನು ಮಾಡಿ ಹೇಳಿದೆ ಸನ್ಮಾನ್ಯ Chief Minister ಗೆ ಫೋನು ಮಾಡಿದೆ ಆದರೆ ಅವರು ನನಗೆ ಸಿಕ್ಕಲಿಲ್ಲ ನಂತರ ನಾನು Home Minister ಮನೆಗೆ ಹೋದೆ ಪಾಪ ನಾನು ಅವರ ಮನೆಗೆ ಮಧ್ಯಾಹ್ನ ಹೋಗಿ Home Minister ಗೆ disturb ಮಾಡಿದೆ ಆಗ ಅವರು ನನಗೆ 15–20 ನಿಮಿಷ ಟೈಂ ಕೊಟ್ಟರು, ಹೀಗಾಗಿ ನಾನು ಅವರ ಜೊತೆಯಲ್ಲಿದ್ದೆ ನಾನು ಅವರ ಜೊತೆಯಲ್ಲಿ ಮಾತನಾಡುವಂಥ ಸಂದರ್ಭದಲ್ಲಿಯೇ ನನಗೆ ಅಲ್ಲಿ ಗಲಾಟೆಗಳು ಶುರುವಾಗಿದೆ ಎಂದು ಫೋನುಗಳು ಬರುತ್ತಿದ್ದವು ಏನು control ಇತ್ತು? ಬೆಂಗಳೂರು ಸಿಟಿನಲ್ಲಿರುವ Police Commissioner office ನಲ್ಲಿರುವ ಕೆಲವು ಜನರಿಗೆ common sense ಇಲ್ಲ ನಂತರ ಸಂಜೆ Governor ರವರಿಗೆ message ಕೊಟ್ಟು, ನಂತರ Home Minister ರವರಿಗೆ message ಕೊಟ್ಟ ಮೇಲೆ ರಾತ್ರಿ 9–00 ಕ್ಕೆ ಸನ್ಮಾನ್ಯ ಪ್ರಕಾಶ್‌ರವರು ಫೋನು ಮಾಡಿ ನಾಳೆ Rapid Action Force ನವರು ಬರುತ್ತಿದ್ದಾರೆಂದು ಹೇಳಿದರು Rapid Action Force ನವರು ಬಂದ ಮೇಲೆ city control ಗೆ ಬಂತು ನಾನು ಏನು ಹೇಳುವುದು ಎಂದರೆ, ಕೆಲವು ಪೋಲಿಸ್‌ನವರು ಆ ಬೀದಿಗಳಿಗೆ ಹೋಗಿ ಬೈತುಲ್ ಮಾಲ್, ಚಾರ್ಮಿನಾರ್ ರೋಡ್, ಗಳಿಗೆ ಹೋಗಿ ಅಲ್ಲಿರತಕ್ಕಂಥ elders, ಒಬ್ಬ 80 years old man ಮೇಲೆ ಇವರೇನು violence ಮಾಡುತ್ತಾರೆ ಆ 80 years old man,

ಅವರು ಆಸ್ಪತ್ರೆಗೆ admit ಆಗುತ್ತಾರೆ ಅವರ ಮಕ್ಕಳನ್ನು ಹಿಡಿದುಕೊಂಡು ಬಂದು ಮನೆಗಳಿಗೆಲ್ಲಾ ನುಗ್ಗಿ ಈ ರೀತಿ ಮಾಡಿದ್ದು ಸರಿಯಿಲ್ಲ ಸನ್ಮಾನ್ಯ ಪ್ರಕಾಶ್ ರವರೆ, ನನಗೆ ಒಂದೊಂದು ಸಾರಿ ಇದು saffronization of Police force ಎಂದು ಅನುಮಾನ ಬರುತ್ತದೆ ದಯವಿಟ್ಟು ಇದನ್ನು ಮಾಡುವುದಕ್ಕೆ ಬಿಡಬೇಡಿ ನಾನು ಈ force ಆ force, RSS ಈ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ If I have to fight fundamentalism, I have to fight fundamentalism in my own community first. ನಾನು first time MLA ಆದಾಗ, ಇದೇ ಶಿವಾಜಿನಗರ ಸ್ಟೇಡಿಯಂ ನಲ್ಲಿ All India Babari Masjid Action Committee meeting ಮಾಡುವುದಕ್ಕೆ ನಾನು ಬಿಡಲಿಲ್ಲ ಶಾಹಬುದ್ದೀನ್ ಎನ್ನುವಂಥ ಒಬ್ಬ ಮಹಾಶಯ ಡೆಲ್ಲಿಯಿಂದ ಬಂದರು ಮೊದಲನೇ ಬಾರಿಗೆ All India Babari Masjid Action Committee meeting ಅನ್ನು Shivaginagar stadium ನಲ್ಲಿ ಮಾಡುವುದಕ್ಕೆ ಹೊರಟ್ಟಿದ್ದರು ರಾಮಕೃಷ್ಣ ಹೆಗಡೆಯವರು ಡೆಲ್ಲಿಗೆ ಹೋದರು, ಅವರಿಂದ DGP ನಿಜಾಮುದ್ದೀನ್ ರವರಿಗೆ ಫೋನು ಮಾಡಿಸಿ ಆ meeting cancel ಮಾಡಿಸಿದೆ ನಾನು ಕೇವಲ ಒಂದು ಕೋಮಿನವರಿಗೆ ಸಮಾಧಾನ ಹೇಳಬೇಕು Playing to the gallery ಮಾಡಿ leader ಆಗಬೇಕು ಎಂದು ನನಗೆ ಆಸೆಯಿಲ್ಲ ಆದರೆ, ದಯವಿಟ್ಟು Saffronization, Coastal belt ನಿಂದ ಬೆಂಗಳೂರಿಗೆ ಏನು ಬರುತ್ತಿದೆ, ಗುಜರಾತ್ experiment ಇಲ್ಲಿ ಮಾಡುವುದು ಬೇಡವೆಂದು ನಾನು ತಮ್ಮ ಮುಖಾಂತರ ಅವರಿಗೆ ಮನವಿ ಮಾಡಿಕೊಳ್ಳುತ್ತೇನೆ Thank you

ಅಧ್ಯಕ್ಷರು ಮಾನ್ಯ ವೈಜನಾಥ್ ಪಾಟೀಲ್‌ರೇ, ನೀವು ಗುಲ್ಬರ್ಗಾದವರು, ನೀವು ಬೆಂಗಳೂರು ಹಾಗೂ ಮಂಗಳೂರು ಗಲಭೆಗಳನ್ನು ನೋಡಿಲ್ಲ ನೀವು ಇದರ ಬಗ್ಗೆ ಏನು ಮಾತನಾಡುತ್ತೀರಿ?

ಶ್ರೀ ವೈಜನಾಥ್ ಪಾಟೀಲ್ (ಚಿಂಚೋಳಿ) . ಮಾನ್ಯ ಅಧ್ಯಕ್ಷರೆ, ಈ ಹಿಂದೂ ಮುಸ್ಲಿಂ ಅಥವಾ ಬೇರೆ communalism ಈ ದೇಶದಲ್ಲಿ ಬೆಳೆಸುತ್ತಿದ್ದಾರೆ, ಅದರಲ್ಲಿ ವಿಶೇಷವಾಗಿ ಸಣ್ಣ ಮಕ್ಕಳಲ್ಲಿ ಭಾವನೆಗಳನ್ನು ಏನು ಬೆಳೆಸುತ್ತಿದ್ದಾರೆ, ಬಹಳ conversion ಆಗುತ್ತಿದೆ ಹಿಂದೂಗಳ ಸಂಖ್ಯೆ ಕಡಿಮೆಯಾಗುತ್ತಿದೆ ಎಂದು ಕೆಲವು ಸಂಘಟನೆಗಳು ಪ್ರಚಾರ ಮಾಡುತ್ತಿದ್ದಾರೆ conversion ಹಿಂದೂ ಧರ್ಮ ಬಿಡುವುದು ಇದೇನು ಹೊಸದಲ್ಲ ಮಹಾತ್ಮ ಗೌತಮ ಬುದ್ಧ ಸುಮಾರು ವರ್ಷಗಳ ಹಿಂದೆ ಈ ಪದ್ಧತಿಯ ವಿರುದ್ಧ ಅವರು

convert ಆದರು ಅವರು ಹೊಸ ಧರ್ಮವನ್ನು ಸ್ಥಾಪನೆ ಮಾಡಿದರು 12ನೇ ಶತಮಾನದಲ್ಲಿ ಬಸವೇಶ್ವರರು ಕೂಡ ಈ ವ್ಯವಸ್ಥೆಯ ವಿರುದ್ದ ಪ್ರತಿಭಟಿಸಿ ಅವರು ಹೊಸ ಧರ್ಮ ಸ್ಥಾಪಿಸಿದರು, ಆಗ ಎಂಥ ಪರಿಸ್ಥಿತಿ ಇತ್ತೋ ಅದರ ಪ್ರಶ್ನೆ ಬೇರೆ ಅದರೆ ಇತ್ತೀಚಿನ ಕಾಲದಲ್ಲಿ ಅಂಬೇಡ್ಕರ್‌ರವರು ಬುದ್ದ ಧರ್ಮಕ್ಕೆ convert ಆದರು ಆ ಸಮಯದಲ್ಲಿ ಗುರು ಗೋಳವಾಲ್ಕರ್‌ರವರು ಜೀವಂತವಾಗಿದ್ದರು, ಇಷ್ಟೆ ಅಲ್ಲ RSS ನ ಸರಸಂಗ ಸಂಚಾಲಕರಾಗಿದ್ದರು 1952 ರಲ್ಲಿ ಗೋಳವಾಲ್ಕರ್‌ರವರು RSS ನ ಸರಸಂಘಚಾಲಕ ಆಗಿದ್ದರು 1956 ರಲ್ಲಿ ಅಂಬೇಡ್ಕರ್‌ರವರು convert ಆದರು ಅವರು ಪುನ ಪುನ ಹೇಳುತ್ತಿದ್ದರು ನಾನು ಹಿಂದೂ ಆಗಿ ಹುಟ್ಟಿರಬಹುದು ಅದರೆ ಬಹುಶ ಸಾಯುವ ಕಾಲಕ್ಕೆ ಹಿಂದೂ ಆಗಿ ಸಾಯಲಿಕ್ಕಿಲ್ಲ ಎಂದರೆ ಅದನ್ನು ತಡೆಯಲಿಕ್ಕೆ ಯಾರೂ ಪ್ರಯತ್ನ ಮಾಡಲಿಲ್ಲ ಗೋಳವಾಲ್ಕರ್ ರವರು ಮಾಡಬೇಕಾಗಿತ್ತು ಇವತ್ತು ಗೋಳವಾಲ್ಕರ್ ರವರ ಜನ್ಮ ಶತಾಬ್ದಿಯ ಹೆಸರಿನ ಮೇಲೆ ಇಡೀ ತಾಲ್ಲೂಕುಗಳಲ್ಲಿ ಎಲ್ಲಾ ಕಡೆ ಹಿಂದೂ ಧರ್ಮದ ಅನೇಕ ಕಾರ್ಯಕ್ರಮಗಳು ನಡೆಯುತ್ತಿವೆ ಅವರು ತಡೆದಿಲ್ಲ ಅದರೂ ಅವರ ಹೆಸರು ಹಿಂದೂ ಸಂರಕ್ಷಕ ಎಂದು ಹೇಳುತ್ತಾರೆ ಒಂದು ವೇಳೆ ಅವರು ಹಿಂದೂ ಸಂರಕ್ಷಕ ಆಗಿದ್ದರೆ ಅವರು ಅಂಬೇಡಕರರನ್ನು ತಡೆಯಬೇಕಾಗಿತ್ತು ಅವರು ತಡೆಯಲಿಲ್ಲ ಆದರೆ ಇವತ್ತು ಅವರ ಹೆಸರಿನ ಮೇಲೆ ಎಲ್ಲಾ ಕಡೆ ದಂಧೆ ನಡೆಯುವ ಪ್ರಯತ್ನ ಮಾಡುತ್ತಿದ್ದಾರೆ ಬಹುತೇಕ ಎಲ್ಲಾ ತಾಲ್ಲೂಕುಗಳಲ್ಲಿ ಒಬ್ಬರು ಬರುತ್ತಾರೆ ಬಂದು ಹಿಂದೂ ಧರ್ಮ ನಾಶವಾಗುತ್ತಿದೆ, ಎಲ್ಲರೂ ಬೇರೆ ಧರ್ಮಕ್ಕೆ convert ಆಗುತ್ತಿದ್ದಾರೆಂದು ಭಾಷಣ ಮಾಡುತ್ತಾರೆ ಬುದ್ದ ಮತ್ತು ಬಸವೇಶ್ವರರವರನ್ನು ಬಿಟ್ಟರೂ ಈ ಕಾಲಕ್ಕೆ ಇವತ್ತು ಯಾರ ಹೆಸರಿನ ಮೇಲೆ ಸಭೆಗಳನ್ನು ಮಾಡುತ್ತಿದ್ದಾರೋ ಅವರು ತಡೆಯಲಿಕ್ಕೆ ಏನು ಮಾಡಿದ್ದಾರೆಂದು ಅವರು ಉತ್ತರ ಕೊಡಬೇಕು ಗೋಳವಾಲ್ಕರ್ ರವರು ಅಂಬೇಡ್ಕರ್‌ರವರಿಗೆ ನೀವು ಹೋಗಬೇಡಿ ಇಲ್ಲಿಯೇ ಇರಿ ಎನ್ನಬೇಕಾಗಿತ್ತು ಆ ವಿಚಾರ ಬಿಡಿ 20 ವರ್ಷಗಳ ಹಿಂದೆ ತಮಿಳುನಾಡಿನಲ್ಲಿ ಬಹಳಷ್ಟು ದಲಿತರು convert ಆದರು ನಮ್ಮ ಪೇಜಾವರ ಸ್ವಾಮಿಗಳೂ ಸಹ ಅಲ್ಲಿಗೆ ಹೋಗಿದ್ದರೆಂದು ನಾನು ಕೇಳಿದ್ದೆ ಈ ರೀತಿಯಾಗಿ ಕನ್ವರ್ಟ್ ಆಗತಕ್ಕಂಥದು ತಪ್ಪೆಂದು ಅವರಿಗೆ ಪೇಜಾವರ ಸ್ವಾಮಿಗಳು ಹೇಳಿದರಂತೆ ನೀವು ಹೇಳುವುದು ಸತ್ಯವಿದೆ, ಕನ್ವರ್ಟ್ ಆಗಿರುವುದು ತಪ್ಪು ಆದ್ದರಿಂದ, ನೀವು ಹೇಳಿದರೆ ನಾವು ವಾಪಸ್ಸು ಬರುತ್ತೇವೆಂದು ಕೆಲವು ಯುವಕರು ಆ ಸಂದರ್ಭದಲ್ಲಿ ಸ್ವಾಮಿಜಿಯವರಿಗೆ

ಹೇಳಿದರಂತೆ ಮತ್ತೆ ಅವರಿಗೆ ಏನು ಕೇಳಿದರೆಂದರೆ, ನಾವು ವಾಪಸ್ಸು ಬಂದ ಮೇಲೆ ನಾವುಗಳು ಯಾವ ಜಾತಿ, ಧರ್ಮಕ್ಕೆ ಸೇರಬೇಕೆಂದು ಸ್ವಾಮಿಜಿಯವರನ್ನು ಕೇಳಿದಾಗ, ಪೇಜಾವರ ಸ್ವಾಮಿಗಳು ಅಲ್ಲಿಂದ ಓಡುವುದಕ್ಕೆ ವ್ಯಾರಂಭ ಮಾಡಿದವರು ಬೆಂಗಳೂರಿನವರೆಗೂ ನಿಂತಿಲ್ಲ ಪ್ರತಿ ದಿನ ಪೇಜಾವರ ಸ್ವಾಮಿಯವರನ್ನು ಎಲ್ಲಾ ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ ಈಗಿನ ಕಾವೇರಿ ಚಳುವಳಿಯಲ್ಲಿಯೂ ಕೂಡ ಅವರೇ ಇದ್ದಾರೆ ನೀನು ಬ್ರಾಹ್ಮಣ ಆಗು ನಿನಗೆ ಜನಿವಾರ ಹಾಕುತ್ತೇನೆಂದು ಇವರು ಅವರಿಗೆ ಹೇಳಬಹುದಾಗಿತ್ತಲ್ಲವೇ? ಬಹುಶ ಬಸವೇಶ್ವರ ಅಥವಾ ಅವರ ಪಕ್ಕಾ ಅನುಯಾಯಿಗಳು ಯಾರಾದರು ಇದ್ದಿದ್ದರೆ ಲಿಂಗ ಹಾಕುತ್ತೇವೆಂದು ಹೇಳಬಹುದಾಗಿತು ಆದರೆ, ಪೇಜಾವಾರು ಸ್ವಾಮಿಗಳು ಹೇಳಲಿಲ್ಲ ಈ ಧರ್ಮಗಳು ಬಹಳ ವಿಚಿತ್ರವಿದೆ ಅದೇನೆಂದರೆ, ತಮ್ಮಲ್ಲಿರುವುದಕ್ಕೆ ಬಿಡುವುದಿಲ್ಲ ಮತ್ತೆ ಗುಡಿಯ ಒಳಗೆ ಬರುತ್ತಾರೆಂದು ಅವರ ವಿರುದ್ಧ ಮೆಂಟಾಲಿಟಿ ತಯಾರು ಮಾಡುತ್ತಾರೆ ಈ ರೀತಿಯಾದಾಗ ಅವರು ನಾಳೆದಿವಸ ಮಸೀದಿಮೆ ಜಾತೆ ಎನ್ನುತ್ತಾ ಅಲ್ಲಾ ಓ ಅಕ್ಬರ್ ಅಲ್ಲಾ ಎಂದು ಅಲ್ಲಿಗೆ ಹೋಗುತ್ತಾರೆ ಈ ಬಡ್ಡಿ ಮಕ್ಕಳು ತುರ್ಕರೆಲ್ಲಾ, ದಲಿತರಲ್ಲಾ ಆಗುತ್ತಿಲ್ಲ ಎಂದು ಇಸ್ಲಾಂ ಹೇಳುತ್ತಾರೆ ಆದ್ದರಿಂದ, ಅವರನ್ನು ಯಾವ ಧರ್ಮಕ್ಕೂ ಸೇರುವುದಕ್ಕೂ ಸಹ ಬಿಡುವುದಿಲ್ಲ ನಿಜವಾಗಿಯೂ ಇದು ಬಹಳ ವಿಚಿತ್ರವಾಗಿದೆ ಆದರೆ, ಇವೆಲ್ಲವನ್ನೂ ತಡೆಯುವುದಕ್ಕೆ ಗಾಂಧಿಯವರು ಪ್ರಯತ್ನ ಮಾಡಿದರು ಅವರು ಕೇವಲ ಸ್ವಾತಂತ್ರ್ಯ ಚಳುವಳಿಯನ್ನು ಮಾತ್ರ ಮಾಡಿಲ್ಲ ಆಗ ಅವರು ಹರಿಜನ ಮತ್ತು ಸ್ತ್ರೀ ಹಾಗೂ ಗ್ರಾಮೋದ್ಧಾರ ಈ ರೀತಿಯಾಗಿ ಅನೇಕ ಕಾರ್ಯಕ್ರಮಗಳನ್ನು ಅವರು ಹಾಕಿಕೊಂಡಿದ್ದರು ಹಿಂದೂ ಧರ್ಮ ಬಿಟ್ಟು ಹೋಗಬೇಡಿಯೆಂದು ದಲಿತರಿಗೆ ಮೀಸಲಾತಿಯನ್ನು ಕೊಡಿ ಎಂಬ ಎಲ್ಲಾ ಪ್ರಯತ್ನಗಳನ್ನು ಅವರು ಮಾಡಿದರು ಆದರೆ, ಈ ದೇಶದಲ್ಲಿ ಅವರಿಗೆ ಮೊದಲು ಹೊಡೆದುಬಿಟ್ಟರು ಆದರೆ, ಒಬ್ಬ ಬ್ರಿಟಿಷರಿಗೆ ಹೊಡೆದಂಥ ಇತಿಹಾಸ ಇದೆಯೇ? ಒಬ್ಬ ಬ್ರಿಟಿಷರಿಗೂ ಸಹ ಹೊಡೆದಿಲ್ಲ ಅದರೆ, ಗಾಂಧೀಜಿಯವರನ್ನು ಕೊಲೆ ಮಾಡಿರತಕ್ಕಂಥದ್ದೆ ಫಸ್ಟ್ ಟೈಂ

(ಈ ಹಂತದಲ್ಲಿ ಶ್ರಿ ಸಿದ್ದು ಸವದಿಯವರು ತಮ್ಮ ಸ್ಥಾನದಲ್ಲಿ ಕುಳಿತುಕೊಂಡು ಮಾತನಾಡುತ್ತಿದ್ದರು)

ಹಿಂದೂಗಳ ರೀಕೆದಾರರು ನಾವೇ ಇದ್ದೇವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ ಎಲ್ಲಕ್ಕಿಂಥ ಹೆಚ್ಚಾಗಿ ಗಾಂಧೀಜಿಯವರು ಮಾನವತಾವಾದಿಯಾಗಿದ್ದರು ಈ ದೇಶದಲ್ಲಿ ರಾಮರಾಜ್ಯ ಕಟ್ಟಬೇಕೆಂದು

ಗಾಂಧೀಜಿಯವರು ಪ್ರಯತ್ನ ಮಾಡಿದ್ದರು ಆದರೆ, ರಾಮರಾಜ್ಯ ಕಟ್ಟುವವರನ್ನು ಹೊಡೆದು ರಾಮನ ಗುಡಿಯನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿದರು ನನಗೆ ಗೊತ್ತಿರುವ ಹಾಗೆ ಇವತ್ತಿನ ದಿವಸ ಹಳ್ಳಿಗಳಲ್ಲಿರುವ ಎಷ್ಟೋ ಗುಡಿಗಳಲ್ಲಿ ಇರತಕ್ಕಂಥ ದೇವರ ಮೂರ್ತಿಗಳ ಮೇಲೆ ನಾಯಿಗಳು ಉಚ್ಚೆ ಉಯ್ಯುತ್ತವೆ ಅದನ್ನು ನೋಡುವಂಥ ಕೆಲಸವನ್ನು ಇವರು ಮಾಡುತ್ತಿದ್ದಾರೆಯೇ ಹೊರತು ಬೇರೇನು ಮಾಡುವುದಕ್ಕೆ ಇವರಿಂದ ಆಗಿಲ್ಲ ಆದರೆ, ರಾಮ ಮಂದಿರವೆಂದು ಕಟ್ಟುವೆವು ಈ ದೇಶದ ಯುವಕರ ಮತ್ತು ಮುಗ್ಧ ಜನರ ತಲೆಗಳನ್ನು ಕೆಡೆಸುವಂಥ ಕೆಲಸ ಮಾಡುತ್ತಿದ್ದಾರೆ

(ಗೊಂದಲ)

ಅಧ್ಯಕ್ಷರು – ಮಾತನಾಡುವುದಕ್ಕೆ ಅವರಿಗೆ ಅವಕಾಶ ಕೊಡಿ ಮಾನ್ಯ ವೈಜನಾಥ್ ಪಾಟೀಲ್‌ರವರೆ, ಬೇಗ ಮಾತನಾಡಿ ಮುಗಿಸಿ

ಶ್ರೀ ವೈಜನಾಥ್ ಪಾಟೀಲ್ – ನಾನು ನಿಜ ಹೇಳುವುದೇನೆಂದರೆ, ನನಗಂತೂ ದೇವರ ಮೇಲೆ ವಿಶ್ವಾಸ ಇಲ್ಲ ಆದರೆ, ಯಾರು ನಂಬಿಕೆ ಇಟ್ಟಿದ್ದಾರೆ ಮತ್ತು ಯಾರು ರೀಕೆದಾರರು ಇದ್ದಾರೆಯೋ ಅವರ ಸಲುವಾಗಿ ನಾನು ಹೇಳುತ್ತಿದ್ದೇನೆ ಈ ದೇಶದಲ್ಲಿ ಹಿಂದೂ ಧರ್ಮದ ಬಗ್ಗೆ ಯಾರು ರೀಕೆದಾರರೆಂದು ಇವತ್ತಿನ ದಿವಸ ಹೇಳಿಕೊಳ್ಳುತ್ತಿರುವವರು, ಮುಗ್ಧ ಜನರ ತಲೆಗಳನ್ನು ಕೆಡಿಸುತ್ತಾ ದೇಶವನ್ನು ಒಡೆಯುವ ಪ್ರಯತ್ನವನ್ನು ಮಾಡುತ್ತಿರುವವರ ಸಲುವಾಗಿ ನಾನು ಹೇಳುತ್ತಿದ್ದೇನಷ್ಟೆ ನಮ್ಮ ಬಿಜೆಪಿ ಪಕ್ಷದವರೆಲ್ಲರೂ ಅಂಥ ವಿಚಾರದವರೆಂದು ನಾನು ಹೇಳುತ್ತಿಲ್ಲ ಎಷ್ಟೋ ಕಾರಣಕ್ಕಾಗಿ ಅಲ್ಲಿಗೆ ಹೋಗಿರಬಹುದು ಆದರೆ, ವಿಶೇಷವಾಗಿ ಬಜರಂಗ ದಳ ಮತ್ತು ಕೆಲವು ಸಂಘಗಳು ಇದೇ ಕೆಲಸವನ್ನು ಮಾಡುತ್ತಿವೆ ಈ ದೇಶದಲ್ಲಿ ಇದು ಹೇಗೆ ಬೆಳೆಯುತ್ತಿದೆಯೆಂದರೆ,

(ಗೊಂದಲ)

ಅಧ್ಯಕ್ಷರು– ಮಾನ್ಯ ವೈಜನಾಥ್ ಪಾಟೀಲ್‌ರವರೆ, ತಾವು ಬೇಗ ಮುಗಿಸಿ ಕೋಮು ಗಲಭೆ ಬಗ್ಗೆ ಮಾತನಾಡುವುದನ್ನು ಬಿಟ್ಟು ಹಳೆಯ ವಿಚಾರಗಳ ಬಗ್ಗೆ ಮಾತನಾಡುತ್ತಿದ್ದೀರಿ ಮಾತನಾಡಿ ಬೇಗ ಮುಗಿಸಿ

ಶ್ರೀ ಎಂ ಆರ್ ಸೀತಾರಾಮ್.– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಸರಿಯಾದ ವಿಷಯವನ್ನು ಹೇಳುತ್ತಿದ್ದಾರೆ ಆದ್ದರಿಂದ, ಅವರಿಗೆ ಮಾತನಾಡುವುದಕ್ಕೆ ತಾವು ಅವಕಾಶ ಕೊಡಬೇಕು

ಶ್ರೀ ಬಿ ಆರ್ ಪಾಟೀಲ್ – ಮಾನ್ಯ ಅಧ್ಯಕ್ಷರೆ, ಎಲ್ಲದಕ್ಕೂ ಒಂದು ಇತಿಹಾಸ ಇರುತ್ತದೆ ಮಾನ್ಯ ವೈಜನಾಥ್ ಪಾಟೀಲ್‌ರವರು ಐತಿಹಾಸಿಕ ವಿಷಯಗಳ ಬಗ್ಗೆ ಹೇಳುತ್ತಿದ್ದಾರೆ

(ಗೊಂದಲ)

ಅಧ್ಯಕ್ಷರು – ಈಗ ಹಳೆಯ ವಿಚಾರಗಳನ್ನು ಪ್ರಸ್ತಾಪ ಮಾಡತಕ್ಕಂಥ ಅಗತ್ಯತೆ ಇಲ್ಲ ಕೋಮು ಗಲಭೆಯ ವಿಷಯಕ್ಕೆ ಸಂಬಂಧಪಟ್ಟಂತೆ ಮಾತನಾಡುವುದಾದರೆ ಮಾತ್ರ ಮಾತನಾಡಲಿ

ಶ್ರೀ ಬಿ ಆರ್ ಪಾಟೀಲ್ – ಅದರ ಮೂಲ ಎಲ್ಲಿಂದ ಪ್ರಾರಂಭವಾಗಿದೆಯೋ ಅಲ್ಲಿಂದ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ

ಅಧ್ಯಕ್ಷರು.– ತಾವು ದಯವಿಟ್ಟು ಕುಳಿತುಕೊಳ್ಳಿ ಮಾನ್ಯ ವೈಜನಾಥ್ ಪಾಟೀಲ್‌ರವರೆ, ತಾವು ಬೇಗ ಮಾತನಾಡಿ ಮುಗಿಸಿ

ಶ್ರೀ ವೈಜನಾಥ್ ಪಾಟೀಲ್ – ಈ ದೇಶದಲ್ಲಿ ಸಂಘಪರಿವಾರದವರು ಸ್ವಲ್ಪಮಟ್ಟಿಗೆ ದುರಸ್ಥಿಯಾಗಿರಬಹುದು

ಅಧ್ಯಕ್ಷರು.– ಅವರು ಮಾತನಾಡುವುದು ನಿಮಗೆ ರುಚಿಯಾಗಿರುತ್ತದೆಂದು ಮಾತನಾಡಲೆಂದು ಹೇಳುವದಲ್ಲ

ಶ್ರೀ ವೈಜನಾಥ್ ಪಾಟೀಲ್ – ತಾವು ದುರಸ್ಥಿಯಾಗದಿದ್ದರೆ ಹಿಂದೂ ಧರ್ಮ ಮತ್ತು ಈ ದೇಶ ಕೂಡ ಉಳಿಯುವುದಿಲ್ಲ ಆದ್ದರಿಂದ, ತಾವು ಸ್ವಲ್ಪ ದುರಸ್ಥಿಯಾಗಬೇಕು

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು.– ತಾವು ಹೇಳುವುದಾದರೆ, ಎಲ್ಲವನ್ನೂ ಸಹ ಹೇಳಿ

ಶ್ರೀ ವೈಜನಾಥ್ ಪಾಟೀಲ್:– ಸಧ್ಯಕ್ಕೆ ಈ ದೇಶದಲ್ಲಿ ನಡೆಯುವ ದಂಧೆಗಳು ಯಾರದು? ಮತ್ತೆ ಅದೇ ವಿಷಯದ ಬಗ್ಗೆ ಮಾತನಾಡತಕ್ಕಂಥ ಸಂದರ್ಭ ಕೂಡ ಈಗ ಇದೆ

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು – ತಾವು ಮಾತನಾಡುವುದಾದರೆ, ಎಲ್ಲವನ್ನೂ ಮಾತನಾಡಿ, ಅದನ್ನು ಬಿಟ್ಟು ಒಂದನ್ನು ಬಚ್ಚಿಟ್ಟು ಇನ್ನೊಂದು ಮಾತನಾಡುವುದಕ್ಕೆ ಹೋಗಬೇಡಿ

(ಗೊಂದಲ)

ಅಧ್ಯಕ್ಷರು:– ಮಾನ್ಯ ವೈಜನಾಥ್ ಪಾಟೀಲ್‌ರವರೆ, ಬೇಗ ಮಾತನಾಡಿ ಮುಗಿಸಿ ನಿಮ್ಮದು ಯಾವಾಗಲೂ ಸಹ ಇದೇ ಕತೆಯಾಗಿದೆ

ಶ್ರೀ ವೈಜನಾಥ್ ಪಾಟೀಲ್ – ಆಕ್ಷನ್‌ಗೆ ರಿಯಾಕ್ಷನ್ ಇದ್ದೇ ಇರುತ್ತದೆ ಮತ್ತೊಂದು ಧರ್ಮದವರು ರಿಯಾಕ್ಷನ್ ಮಾಡಬಹುದು ಇವತ್ತಿನದಿವಸ ಜಗತ್ತಿನಲ್ಲಿ ಮುಸಲ್ಮಾನರಲ್ಲಿಯೂ ಸಹ ಸಕ್ಯುಲರ್ ಅಥವಾ ಫಂಡಮೆಂಟಲಿಸಮ್ ಕೂಡ ಇದೆ ಮತ್ತೆ ಹಿಂದೂಗಳಲ್ಲಿಯೂ ಕೂಡ ಫಂಡಮೆಂಟಲಿಸ್ಟ್‌ಗಳಿದ್ದಾರೆ ಈ ರೀತಿಯಾದ ಫಂಡಮೆಂಟಲಿಸ್ಟ್ ಎರಡೂ ಕಡೆಯಿಂದಲೂ ಸಹ ದೂರವಾಗಬೇಕು ವಿಶೇಷವಾಗಿ ತಮ್ಮಕಡೆಯಿಂದ ದೂರವಾದರೆ ಅವರ ಕಡೆಯಿಂದಲೂ ಸಹ ದೂರವಾಗುತ್ತದೆ ಇವತ್ತಿನ ದಿವಸ ಅವರಿಗೂ ಸಹ ಮುಲ್ಲಾಗಳಿಗೆ ಮೌಲಿಗಳು ಬೇಕುಫು ಮಾಡುತ್ತಿದ್ದಾರೆ ಖುರಾನ್‌ನಲ್ಲಿ ಏನಿದೆ ಎಂಬುದೂ ಕೂಡ ಅವರಿಗೆ ಗೊತ್ತಿಲ್ಲ ಅವರು ಏನು ಹೇಳುತ್ತಾರೆಯೋ ಹಾಗೆ ಮಾಡುತ್ತಾರೆ ಅವರಿಗೂ ಕೂಡ ಈ ದೇಶದ ಜವಾಬ್ದಾರಿ ಇದೆ ಹಾಗೆಯೇ, ಈ ದೇಶದ ಮೆಜಾರಿಟಿ ಜನರ ಮೇಲೆ ಹಾಗೂ ಹಿಂದೂ ಟೀಕೆದಾರರ ಮೇಲೆ ಹಿಂದೂ ದೇಶ ಉಳಿಸತಕ್ಕಂಥ ಜವಾಬ್ದಾರಿ ಹೆಚ್ಚಾಗಿದೆ ಈಗಾಗಲೇ ಎಲ್ಲರೂ ಬಹಳಷ್ಟು ವಿಷಯಗಳನ್ನು ಮಾತನಾಡಿದ್ದಾರೆ ಆದ್ದರಿಂದ ಈ ಸಂದರ್ಭದಲ್ಲಿ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ ಇಷ್ಟು ಮಾತ್ರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ

(ಗೊಂದಲ)

ಅಧ್ಯಕ್ಷರು:– ಬೇರೆ ಯಾರೂ ಕೂಡ ಇನ್ನು ಮಾತನಾಡುವುದು ಬೇಡ ಈಗ ಮಾನ್ಯ ಗೃಹ ಸಚಿವರು ದಯಮಾಡಿ ಉತ್ತರ ಕೊಡಬೇಕು

ಶ್ರೀ ಎಂ ಪಿ ಪ್ರಕಾಶ್(ಗೃಹ, ಕಾನೂನು, ನ್ಯಾಯ ಮತ್ತುಮಾನವ ಹಕ್ಕುಗಳು,ಸಂಸದೀಯ ವ್ಯವಹಾರ ಇಲಾಖೆ ಸಚಿವರು) – ಸನ್ಮಾನ್ಯ ಅಧ್ಯಕ್ಷರೆ, "ರಾಜ್ಯದ ಮಂಗಳೂರು ಹಾಗೂ ಬೆಂಗಳೂರು ನಗರದಲ್ಲಿ ಇತ್ತೀಚಿನ ದಿನಗಳಲ್ಲಿ ಕೋಮು ಗಲಭೆಗಳು ಉಂಟಾಗಿರುತ್ತವೆ ದಕ್ಷಿಣ ಕನ್ನಡ ಜಿಲ್ಲೆಯು ಮತೀಯ ಅತ್ಯಂತ ಸೂಕ್ಷ್ಮ ಪ್ರದೇಶವಾಗಿದ್ದು, ಕಳೆದ ಎರಡು–ಮೂರು ವರ್ಷಗಳಿಂದ ಕೋಮು ಸೌಹಾರ್ದತೆಗೆ ಧಕ್ಕೆ ತರುವಂಥ ಘಟನೆಗಳು ನಡೆಯುತ್ತಲೇ ಇರುತ್ತವೆ ಉಜಿರೆಯಲ್ಲಿರುವ ಕಸಾಯಿಖಾನೆಗೆ ಅಕ್ರಮ ಗೋವು ಸಾಗಾಟ, ಪರಸ್ಪರ ಪ್ರೇಮ ಪ್ರಕರಣ ಹಿಂದೂ ಮತ್ತು ಮುಸ್ಲಿಮ್ ಸಂಘಟನೆಗಳು ಜಿಲ್ಲೆಯಲ್ಲಿ ಅಗುತ್ತಿರುವ ಕೋಮು ಗಲಭೆಗಳಿಗೆ ಪ್ರಚೋದನೆ ನೀಡುವ ವಿಷಯಗಳಾಗಿರುತ್ತವೆ ದಿನಾಂಕ 1 10 2006ರಂದು ಬಜ್ಪೆಯಲ್ಲಿ ಹಿಂದೂ ಪರ ಸಂಘಟನೆಯವರು ದೇವರ ವಿಗ್ರಹ ವಿಸರ್ಜನಾ

ಮೆರವಣಿಗೆಯನ್ನು ಕೊಂಡೊಯ್ಯುವ ಸಮಯದಲ್ಲಿ, ಒಂದು ಕೋಮಿನ ಗುಂಪು ಅದನ್ನು ಕೊಂಡೊಯ್ಯಬಾರದೆಂದು ಪ್ರತಿಭಟಿಸಿ ಮೆರವಣಿಗೆಗೆ ತಡೆಯೊಡ್ಡಿದ್ದು, ಇದರಿಂದ ಕುಪಿತಗೊಂಡ ಮತ್ತೊಂದು ಕೋಮಿನ ಜನರು ದುಷ್ಕೃತ್ಯದಲ್ಲಿ ತೊಡಗಿರುತ್ತಾರೆ ಈ ಸಂಬಂಧ ಅನೇಕ ಜನ ಪೊಲೀಸ್ ಅಧಿಕಾರಿ ಹಾಗೂ ಸಾರ್ವಜನಿಕರು ಗಾಯಗೊಂಡಿದ್ದು, ಲಕ್ಷಾಂತರ ರೂಪಾಯಿ ಸಾರ್ವಜನಿಕ ಆಸ್ತಿ–ಪಾಸ್ತಿಗೆ ನಷ್ಟವಾಗಿರುತ್ತದೆ ಒಂದು ವಾರದ ಕಾಲ ಕರ್ಫ್ಯೂ ಮತ್ತು ನಿಷೇಧಾಜ್ಞೆ ಜಾರಿಗೊಳಿಸಿ ಪರಿಸ್ಥಿತಿಯನ್ನು ತಹಬದಿಗೆ ತಂದಿರುತ್ತೇವೆ" ಇದರ ಜೊತೆಗೆ ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಈಗಾಗಲೇ ಅಲ್ಲಿನ ಬಪ್ಪಾಬ್ಯಾರಿ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಬಪ್ಪಾಬ್ಯಾರಿ ಎನ್ನತಕ್ಕಂಥ ಸರಸ್ವತಿಯ ಆರಾಧನೆಗೆ ಸಂಬಂಧಪಟ್ಟಂಥ ಒಂದು ಇತಿಹಾಸ ಅಲ್ಲಿ ನಡೆದಿದೆ ಅದೇನು ಪುರಾಣವಲ್ಲ ಅಲ್ಲಿ ಟ್ಯಾಬ್ಲೊ ತೆಗೆದುಕೊಂಡು ಹೋಗುವಾಗ ಬಪ್ಪಾಬ್ಯಾರಿ ವಿನೀತವಾಗಿ ನಿಂತಿರತಕ್ಕಂಥ ರೀತಿಯಲ್ಲಿ ನೀವು ಮಾಡಿದ್ದೀರಿ ಇದು ಸರಿಯಾದುದಲ್ಲವೆಂದು ಕೆಲವು ಕೋಮುವಾದಿ ಗುಂಪಿನ ಯುವಕರು ಇದರ ಬಗ್ಗೆ ಆಕ್ಷೇಪ ಮಾಡಿದರು ಆಗ ಆ ಕೋಮಿನ ಹಿರಿಯರು ಮತ್ತು ಹಿಂದೂ ಕೋಮಿನ ಹಿರಿಯರೆಲ್ಲರೂ ಕುಳಿತು, ಈ ವಿಚಾರದಲ್ಲಿ ಸಹಮತದಿಂದ ಹೋಗೋಣ, ಬೇರೆ ಕಡೆ ಕೂಡ ಇಂಥ ಮೆರವಣಿಗೆಗಳು ಆಗಿವೆ ಆದ್ದರಿಂದ, ಇದರಲ್ಲಿ ತಪ್ಪು ಕಂಡುಹಿಡಿಯತಕ್ಕಂಥ ಅಗತ್ಯತೆ ಇಲ್ಲ ಬಿಟ್ಟು ಬಿಡಿ ಎಂದು ಹೇಳಿದರೂ ಕೂಡ ಕೆಲವು ಯುವಕರು ತಪ್ಪು ಅಭಿಪ್ರಾಯದಿಂದ ವಿನಾ ಕಾರಣ ಅಲ್ಲಿ ಹೋಗುತ್ತಿದ್ದಂಥ ಮೆರವಣಿಗೆಯ ದಾರಿಯನ್ನು ತಪ್ಪಿಸಿ ಮತ್ತೊಂದು ಕಡೆಗೆ ಹೋಗಿ ಕಲ್ಲು ಒಗೆಯುವುದರ ಮೂಲಕವಾಗಿ ಅಶಾಂತಿ ಸೃಷ್ಟಿ ಮಾಡಿದ್ದಾರೆ ಬಪ್ಪಾಬ್ಯಾರಿ ಪ್ರಕರಣವಾದ ನಂತರ, ಅಂದರೆ, ಇದನ್ನು ಮರೆತು ಹೋಗುವ ಅಥವಾ ತೆಗೆದು ಹಾಕುವಂಥ ಪ್ರಕರಣ ಇದು ಆಗಿದ್ದರೂ ಕೂಡ ಸಹಿಷ್ಣುತೆ ಇಲ್ಲದೆ ಇರತಕ್ಕಂಥ ಒಂದು ಗುಂಪು ಪ್ರಚೋದನಕಾರಿಯಾದಂಥ ಈ ಕೆಲಸವನ್ನು ಮಾಡಿದರು ದಿನಾಂಕ 110 2006ರಲ್ಲಿ ಈ ಘಟನೆಯಾದಮೇಲೆ, ನಾಲ್ಕನೇ ತಾರೀಖಿನ ದಿವಸ ಕಸಾಯಿಖಾನೆಗೆ ಹೋಗುತ್ತಿದ್ದ ಒಂದು ವ್ಯಾನ್ ಅಲ್ಲಿ ನಿಂತಿದ್ದ ಕಾರಿಗೆ ಡಿಕ್ಕಿ ಹೊಡೆದುಕೊಂಡು ಹೋದರು ವ್ಯಾನ್ ಡಿಕ್ಕಿ ಹೊಡೆದು ಹೋಗುತ್ತಿದ್ದರಿಂದ ಆ ಕಾರಿನವರು ಅದನ್ನು ಹಿಂಬಾಲಿಸಿದರು ಕಾರು ಹಿಂಬಾಲಿಸುತ್ತಿದ್ದಾಗ, ಯಾವುದೋ ಹಿಂದೂ ಸಂಘಟನೆಯವರು ನಮ್ಮನ್ನು ಹಿಡಿಯುವುದಕ್ಕೆ ಬರುತ್ತಿದ್ದಾರೆಂದು ಅವರು ತಪ್ಪು ಭಾವಿಸಿ ಅವರು ನೇರವಾಗಿ ಕಸಾಯಿಖಾನೆಗೆ ಹೋದರು ಅದರ ಹಿಂದೆ ಹೋದಂಥ ಕೆಲವು ಜನರು ಮೋಟರ್ ಸೈಕಲ್ ಮೇಲೆ ಹೋಗಿದ್ದರು ಕಾರಿಗೆ

ಡಿಕ್ಕಿ ಹೊಡೆಸಿಕೊಂಡು ತೊಂದರೆಗೊಳಗಾಗಿದ್ದವರು ಅಲ್ಲಿ ಇವರನ್ನು ಹಿಡಿದುಕೊಂಡು ಹೊಡೆದರು ಇದು ಆದ ನಂತರ ಆದಂಥ ಪ್ರತಿಭಟನೆ ಕಾರಣಕ್ಕಾಗಿಯೇ ಮಾರನೇ ದಿವಸ ಮತ್ತೆ ಜವಾಬ್ದಾರಿಯುತವಲ್ಲದೆ ಇರತಕ್ಕಂಥ ಕೆಲವು ಜನರು ಬಂದ್‌ಗೆ ಕರೆ ಕೊಟ್ಟರು ಬಂದ್‌ಗೆ ಕರೆ ಕೊಟ್ಟಿರತಕ್ಕಂತಹ ಹಿನ್ನೆಲೆಯಲ್ಲಿ ವಿನಾಕಾರಣವಾಗಿರತಕ್ಕಂಥ ಅಶಾಂತಿ ಸೃಷ್ಟಿಯಾಗಿ ಕರ್ಫ್ಯೂವನ್ನು ಲಾಗು ಮಾಡುವಂತಹ ರೀತಿಯಲ್ಲಿ ಅಯಿತು ಮಸೀದಿಯಲ್ಲಿದ್ದಂತಹ ಒಬ್ಬ ಮೌಲಿಯನ್ನು ಕೊಲ್ಲತಕ್ಕಂತಹದ್ದು, ಒಂದು ಆಂಬ್ಯುಲೆನ್ಸ್‌ನಲ್ಲಿ ಹೋದಂತಹ ವ್ಯಕ್ತಿಯನ್ನು ಕೊಂದಿರತಕ್ಕಂಥದ್ದು, ಇವೆಲ್ಲಾ ಪ್ರಕರಣಗಳ ಹಿನ್ನೆಲೆಯಲ್ಲಿ ಹಿಂದು-ಮುಸ್ಲಿಂ ಎರಡು ಸಂಘಟನೆಗಳು ಕೂಡ, ಅದೇ ರೀತಿಯಾಗಿ ಉಲ್ಲಾಳದಲ್ಲಿದ್ದಂತಹ ಒಂದು ಸಂಘಟನೆ ಪ್ರಾರ್ಥನೆಯನ್ನು ಮುಗಿಸಿಕೊಂಡು ಹೊರಗೆ ಬಂದಿರತಕ್ಕಂಥ ಸಂದರ್ಭದಲ್ಲಿ ಹಿಂದು ದೇವಾಲಯಕ್ಕೆ ಕಲ್ಲನ್ನು ಒಗೆಯತಕ್ಕಂಥ ಪ್ರಸಂಗವು ಕೂಡ ಅಯಿತು ಅದು ರಂಜಾನ್ ಹಬ್ಬದ ಕಾಲವಾಗಿತ್ತು ರಂಜಾನ್ ಹಬ್ಬದ ಕಾಲವಾಗಿದ್ದರಿಂದ ನಾವು ಯಾವುದೇ ನಿಷೇಧಾಜ್ಞೆಯನ್ನು ಮಾಡುವುದಾದರೆ, ಪ್ರತಿಭಟನೆಯನ್ನು ಮಾಡಿಸುವುದಾದರೆ, ನಿಲ್ಲಿಸುವುದಾಗಿದ್ದರೆ ಅದು ವಿನಾಕಾರಣವಾದಂತಹ ರೀತಿಯಲ್ಲಿ ಧರ್ಮದ ಬಗ್ಗೆ ನಾವು ಪ್ರತಿಪವೇಶ ಮಾಡಿದ ಹಾಗೆ ಆಗುತ್ತದೆ ಆದ್ದರಿಂದ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಹೇಳಿ ಪೊಲೀಸರು ಅವಕಾಶವನ್ನು ಕಲ್ಪಿಸಿಕೊಟ್ಟಿರುವುದು ನಿಜ ಆದರೆ ಜವಾಬ್ದಾರಿಯುತವಾಗಿ ಕೆಲಸವನ್ನು ಮಾಡದೆ ಇದ್ದುದರಿಂದ ಫಿರಂಗಿ ಬಜಾರ್‌ನಲ್ಲಿ ಆದಂಥದ್ದು ಒಂದು, ಮಂಗಳೂರಿನ ಕೆಲವು ಭಾಗದಲ್ಲಿ ಆಗಿರುವಂತಹದ್ದು, ಹಳ್ಳಿಗಳಲ್ಲಿ ಆಗಿರುವುದರ ಬಗ್ಗೆ ನೋಡಿದಾಗ ಅಲ್ಲಿಯ ಮಾನ್ಯ ಶಾಸಕ ಮಿತ್ರರಾದ ಶ್ರೀ ಯೋಗೀಶ್‌ಭಟ್‌ರು ಮೊದಲಾದ ಹಿರಿಯರನ್ನು ಕರೆದು ಅದನ್ನು ಸಮಾಧಾನ ಮಾಡಬೇಕೆಂಬ ಪ್ರಯತ್ನವನ್ನು ಮಾಡುವಾಗ ಅಹಿತಕರವಾದ ಘಟನೆಗಳು ಆದಾಗ ಮಾನ್ಯ ಶ್ರೀರಾಮರೆಡ್ಡಿಯವರು ಕೂಡ ಅವರ ಪಕ್ಷದ ವತಿಯಿಂದ ಅಲ್ಲಿಗೆ ಬಂದಿದ್ದರು ಮಾನ್ಯ ಧರ್ಮಸಿಂಗ್ ಹಾಗೂ ಮಾನ್ಯ ಮಲ್ಲಿಕಾರ್ಜುನಖರ್ಗೆಯವರು, ಮಾನ್ಯ ಆಸ್ಕರ್ ಫರ್ನಾಂಡೀಸ್‌ರವರು ಕೇಂದ್ರದ ಒಬ್ಬ ಮಂತ್ರಿಯವರು ಕೂಡ ಅಲ್ಲಿಗೆ ಬಂದರು ನಾನು ಕೂಡ ಅವತ್ತಿನ ದಿವಸ ಎಲ್ಲಾ ಹಿರಿಯ ಅಧಿಕಾರಿಗಳ ಜೊತೆಗೆ Law & Order ನೋಡಿಕೊಳ್ಳತಕ್ಕಂತಹ ಒಬ್ಬ ಮಹಾನಿರ್ದೇಶಕರು ಹಾಗೂ ನಾವೆಲ್ಲರೂ ಕೂಡ ಮಂಗಳೂರಿನಲ್ಲಿ ಇದ್ದೆವು ಆ ಸಂದರ್ಭದಲ್ಲಿ ಕೇಂದ್ರದ ಸಹಾಯಕ ಗೃಹ ಸಚಿವರು ಅಲ್ಲಿಗೆ ಬರುತ್ತಿದ್ದೇವೆಂಬ ವಿಚಾರವನ್ನು ಕೂಡ ಯಾರಿಗೂ ತಿಳಿಸಿರಲಿಲ್ಲ ಅದರೆ ಕೆಲವು ಮುಖಂಡರಿಗೆ ಮಾತ್ರ ತಿಳಿದಿರುತ್ತದೆಂದು

ಕಾಣುತ್ತದೆ ಆಗ ಅವರೆಲ್ಲರೂ ಕೂಡ ಅಲ್ಲಿಗೆ ಬಂದರು ಆ ಸಂದರ್ಭದಲ್ಲಿ ನೀವು ಎಲ್ಲಿಯಾದರೂ ಹೋಗಿ ನೋಡಿಕೊಂಡು ಬರಬಹುದು, ಆದರೆ ರಸ್ತೆಯಲ್ಲಿ ನಿಂತು ಬೇರೆ ಬೇರೆಯವರ ಜೊತೆ ಮಾತನಾಡಿ ಮತ್ತು ವಿನಾಕಾರಣವಾದಂತಹ ಗೊಂದಲಕ್ಕೆ ಅವಕಾಶವನ್ನು ಕಲ್ಪಿಸಿಕೊಡಬಾರದೆಂದು ಹೇಳಿ ನಮ್ಮ ಪೊಲೀಸ್ ಮಹಾನಿರ್ದೇಶಕರು ಮತ್ತು ಬೇರೆಯವರು ವಿನಂತಿಯನ್ನು ಮಾಡಿಕೊಂಡರು ಕೂಡ ಕೆಲವು ಕಡೆ ನಿಂತುಕೊಂಡು ಮಾತನಾಡಿರುವುದು ಕೂಡ ಆ ಪ್ರಸಂಗದಲ್ಲಿದೆ ಜಿಲ್ಲಾ ಮಂತ್ರಿಗಳು ಇದಕ್ಕೆ ಪ್ರಚೋದನೆಯನ್ನು ಮಾಡಿದ್ದಾರೆನ್ನುವುದು ನಿರಾದಾರವಾದಂಥದ್ದು ಆ ಆಪಾದನೆಗಳನ್ನು ಮಾಡಲಿಕ್ಕೆ ಅರ್ಥವಿಲ್ಲ ಏಕೆಂದರೆ, ನನ್ನ ಜೊತೆಯಲ್ಲಿ ಜಿಲ್ಲಾ ಮಂತ್ರಿಗಳು ಎಲ್ಲಾ ಕಡೆಗಳಲ್ಲಿ ನಾನು ಹೋದಂತಹ ಸಂದರ್ಭದಲ್ಲಿ ಕೂಡ ಬಂದಿದ್ದಾರೆ ಕೆಲವು ಪತ್ರಿಕೆಗಳಲ್ಲಿ ಅವರು ಇವರ ಮೇಲೆ ಆಪಾದನೆಯನ್ನು ಮಾಡಿದರು ಇವರು ಅವರ ಮೇಲೆ ಆಪಾದನೆಯನ್ನು ಮಾಡಿದರು ಎಂದು ಇದೆ ಆದರೆ ಮಂಗಳೂರಿನ ಜನರು ಅವರು ಶಾಂತಿ ಪ್ರಿಯರು ಮತ್ತು ಸ್ವಲ್ಪ ಮಟ್ಟಿಗೆ ವ್ಯವಹಾರ ಜ್ಞಾನವುಳ್ಳಂತಹ ಜನರು ಆಗಿದ್ದಾರೆ ವ್ಯವಹಾರದಲ್ಲಿ ನಿಪುಣರಾಗಿದ್ದಾರೆ ಇದರಿಂದ ಅನಾವಶ್ಯಕವಾದಂತಹ ತೊಂದರೆ ಜನಸಾಮಾನ್ಯರಿಗೆ ಆಗುತ್ತದೆಂದು ಅವರಲ್ಲಿಯೇ ನಿಯಂತ್ರಣ ಮಾಡಿಕೊಂಡಿರುವುದು ಇದೆ ಈಗ COD Enquiry ಯನ್ನು ಮಾಡಬೇಕೆಂದು ಕೇಳಿದ ತಕ್ಷಣವೆ COD Enquiry ಯನ್ನು ಮಾಡಿಸಿದ್ದೇವೆ ಮಸೀದಿಯಲ್ಲಿದ್ದಂತಹ ಮೌಲಿಯನ್ನು ಹೊರಗೆ ಕರೆದು ಯಾರು ಕೊಂದು ಹಾಕಿದರು, ಅವರೆಲ್ಲರನ್ನು ಕೂಡ ದಸ್ತಗಿರಿ ಮಾಡಿದ್ದೇವೆ ನಮ್ಮ ADGP Law & Order ರವರು ಅಲ್ಲಿಗೆ ಹೋಗಿ ಕುಳಿತು, ಅದೇ ರೀತಿಯಾಗಿ ಇವತ್ತು ಮಹಾನಿರ್ದೇಶಕರಾದಂಥವರು COD ಮಹಾನಿರ್ದೇಶಕರು ಅಲ್ಲಿದ್ದರು ಅಲ್ಲಿ ಕೆಲವರ ಮೇಲೆ ಕೇಸ್‌ನ್ನು ಹಾಕಿದ್ದೇವೆ ಅವರುಗಳೆಲ್ಲರೂ ದಸ್ತಗಿರಿಯಾಗಿದ್ದಾರೆ ಅವರೆಲ್ಲರೂ ಬಳ್ಳಾರಿ ಜೈಲಿನಲ್ಲಿದ್ದಾರೆ ಅದೇ ರೀತಿಯಾಗಿ ಆಂಬ್ಯುಲೆನ್ಸ್‌ನಲ್ಲಿದ್ದಂತಹ ಜನಗಳನ್ನು ಯಾರು ತೊಂದರೆ ಕೊಟ್ಟು ಒಬ್ಬರನ್ನು ಕೊಂದರು ಮತ್ತು 7–8 ಜನಗಳಿಗೆ ಗಾಯಗಳಾಗಿತ್ತು ಅವರನ್ನು ಕೂಡ ನಾವು ಪತ್ತೆ ಹಚ್ಚಿದ್ದೇವೆ ಅವರ ಮೇಲೆಯೂ ಕೂಡ ಕೇಸ್‌ನ್ನು ಹಾಕಿದ್ದೇವೆ ಅವರು ಕೂಡ ಇವತ್ತು ಸೆರೆಮನೆಯಲ್ಲಿದ್ದಾರೆ ಅದಾದನಂತರ ಹಿಂದು ಮಹಾ ಉತ್ಸವ ಮಾಡುವಂತಹದ್ದು, ಏನು ವಿರಾಟ್ ಮಹಾ ಉತ್ಸವ ಮಾಡಿದಂತಹ ಸಂದರ್ಭದಲ್ಲಿ ಸುಮಾರು 70–80 ಸಾವಿರ ಜನರು ಮಂಗಳೂರಿನಲ್ಲಿ ಸೇರಿರುವುದರಲ್ಲಿ ಮಾನ್ಯ ಯೋಗೀಶ್ ಭಟ್‌ರವರ ಮನೆಯಲ್ಲಿ ಕಲೆತು ಹಿಂದು–

ಮುಸ್ಲಂ ಜನಾಂಗದ ಎಲ್ಲಾ ಮುಖಂಡರನ್ನು ಕಲೆತು ಶಾಂತಿ ಸಭೆಗಳನ್ನು ಮಾಡಿ ಎಲ್ಲರೂ ಸೌಹಾರ್ದಯುತವಾಗಿ ಅಣ್ಣ ತಮ್ಮಂದಿರಾಗಿ ಕೆಲಸವನ್ನು ಮಾಡೋಣವೆಂಬ ಮಾತನ್ನು ಹೇಳಿ ನಿರ್ಧಾರ ಮಾಡಿ, ಆ ಮಹಾ ಸಭೆಯಲ್ಲಿ ಭಾಗವಹಿಸಿರುವಂತಹ ಪ್ರತಿಯೊಬ್ಬರಿಗೂ ಕೂಡ ಇವರು ಅವರಿಗೆ ಎಲ್ಲಾ ತರಹವಾದ ಅನುಕೂಲತೆಗಳನ್ನು ಶರಬತ್ತನ್ನು ಕೊಡುವ ಮತ್ತು ದಿನಸಿ ಆಹಾರವನ್ನು ಕೊಡುವಂತಹ ರೀತಿಯಲ್ಲಿ ಪರಸ್ಪರ ವರ್ತನೆಯನ್ನು ಮಾಡಿದರು ಆದ್ದರಿಂದ ಹಿಂದು–ಮುಸಲ್ಮಾನ ಮುಖಂಡರುಗಳು ಈ ತರಹದ ಒಂದು ಸೌಹಾರ್ದಯುತವಾದಂತಹ ವಾತಾವರಣವನ್ನು ಸೃಷ್ಟಿ ಮಾಡಿದ್ದರಿಂದ ಮಂಗಳೂರಿನಲ್ಲಿ ಮೊನ್ನೆ ಆದಂತಹದ್ದರಲ್ಲಿ ಯಾವುದೇ ತರಹವಾದಂತಹ ಘಟನೆಗಳು ಆಗಿರುವುದಿಲ್ಲ ಅಂದರೆ ನಾವು ಮೂಲಭೂತವಾಗಿ ಪ್ರಶ್ನೆ ಮಾಡಬೇಕಾಗಿರುವುದು, ಹೊರಗಿನ ಶಕ್ತಿಗಳು ಅಲ್ಲಿಗೆ ಹೋಗಿ ಪ್ರಚೋದನೆಯನ್ನು ಮಾಡುತ್ತಿರುತ್ತದೆ ನಮ್ಮ ಈ ವ್ಯವಸ್ಥೆಯಲ್ಲಿ ಧರ್ಮದ ನಿರಪೇಕ್ಷತೆಯಲ್ಲಿ ಎಂದು ಹೇಳಿ ಮಾತನಾಡುವಂತಹವರು ಕೂಡ ಅದಕ್ಕೆ ಒಂದು ಪ್ರತಿರೋಧ ಬರುತ್ತದೆಂದು ಹೇಳುವಂತಹ ಶಕ್ತಿ ಇರುವುದಿಲ್ಲ ಒಂದು ನಂಬಿಕೆಯ ಜಾಗದಲ್ಲಿ ಮತ್ತೊಂದು ನಂಬಿಕೆಯನ್ನು ನಾವು ಇಡಲೇಬೇಕಾಗುತ್ತದೆ ಆ ನಂಬಿಕೆಯನ್ನು ನಾವು ಇಡದೆ ಹೋದರೆ ಅವರಿಗೆ ಉತ್ತರ ಸಿಗಲಾರದ ರೀತಿಯಲ್ಲಿ ಆಗುತ್ತದೆ ಆ ಕುಸುಮಬಾಲೆ ಎನ್ನುವಂಥ ಒಂದು ಒಳ್ಳೆಯ ನಾಟಕ ಮತ್ತು ಕಾದಂಬರಿಯನ್ನು ದೇವನೂರು ಮಹದೇವರವರು ಬರೆದಿದ್ದಾರೆ ಅಲ್ಲಿ ಕೆಲವು ಕ್ರಿಯಾಶೀಲರಾದ ಜನರು ನಾವು ಬಹಳ ಪ್ರಗತಿಪರರೆಂದು ತಮ್ಮನ್ನು ತಾವೆ ಆರೋಪಿಸಿಕೊಂಡಿರುವಂಥ ಜನ ಒಂದು ಮಗು ಸಾಯುತ್ತಿರುತ್ತದೆ, ಅದರ ತಾಯಿ ತೊಡೆಯ ಮೇಲೆ ಹಾಕಿಕೊಂಡು ಬೂದಿ ಹಚ್ಚಿ ಬೇವಿನ ಸೊಪ್ಪನ್ನು ಹಾಕಿ ಅಲ್ಲಾಡಿಸುತ್ತಿರುತ್ತಾಳೆ ಇಂತಹ ಮೂಢನಂಬಿಕೆಯನ್ನು ಇಟ್ಟುಕೊಂಡಿದ್ದೀರಿ ಇದಕ್ಕೆ ಔಷಧಿ ಕೊಡಿಸಬೇಕೋ ಡಾಕ್ಟರ್ ಹತ್ತಿರ ಕರೆದುಕೊಂಡು ಹೋಗಬೇಕೆಂದು ಪ್ರಶ್ನೆ ಮಾಡುತ್ತಾರೆ ಆಗ ಆ ಮುದುಕಿ ಬಹಳ ಒಳ್ಳೆಯ ಮಾತನ್ನು ಹೇಳುತ್ತಾಳೆ ನಾನು ತಾಯಿ, ನಿನಗೆ ಔಷಧಿ ಕೊಡಿಸಬೇಕಾದರೆ ಈ ಊರಿನಲ್ಲಿ ಔಷಧಿ ಎಲ್ಲಿದೆ ವೈದ್ಯರ ಹತ್ತಿರ ಕರೆದುಕೊಂಡು ಹೋಗಬೇಕೆಂದರೆ ಈ ಊರಿನಲ್ಲಿ ವೈದ್ಯರಿಲ್ಲ ದೂರದ ಪಟ್ಟಣಕ್ಕೆ ಹೋಗಬೇಕಾದರೆ ನನ್ನ ಹತ್ತಿರ ದುಡ್ಡಿಲ್ಲ ನನ್ನ ಮಗು ಸಾಯುವುದನ್ನು ನೋಡಿ ನಿನ್ನ ಮೂಢನಂಬಿಕೆಯ ವಿರುದ್ಧವಾದ ಪ್ರಗತಿಪರ ಮಾತನ್ನು ಹೇಳುವುದಾ? ಯಾವುದಾದರೊಂದು ಕಾರಣದಿಂದ ನಾನು ಅದಕ್ಕೆ ಒಂದು ಔಷಧಿಯನ್ನು ಹಚ್ಚಿದರೆ, ದೇವರನ್ನು ಪ್ರಾರ್ಥನೆ ಮಾಡಿದರೆ, ಅಕಸ್ಮಾತ್

ನನ್ನ ಮಗು ಬದುಕಬಹುದು ಎನ್ನುವಂಥ ರೀತಿಯಲ್ಲಿ ನಾನು ಇದ್ದೇನೆ ಒಂದು ನಂಬಿಕೆಯ ಜಾಗದಲ್ಲಿ ಮತ್ತೊಂದು ನಂಬಿಕೆಯನ್ನು ತಂದು ಕೂರಿಸಬೇಕೆಂದರೆ, ವೈದ್ಯರನ್ನು ಕರೆದುಕೊಂಡು ಬಾ ಎಂದು ಹೇಳುತ್ತಾಳೆ ದೇವನೂರು ಮಹದೇವರವರ ಕುಸುಮಬಾಲೆಯ ಕಾದಂಬರಿಯ ಸಂಕೇತ ಇಷ್ಟೆ ನಾವು ಬಹಳ ಪ್ರಗತಿಪರರು ಎಂದು ಹೇಳಿಕೊಳ್ಳುವವರು ಕೂಡ ಇನ್ನೊಬ್ಬರು ಆ ಒಂದು ದೇವರಲ್ಲಿ ನಂಬಿಕೆ ಇರತಕ್ಕಂಥವರ ಬಗ್ಗೆಯೂ ಕೂಡ ಅಸಹಿಷ್ಣತರಾಗಬೇಕಾದ ಅಗತ್ಯತೆ ಇಲ್ಲ ಅವರವರ ನಂಬಿಕೆ ಅವರವರಿಗೆ ಆದರೆ ಅದು ಸಾರ್ವಜನಿಕರ ಪೀಡನೆಯಾಗಬಾರದು ಸಾರ್ವಜನಿಕ ಸ್ಥಳಗಳಲ್ಲಿ ಬೇರೆಯವರಿಗೆ ತೊಂದರೆಗಳು ಆಗಬಾರದು ಈ ದೃಷ್ಟಿಕೋನದಿಂದ ಈ ದೇಶದಲ್ಲಿ ಬೇರೆ ಅನ್ಯಶಕ್ತಿಗಳು ಬಂದು ಇದಕ್ಕೆ ಪ್ರಚೋದನಾಕಾರಿಯಾದಂಥ ಕೆಲಸವನ್ನು ಮಾಡುತ್ತದೆ ಅದು , ಆಗಲಾರದಂತೆ ನೋಡಿಕೊಳ್ಳಬೇಕು ಪೊಲೀಸರು ನಿಜವಾಗಿಯೂ ಕೂಡ ಬಹಳ ದೊಡ್ಡ ಪ್ರಯತ್ನವನ್ನು ಮಾಡಿದ್ದಾರೆ ನಮ್ಮ ಸಮಾಜದಲ್ಲಿ ಅಲ್ಲಿ ಇಲ್ಲಿ ತಪ್ಪಿತಸ್ಥರು, ಸೋಮಾರಿಗಳು ಅಥವಾ ಯಾವುದೆ ಕೋಮಿನ ಪರವಾಗಿ ಇರುವವರು ಇದ್ದಂತೆ ಅಣ್ಣ ತಮ್ಮಂದಿರಾದಂಥ ಪೊಲೀಸ್ ಇಲಾಖೆಯಲ್ಲಿ ಕೆಲವು ಜನರು ಆ ತರಹದ ಭಾವನೆ ಇರುವವರು ಇರಬಹುದು ಆದರೆ ಇಡೀ ಪೊಲೀಸ್ ಇಲಾಖೆ ಈ ತರಹದಲ್ಲಿ ವರ್ತಿಸಿಲ್ಲ ಅದರ ಬಗ್ಗೆ ಮಾನ್ಯ ರೋಷನ್‌ಬೇಗ್‌ರವರು ಮಾತನಾಡುವಾಗ ಮಾನ್ಯ ಕಟ್ಟಾ ಸುಬ್ರಮಣ್ಯ ನಾಯ್ಡುರವರನ್ನು ಅಭಿನಂದಿಸಿದರು ಅಲ್ಲಿಯೂ ಕೂಡ ರಾಜೇಂದ್ರನ್‌ರವರು ಹೇಳುವಾಗ ಒಬ್ಬ ಮುಸ್ಲಿಂ ಯುವಕ ಹಿಂದು ಯುವಕನಿಗೆ ತೊಂದರೆಯಾದಾಗ ರಕ್ಷಿಸಿರುವಂಥ ಉದಾಹರಣೆಯನ್ನು ಕೊಟ್ಟರು ಅಂದರೆ ಮೂಲಭೂತವಾಗಿ ಜನಸಾಮಾನ್ಯರು ಶಾಂತಿಪ್ರಿಯರು, ಮೂಲಭೂತವಾಗಿ ಅವರು ಇನ್ನೊಬ್ಬರ ಮೇಲೆ ಸೇಡನ್ನು ತೀರಿಸಿಕೊಳ್ಳುವವರು ಅಲ್ಲ ಆದರೆ ಯಾವ ಯಾವುದೋ ನೆಪಗಳ ಮೂಲಕವಾಗಿ ನಮ್ಮಂಥ ಕೆಲವು ಕಿಡಿಗೇಡಿಗಳಾಗಿರುವಂಥ ಸಮಾಜ ಬಾಹಿರ ಶಕ್ತಿಗಳು ಕೆಲವು ಅನುಕೂಲಗಳನ್ನು ಪಡೆದುಕೊಳ್ಳುವುದಕ್ಕೆ ಚುನಾವಣೆಯ ದೃಷ್ಟಿಯನ್ನು ಇಟ್ಟುಕೊಂಡು ಅಥವಾ ಪ್ರಚೋದನಾಕಾರಿಯಂಥ ಭಾಷಣವನ್ನು ಮಾಡುವುದರ ಮೂಲಕವಾಗಿ ಇಂತಹ ಕೆಲಸ ಕಾರ್ಯಗಳು ಆಗುತ್ತವೆ ಆದರೆ ಸರ್ಕಾರ ಮಾತ್ರ ಈ ವಿಚಾರದಲ್ಲಿ ಬಹಳ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಂಡು ಅದರ ಮೂಲಕವಾಗಿ ತೆಗೆದುಕೊಳ್ಳುವ ಎಲ್ಲಾ ಕ್ರಮಗಳನ್ನು ನಾವು ಕೈಗೊಂಡಿದ್ದೇವೆ ಅದೆ ರೀತಿಯಾಗಿ 19 01 2007 ರಿಂದ 21 01 2007 ರವರೆಗೆ ಬೆಂಗಳೂರು ನಗರದ ಪೂರ್ವ ವಿಭಾಗದಲ್ಲಿ ಬಹಿರಂಗವಾಗಿ

ನಡೆದಿರುವ ಎರಡು ರ್ಯಾಲಿಗಳ ಸಮಯದಲ್ಲಿ ಕೋಮು ಗಲಭೆಗಳು ಉಂಟಾಗುತ್ತವೆ ಸಾವಿರಾರು ಸಂಖ್ಯೆಯಲ್ಲಿ ಸೇರಿದ ಜನರು ಶಾಂತತೆಗೆ ಭಂಗವನ್ನು ಉಂಟು ಮಾಡಿ ಮನೆಗಳಿಗೆ ಮತ್ತು ವಾಹನಗಳಿಗೆ ಕಲ್ಲು ತೂರಾಟವನ್ನು ಮಾಡಲು ಪ್ರಾರಂಭಿಸಿದಾಗ ಪರಿಸ್ಥಿತಿಯೂ ವಿಕೋಪಕ್ಕೆ ಹೋಗುವುದನ್ನು ಮನಗಂಡ ಪೊಲೀಸ್‌ರು ಲಘುಲಾರಿ ಪ್ರಹಾರವನ್ನು ನಡೆಸಿ ಗುಂಪನ್ನು ಚದುರಿಸಿರುತ್ತಾರೆ ಮುಂದುವರೆದ ಪರಿಸ್ಥಿತಿಯ ಅನ್ವಯ ಗಾಳಿಯಲ್ಲಿ ಗುಂಡು ಹಾರಿಸಿದಾಗ ಒಬ್ಬ ಹುಡುಗ ಮೃತಪಟ್ಟು ಅನೇಕ ಪೊಲೀಸ್ ಅಧಿಕಾರಿಗಳಿಗೆ ಗಾಯಗಳಾಗಿರುತ್ತವೆ ನಿಷೇಧಾಜ್ಞೆಯನ್ನು ಜಾರಿಗೊಳಿಸಿ ಕೇಂದ್ರ ರಕ್ಷಣಾ ಪಡೆಯ ಪಥ ಸಂಚಲನವನ್ನು ನಡೆಸಿ ಪರಿಸ್ಥಿತಿಯನ್ನು ಹತೋಟಿಗೆ ತರಲಾಯಿತು ಈ ಸಂಬಂಧ ಸಂಕ್ಷಿಪ್ತ ಸಾರಾಂಶವನ್ನು ನೀಡುವ ಪಟ್ಟಿಯನ್ನು ಕೂಡ ಇದರೊಂದಿಗೆ ಲಗತ್ತಿಸಿದ್ದೇವೆ ಉಳಿದಂತೆ ರಾಜ್ಯದ ಉಳಿದೆಡೆ ಪರಿಸ್ಥಿತಿಯೂ ಶಾಂತವಾಗಿರುತ್ತದೆ ಕೋಮು ಗಲಭೆಯನ್ನು ಹುಟ್ಟು ಹಾಕುವವರ ವಿರುದ್ಧ ವ್ಯಾಪಕ ಕಾರ್ಯಚರಣೆಯನ್ನು ನಡೆಸುವಂತೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗಿದೆ ಇದರ ಜೊತೆಗೆ ಈ ವಿಚಾರಗಳಿಗೆ ಸಂಬಂಧಪಟ್ಟಂತೆ 15 ಮತ್ತು10 ರಿಂದ ನಡೆದ ಕಾರ್ಯಕ್ರಮದಲ್ಲಿ 272 ಕೇಸ್‌ಗಳನ್ನು ನಾವು ದಾಖಲು ಮಾಡಿದ್ದೇವೆ ಸುಮಾರು 438 ಜನರನ್ನು ದಸ್ತಗಿರಿ ಮಾಡಿದ್ದೇವೆ ಅದರಲ್ಲಿ ನ್ಯಾಯಾಲಯದ ಕಡೆಗೆ ಹೋಗಿ ನ್ಯಾಯಾಂಗ ಸ್ವಾಧೀನಕ್ಕೆ 260 ಜನರನ್ನು ಕೊಟ್ಟಿದ್ದಾರೆ ಅದರಲ್ಲಿ ಮುಂಜಾಗ್ರತಾ ಕ್ರಮವಾಗಿ 279 ಜನರನ್ನು ನಾವು ದಸ್ತಗಿರಿ ಮಾಡಿದ್ದೇವೆ ಅಲ್ಲಿ 148 ಜನ ತೀವ್ರವಾಗಿ ಗಾಯಗೊಂಡಿದ್ದಾರೆ, ಇಬ್ಬರು ಮೃತಪಟ್ಟಿದ್ದಾರೆ ಸುಮಾರು 125 ವಾಹನಗಳಿಗೆ ಜಖಂ ಆಗಿದೆ 33,94,100 ರೂ ಗಳಷ್ಟು ಅದರಲ್ಲಿ ತೊಂದರೆಯಾಗಿ ಹಾನಿ ಮತ್ತು ನಷ್ಟವಾಗಿದೆ ಎಂದು ಮಾಡಿದ್ದೇವೆ 2,12,70,500 ರೂ ಗಳಷ್ಟು ಸಾರ್ವಜನಿಕ ಮತ್ತು ಖಾಸಗಿ ವಾಹನ ಮತ್ತು ಮೊದಲಾದವುಗಳಲ್ಲಿ ಹಾನಿಯಾಗಿದೆ ಈ ಪೊಲೀಸ್‌ರೆ ಇದಕ್ಕೆ ಜವಾಬ್ದಾರರು ಇವರೆ ಪ್ರಚೋದನಾಕಾರರು ಎಂಬ ಮಾತುಗಳನ್ನು ಆಡಿದರು ಇತ್ತೀಚೆಗೆ ಮಾತ್ರ ನಾವು 4,300 ಪೊಲೀಸ್ ಪೇದೆಗಳ ನೇಮಕಾತಿಯ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿದ್ದೇವೆ ಇಲ್ಲಿಯವರೆಗೆ ಇದ್ದಂಥ ಪೊಲೀಸ್‌ರು ಎಲ್ಲಾ ಕಾಲದಲ್ಲಿ ಎಲ್ಲಾ ಸರ್ಕಾರದಲ್ಲಿ ಇದ್ದಂತಹವರೆ ಆ ಕಾಲದಲ್ಲಿ ಇದ್ದಂಥ ಪೊಲೀಸ್‌ರು ಈ ಕಾಲದಲ್ಲಿ ಬದಲಾಗಿದ್ದಾರೆಂದು ಭಾವಿಸಿಕೊಳ್ಳುವುದು ಎಲ್ಲಾ ತಪ್ಪುಗಳಿಗೆ ಪೊಲೀಸ್‌ರೆ ಅದಕ್ಕೆ ಕಾರಣರೆಂದು ಹೇಳುವುದು ಏನಿದೆ, ಇದು ನಿಜವಾಗಿಯೂ ಕೂಡ it is a most uncharitable allegation ನಮ್ಮಲ್ಲಿ ನಾವು ಏನು ತಪ್ಪು

ಮಾಡಿದ್ದೇವೆ ಎನ್ನುವುದನ್ನು ನಾವು ಗುರುತು ಹಿಡಿಯಬೇಕಾಗುತ್ತದೆ ಇದೆ ರೀತಿಯಾಗಿ ಬೇರೆ ಬೇರೆ communal riots ಆಗಿರುವಂಥ ಸಂದರ್ಭದಲ್ಲಿ 7–8 ದಿವಸಗಳವರೆಗೆ ಹಿಂದಿನ ಸರ್ಕಾರದಲ್ಲಿ ಪಣಂಬೂರಿನಲ್ಲಿ ಹಾಗೂ ಸುರತ್ಕಲ್‌ನಲ್ಲಿ ಆದಂಥದ್ದರಲ್ಲಿ ಎಷ್ಟು ದಿವಸಗಳವರೆಗೆ ಅಲ್ಲಿ ಗಲಭೆ ನಡೆಯಿತು ಎಂದು ತಮಗೆ ಗೊತ್ತಿದೆ ಅದೇ ರೀತಿಯಾಗಿ ನಾನು ಮಾನ್ಯ ರೋಷನ್‌ಬೇಗ್‌ರವರನ್ನು ಅಭಿನಂದಿಸುತ್ತೇನೆ ಏನು ಸದ್ದಾಂ ಹುಸೇನ್‌ರವರ ಒಂದು ಕಾರ್ಯಕ್ರಮವನ್ನು ಏರ್ಪಾಡು ಮಾಡಿದಂಥ ಸಂದರ್ಭದಲ್ಲಿ ಅವರು ಪ್ರತಿಭಟನೆ ಮಾಡುವುದಕ್ಕೆ ಅವಕಾಶವಿದೆ ಎನ್ನುವ ಕಾರಣಕ್ಕಾಗಿ ನಾವು ಪರವಾನಗೆ ಕೊಟ್ಟೆವು, ಯಾವುದೇ ಮೆರವಣಿಗೆಯನ್ನು ಮಾಡಬಾರದು ಎಂದು ಹೇಳಿದೆವು, ಸಂಘಟಿಗರಿಗೂ ಗೊತ್ತಿಲ್ಲದಂತೆ, ಇನ್ನಾರಿಗೂ ಗೊತ್ತಿಲ್ಲದಂತೆ ಆ ರೀತಿಯಾಗಿ ಮಾಡಿ, ಹಿಂದು ಸಮಾಜೋತ್ಸವಕ್ಕಾಗಿ ಕಟ್ಟಿರತಕ್ಕಂಥ ಕೆಲವು ಬ್ಯಾನರ್‌ಗಳನ್ನು ಅವರು ತೆಗೆದು ಹಾಕಿದರು ಸಣ್ಣ ಸಣ್ಣ ವಿಷಯಗಳಿಗೂ ಇವೆ ಪ್ರಚೋದನಾಕಾರಿಯಾಗಿವೆ ಅದರಲ್ಲಿರತಕ್ಕಂಥ ಒಂದು Sepping Road, ಆದ ನಂತರ ಬರುವ ಮುತ್ಯಾಲಮ್ಮ ದೇವಸ್ಥಾನವಿದೆ ಅಲ್ಲಿ ಯಾವಾಗಲೂ ಇಂತಹ ಪ್ರಚೋದನೆಗಳು ಆಗುತ್ತವೆ ಈ ಪ್ರಚೋದನೆಗಳ ಸಂದರ್ಭ ಬಂದಾಗ ಜನ ಅಲ್ಲಿ ಕೇಳಿದರೆ ಸ್ಥಳೀಯರೆಲ್ಲರೂ ಶಾಂತಿ ಪ್ರಿಯರಾಗಿದ್ದಾರೆ ನಾವು ಹಾಗೂ ನಮ್ಮ ಪೊಲೀಸ್ ಹಿರಿಯ ಅಧಿಕಾರಿಗಳು ಎರಡೆರಡು ಬಾರಿ ಅಲ್ಲಿಗೆ ಹೋಗಿ ಬಂದಿದ್ದೇವೆ ಅಲ್ಲಿರುವಂಥ ಮುಸಲ್ಮಾನರು ಮತ್ತು ಹಿಂದುಗಳು ಹೇಳುತ್ತಾರೆ ನಾವು ಈ ಗುಡಿಗೆ ಬಂದು ಮುಸಲ್ಮಾನ ಜನಾಂಗದವರು ಮದುವೆಯಾದ ಮೇಲೆ ಅವರ ವಧು–ವರರನ್ನು ಕರೆದುಕೊಂಡು ಬಂದು ಪ್ರಥಮ ಪೂಜೆಯನ್ನು ಮುತ್ಯಾಲಮ್ಮ ದೇವಸ್ಥಾನದಲ್ಲಿ ಮಾಡಿಸುತ್ತಾರೆ ಎಂದು ಅಲ್ಲಿರುವಂಥ ಪ್ರತಿಯೊಬ್ಬ ಮುಸಲ್ಮಾನ ಜನಾಂಗದವರು ಹೇಳಿದರು, ಸರ್ ಇದಕ್ಕೆ ಸಂಬಂಧವಿಲ್ಲ ನಾಗವಾರದ ಕಡೆಯಿಂದ ಬಂದಂಥ ಕೆಲವು ಜನರು ಈ ಪ್ರಚೋದನಾಕಾರಿಯಾದಂಥ ಕೆಲಸವನ್ನು ಮಾಡಿ ಹಿಂದು ಮತ್ತು ಮುಸಲ್ಮಾನರ ನಡುವೆ ಈ ತರಹದ ಅನ್ಯಾಯವನ್ನು ಮಾಡಿದರು ಎಂದು ಹೇಳಿದರು ಹೊರಗಡೆಯಿಂದ ಬಂದಂಥ ಶಕ್ತಿಗಳು ಯಾರಿದ್ದಾರೆ, ಸ್ಥಳೀಯರಾಗಿ ಬದುಕತಕ್ಕಂಥ ಜನರು ಅಣ್ಣ ತಮ್ಮಂದಿರಾಗಿದ್ದಾರೆ ಆ ದೇವಾಲಯದ ಪಾಯಿಂಟ್‌ನಲ್ಲಿ ಇದು ಪ್ರತಿ ಸಂದರ್ಭದಲ್ಲಿಯೂ ಆಗಿದೆ ಆದ್ದರಿಂದ ಅವರು ನಿಜವಾಗಿರುವಂಥ ವಿಷಯವನ್ನು ಪ್ರಸ್ತಾಪ ಮಾಡಿದರು ಅದರ ನಂತರ ಆಗಿರುವಂಥದ್ದು ಇವರಾದರೂ ಕೂಡ ಸಮಾಧಾನದಿಂದ ಇರಬಹುದಾಗಿತ್ತು ನಾವು ಇಂತಿಂಥ ರಸ್ತೆಯಲ್ಲಿ ಹೋಗಬೇಕೆಂದು ಹೇಳಿದರೂ ಕೂಡ ಅವತ್ತಿನ ದಿವಸ 5 ಕಡೆ

ಇಂತಹ ಕಾರ್ಯಕ್ರಮಗಳು ಇತ್ತು CITU ಯವರದ್ದು ಕೂಡ ಅವತ್ತೆ ರ್ಯಾಲಿ ಇತ್ತು ಅವರು ಇದು ನಡೆಯುತ್ತದೆಂದು ಅಲ್ಲ ಒಂದು ತಿಂಗಳ ಹಿಂದೆಯೆ ಈ ಬಗ್ಗೆ ಏರ್ಪಾಡುಗಳನ್ನು ಮಾಡಿಕೊಂಡಿದ್ದರು ಆದ್ದರಿಂದ ಅವರಿಗೂ ಕೂಡ ನಾವು ಜವಾಬ್ದಾರಿಯನ್ನು ಕೊಟ್ಟೆವು ಆ ದಿವಸ ಮಲ್ಲೇಶ್ವರಂನಲ್ಲಿಯೂ ಕೂಡ ಇಂತಹ ಕಾರ್ಯಕ್ರಮವಿತ್ತು ಬಸವನಗುಡಿಯಲ್ಲಿಯೂ ಕೂಡ ಕಾರ್ಯಕ್ರಮವಿತ್ತು, ಭಾರತಿನಗರದಲ್ಲಿಯೂ ಕೂಡ ಕಾರ್ಯಕ್ರಮವಿತ್ತು ಇಡೀ ಬೆಂಗಳೂರು ನಗರದಲ್ಲಿ ಇಂತಹ ಕಾರ್ಯಕ್ರಮಗಳು ನಡೆಯುತ್ತಿದ್ದರು ಕೂಡ ಒಂದೇ ಒಂದು ಸಣ್ಣ ಅಹಿತಕರವಾದ ಘಟನೆ CITU ಯವರು ಮಾಡಿರುವುದಿಲ್ಲ ಮಲ್ಲೇಶ್ವರಂನಲ್ಲಿ ನಡೆದಂಥ ಹಿಂದೂ ಮಹೋತ್ಸವದಲ್ಲಿಯೂ ಕೂಡ ನಡೆಯಲಿಲ್ಲ ಕೇವಲ ಭಾರತಿನಗರ – ಫ್ರೇಜರ್‌ಟೌನ್ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಮಾತ್ರ ನಡೆಯಿತು ಇಡೀ ಬೆಂಗಳೂರು ನಗರ ಶಾಂತವಾಗಿದ್ದರೆ ಆ ಎರಡು ಪ್ರದೇಶಗಳಲ್ಲಿ ಮಾತ್ರ ಆಗಿದೆ ಮುಂಜಾಗತಾ ಕ್ರಮವಾಗಿ ಕೈಗೊಂಡ ಕ್ರಮದ ಮೂಲಕವಾಗಿ ಪೊಲೀಸ್‌ರು ನಿಜವಾಗಿಯೂ ಕೂಡ ಅತ್ಯಂತ ದಕ್ಷತೆಯಿಂದ ನಿಷ್ಪಕ್ಷಪಾತವಾಗಿ ಕೆಲಸವನ್ನು ಮಾಡಿದ್ದಾರೆ ನಾನು ಅವರನ್ನು ಅಭಿನಂದಿಸುತ್ತೇನೆ ಆದರೆ ನೀವು ಮುಂಜಾಗತಾ ಕ್ರಮವಾಗಿ ಯೋಚನೆ ಮಾಡಬಹುದಾಗಿತ್ತು ಇದರ ಬಗ್ಗೆ ನೀವು ಕ್ರಮ ಕೈಗೊಳ್ಳಬಹುದಾಗಿತ್ತು ಇಂತಹ ಮಾತುಗಳನ್ನು ಹೇಳುತ್ತೀರಿ, ಅದು ನಿಜ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ ಮುಂಜಾಗತಾ ಕ್ರಮದ ಬಗ್ಗೆ ಮಾನ್ಯ ಸದಸ್ಯರಾದ ರಾಜೇಂದ್ರನ್‌ರವರು ಹೇಳಿದಂತೆ, ನಾವು ಒಪ್ಪಿಗೆ ಕೊಡಲಿಲ್ಲವೆಂದರೆ ಪ್ರಜಾಪ್ರಭುತ್ವದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನೀವು ಮೊಟಕುಗೊಳಿಸಿದ್ದೀರಿ ನೀವು permission ಕೊಟ್ಟರೆ ಒಂದೇ ದಿವಸದಲ್ಲಿ ಎಷ್ಟು ಜನರಿಗೆ permission ಏಕೆ ಕೊಟ್ಟಿದ್ದೀರಿ ಎಂದು ಹೇಳುತ್ತಾರೆ ಇದರ ಬಗ್ಗೆ ತಾವು ಹೇಳಿದಂತೆ, ಸುಪ್ರಿಂಕೋರ್ಟಿನ ನಿರ್ಣಯದ ಪ್ರಕಾರ ಬಂದ್‌ಗೆ ಕರೆ ಕೊಡುವವರು ಇಂತಹ ಕಾರ್ಯಕ್ರಮವನ್ನು ಮಾಡುವವರು, ಸಂಪೂರ್ಣವಾದಂಥ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಗುತ್ತದೆ ಅವರವರಿಗೆ ಬೇಕಾಗಿರುವಂಥ ಅನುಕೂಲತೆಗಳನ್ನು ಕಲ್ಪಿಸಿಕೊಡಬೇಕಾಗುತ್ತದೆ ಉಡುಪಿಯ ಸಂಸ್ಕೃತಿಯ ಆರಕ್ಷಕರ ಎಡೆಬಿಡದ ಕಾರ್ಯಾಚರಣೆ ಎಂದು ತಾವು ಕೊಟ್ಟು ಕಳುಹಿಸಿದ್ದೀರಿ, ಇವತ್ತೆ ನಾನು ಇದನ್ನು ಗೃಹ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ಕಳುಹಿಸುತ್ತಿದ್ದೇನೆ

ಶ್ರೀ ಆರ್ ರೋಷನ್‌ಬೇಗ್. ಕಾಂಪೆನ್‌ಸೆಷನ್ ಬಗ್ಗೆ ಹೇಳಬೇಕು

ಶ್ರೀ ಎಂ ಪಿ ಪ್ರಕಾಶ್ ಈಗಾಗಲೇ ನಾವು ಬಹಳ ಜನರಿಗೆ ಪರಿಹಾರವನ್ನು ಕೊಟ್ಟಿದ್ದೇವೆ

ಶ್ರೀ ಆರ್ ರೋಷನ್‌ಬೇಗ್ ಮಾನ್ಯ ಅಧ್ಯಕ್ಷರೆ, sorry to interrupt ಕಾಂಪೆನ್‌ಸೆಷನ್ ಯಾರ್ಯಾರಿಗೆ ಬುಲೆಟ್ ಇಂಜ್ಯುರೀಸ್ ಆಗಿದೆ ಮಾನ್ಯ ಗೃಹ ಮಂತ್ರಿಗಳೇ ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ ನಿನ್ನೆಯೂ ಕೂಡ ಹೋಗಿ ನಾನು ಕೆಲವು victimsನ meet ಮಾಡಿಕೊಂಡು ಬಂದಿದ್ದೇನೆ ಯಾರ್ಯಾರಿಗೆ ಬುಲೆಟ್‌ನಿಂದ ಇಂಜ್ಯುರೀಸ್ ಆಗಿದೆ, ಪ್ರೇಮನಾಥ್ ಎಂಬ ಹುಡುಗನಿಗೆ ಬುಲೆಟ್ ಇಂಜ್ಯೂರೀಸ್ ಆಗಿದೆ ಯಾರ್ಯಾರಿಗೆ ಇಂಜ್ಯೂರೀಸ್ ಆಗಿದೆ, ಯಾರಿಗೂ ಒಂದು ನಯಾಪೈಸೆ ಸಿಕ್ಕಿಲ್ಲ ಯಾವ ಹುಡುಗ ಸತ್ತು ಹೋಗಿದ್ದಾನೆ ಅವನಿಗೆ ಒಂದು ಲಕ್ಷ ರೂ ಗಳು ಹೋಗಿದೆ ಬುಲೆಟ್ ಇಂಜ್ಯೂರೀಸ್ ಆಗಿದೆ ಒಬ್ಬರಿಗೂ ಕೂಡ ಸರ್ಕಾರದ ವತಿಯಿಂದ ಕಾಂಪೆನ್‌ಸೆಷನ್ ಸಿಕ್ಕಿಲ್ಲ

ಶ್ರೀ ಎಂ ಪಿ ಪ್ರಕಾಶ್ ಬುಲೆಟ್ ಇಂಜ್ಯೂರೀಸ್ ಆದವರಿಗೆ ನಾವು ಗಾಯವಾದವರಿಗೆ ಪರಿಹಾರ ಕೊಡಬೇಕೆಂಬ ಬಗ್ಗೆ ಆಜ್ಞೆ ಮಾಡಿದ್ದೇವೆ ಯಾರು ಸತ್ತಿದ್ದಾರೆ ಅವರಿಗೆ ಪರಿಹಾರವನ್ನು ಕೊಟ್ಟಿದ್ದೇವೆ ಇಡೀ ಗಾಯಾಳುಗಳಾಗಿ ಶುಶ್ರೂಷೆ ತೆಗೆದುಕೊಂಡವರಿಗೆ ಸಂಪೂರ್ಣವಾದಂಥ ಖರ್ಚನ್ನು ನಾವು ಕೊಟ್ಟಿದ್ದೇವೆ ಬೇರೆ ಸಮಾಜದ ಸಂಘಟಕರು ಕೂಡ ಬಂದು ಅವರಿಗೆ ಸಹಾಯವನ್ನು ಮಾಡಿದ್ದಾರೆ ಹಿಂದು–ಮುಸ್ಲಿಂ ಎಂಬ ಬೇಧಭಾವವಿಲ್ಲದೆ ಅಲ್ಲಿ ಸಹಾಯ ಮಾಡಿದ್ದಾರೆ ಎಲ್ಲರೂ ಇದರ ಬಗ್ಗೆ ಕಷ್ಟಪಟ್ಟಿದ್ದಾರೆ, ತಾವು ಹೇಳಿದ್ದೆ ನಿಜವಾದರೆ ನಮ್ಮ ಅಧಿಕಾರಿಗಳು ಇಲ್ಲಿಯೇ ಇದ್ದಾರೆ, ನಾಳೆ ಅದನ್ನು ಕೊಡಿಸುವಂಥ ಕೆಲಸವನ್ನು ಮಾಡುತ್ತೇನೆ ಅಕಸ್ಮಾತ್ ಯಾರೂ ಇಲ್ಲದಿದ್ದರೆ ನಮ್ಮ ಅಧಿಕಾರಿಗಳು ಪ್ರಧಾನ ಕಾರ್ಯದರ್ಶಿಗಳು ಇಲ್ಲಿಯೆ ಇದ್ದಾರೆ Law and order ADGP ಯವರು ಇದ್ದಾರೆ, ನಮ್ಮ ಬಿಪಿನ್ ಗೋಪಾಲ್‌ಕೃಷ್ಣ ಇದ್ದಾರೆ, ನಾಳೆ ಕೊಡಿಸುವಂಥ ವ್ಯವಸ್ಥೆಯನ್ನು ಮಾಡುತ್ತೇನೆ ಈ ಉಡುಪಿಯ ಸಂಸ್ಕೃತಿಯ ಆರಕ್ಷಕರು ಯಾರೆ ಆಗಲಿ ಕಾನೂನನ್ನು ತಮ್ಮ ಕೈಗೆ ತೆಗೆದುಕೊಳ್ಳುವುದನ್ನು ನಾಗರಿಕ ಸಮಾಜ ಒಪ್ಪುವುದಿಲ್ಲ ಅದು ಯಾವುದೇ ಕಾರಣ ಇರಬಹುದು, ಆ ಕಾರಣ ಎಂದದ್ದೇ ಇರಬಹುದು, ಅದರ ಬಗ್ಗೆ ನಾವು ಏನೇ ಅಂದುಕೊಂಡಿದ್ದರು ಸಹ ನಾವು ಆ ಬಗ್ಗೆ ಪೊಲೀಸ್‌ರಿಗೆ ದೂರನ್ನು ಕೊಡಬೇಕಾಗುತ್ತದೆ ಸಂಬಂಧಪಟ್ಟ ಪ್ರೇಮಿಗಳು ಬೇರೆ ಬೇರೆ ಜಾತಿಯವರು ಆಗಿದ್ದರೆ ಅವರ ತಂದೆ ತಾಯಿಗಳು ಅದನ್ನು ಕೊಡಬೇಕಾಗುತ್ತದೆ ಅಪ್ರಾಪ್ತ ವಯಸ್ಸಿನ ಬಾಲಕಿಯಾಗಿದ್ದರೆ ಅದು ಬೇರೆಯಾಗಿರುತ್ತದೆ ಆ ಕಾರಣಕ್ಕಾಗಿಯೇ ಸಂಸ್ಕೃತಿಯ ಆರಕ್ಷಕರು ಎಂದು ಹೇಳಿ ತಮ್ಮಷ್ಟಕ್ಕೆ ತಾವೆ ಸ್ವಯಂಘೋಷಿತವಾಗಿ ಕಾನೂನನ್ನು ನಿಯಂತ್ರಿಸುತ್ತೇವೆಂದು ಯಾರಾದರೂ ಇದ್ದರೆ ಅವರ ಮೇಲೆಯೂ

ಕೂಡ ನಾವು ಖಂಡಿತವಾಗಿಯೂ ಕ್ರಮವನ್ನು ಕೈಗೊಳ್ಳುತ್ತೇವೆ ಇವತ್ತೆ ಅದನ್ನು ತಿಳಿಸುತ್ತೇವೆ CoD ವರದಿಯನ್ನು ಸದನದಲ್ಲಿ ಮಂಡಿಸುವುದಕ್ಕೆ ಬರುವುದಿಲ್ಲ ಅದು ,ಬೇಕಾಗಿರುವಂಥದ್ದನ್ನು ನೋಡಿಕೊಂಡು ಹೇಳಬೇಕು CoD ಯ ವರದಿ ಪ್ರಕಾರವಾಗಿ ಯಾರ್ಯಾರು ತಪ್ಪಿತಸ್ಥರು ಇದ್ದಾರೆ, ಅವರ ಮೇಲೆ ನಾವು ಕೇಸ್‌ನ್ನು ಈಗಾಗಲೇ ಹಾಕಿದ್ದೇವೆ They are already there in judicial custody Case has been registered ಆ ಕಾರಣಕ್ಕಾಗಿಯೇ ಅದರ ಅಗತ್ಯವಿಲ್ಲ ಯಾರೂ ಕೇಳದಿದ್ದರೂ ಕೂಡ suomoto ಸರ್ಕಾರವೇ CoD ಗೆ ಜವಾಬ್ದಾರಿಯನ್ನು ವಹಿಸಿದೆ ಅಲ್ಲಿರುವಂಥ IG ಯವರು ಅಲ್ಲಿರುವಂಥ SP ಯವರ ಬಗ್ಗೆ ವಿನಾಕಾರಣ ತಪ್ಪಾಗಿ ತಿಳಿದುಕೊಳ್ಳುವುದು ಅಲ್ಲ ಮಾನ್ಯ ಶ್ರೀರಾಮರೆಡ್ಡಿಯವರು ಒಂದು ವಿಷಯವನ್ನು ಗಮನಿಸಬೇಕು ಎರಡನೇ ಬಾರಿ ನಡೆದಿರುವಂಥ ,ಸುಖಾನಂದ ಶೆಟ್ಟಿಯವರ ಕಗ್ಗೊಲೆ ಆದ ನಂತರ, ಅದರ ಹಿಂಬಾಲಕರು ಯಾರಿದ್ದಾರೆಂದು ಗೊತ್ತು ಅದನ್ನು ಪ್ರಶ್ನೆ ಮಾಡಿದವರು ಯಾರೆಂದು ಗೊತ್ತು ಅವರಿಗೆ ಎಲ್ಲಿಂದ ಹಣ ಬಂತು ಎಂದು ಗೊತ್ತು ಅವರು ಪ್ರತಿಭಟನೆಯನ್ನು ಮಾಡುವಂಥ ಸಂದರ್ಭದಲ್ಲಿ ನೀವು ಹೆಣವನ್ನು ತೆಗೆದುಕೊಂಡು ಹೋಗುವಾಗ ಇಂತಹ ನಿರ್ದಿಷ್ಟವಾದ ದಾರಿಯಲ್ಲಿ ಹೋಗಬೇಕೆಂದು ಹೇಳಿದಾಗ ತಪ್ಪಿಹೋದಂಥ ಸಂದರ್ಭದಲ್ಲಿ ಪೊಲೀಸ್‌ರು ಗುಂಡನ್ನು ಹಾರಿಸಿದ್ದಾರೆ ಗುಂಡನ್ನು ಹಾರಿಸುವಂತಹ ಸಂದರ್ಭದಲ್ಲಿ ಹಿಂದು ಮುಖಂಡರು ಆದವರಿಗೆ ತಲೆಗೆ ಹಾಗೂ ಎದೆಗೆ ಒಂದೊಂದು ಗುಂಡು ಬಿದ್ದಿದೆ ಆ ಸಂದರ್ಭದಲ್ಲಿರುವಂತಹ ಹಿಂದು ಸಂಘಟನೆಗಳು ಪೊಲೀಸರ ಮೇಲೆ ಆಪಾದನೆಯನ್ನು ಮಾಡಿದ್ದಾರೆ ನೀವು ನ್ಯಾಯವಾಗಿ ನೋಡಿದರೆ ಗಾಳಿಯಲ್ಲಿ ಗುಂಡನ್ನು ಹಾರಿಸಬೇಕಾಗಿತ್ತು ಗುಂಡನ್ನು ಹಾರಿಸುವಾಗ ಕಾಲಿಗೆ ಹೊಡೆಯಬೇಕಾಗಿತ್ತು ನೀವು ತಲೆಗೆ ಹೊಡೆದಿದ್ದೀರಿ, ಎದೆಗೆ ಹೊಡೆದಿದ್ದೀರಿ ಎಂದರೆ ನಿರ್ದಿಷ್ಟವಾಗಿ ಗುರಿಯನ್ನು ಇಟ್ಟು ಅವರನ್ನು ಕೊಂದಿದ್ದೀರಿ ಆದರೆ ಅದೇ ರೀತಿಯಾಗಿ ಇನ್ನೊಂದು ಸಂಘಟನೆ ಈ ತರಹದ ಮಾತುಗಳನ್ನು ಏತಕ್ಕೆ ಆಡಬೇಕೆಂದರೆ, ಅಪವಾದಗಳನ್ನು ಕೊಡುವುದು ಇದ್ದೆ ಇರುತ್ತದೆ ಆ ಗಲಭೆಯಲ್ಲಿ ಏನಾಗಿರುತ್ತದೆ, ನಿರಪರಾಧಿಗಳನ್ನು ನೀವು ಏತಕ್ಕೆ ಹಿಡಿದುಕೊಂಡು ಹೋಗಿದ್ದೀರಿ ಆ ಎಲ್ಲಾ ವಿಷಯಗಳು ನಾವು ಅಲ್ಲಿಗೆ ಹೋದಂತಹ ಸಂದರ್ಭದಲ್ಲಿ ಬಂತು ಆದರೆ ನಿರಪರಾಧಿ ಅಪರಾಧಿ ಎನ್ನುವುದು ಆ ಕ್ಷಣದಲ್ಲಿ ಗುರುತಿಸುವುದಕ್ಕಾಗುವುದಿಲ್ಲ ಬೆಂಕಿ ಹತ್ತಿ ಉರಿಯುತ್ತಿರಬೇಕಾದರೆ ನಾವು ಯಾವುದನ್ನು ಮೊದಲು ಸಂರಕ್ಷಣೆಯನ್ನು

ಮಾಡಬೇಕೆಂಬುದಕ್ಕಿಂತಲೂ ಬೆಂಕಿಯನ್ನು ಆರಿಸುವುದರ ಕಡೆಗೆ ನಾವು ಲಕ್ಷ್ಯವನ್ನು ಕೊಡುತ್ತೇವೆ ಆದ್ದರಿಂದ ಪೋಲಿಸ್ ಇಲಾಖೆಯವರು ಎಲ್ಲರನ್ನು ಕರೆದುಕೊಂಡು ಬಂದ ಮೇಲೆ ನಿರಪರಾದಿಗಳು ಯಾರು ಆಗಿದ್ದಾರೆ ಅವರನ್ನು ಗುರುತಿಸಿದ ಮೇಲೆ ಅನೇಕರನ್ನು ನಾವು ಕೈಬಿಟ್ಟಿದ್ದೇವೆ ಅದಕ್ಕೆ ಬೇರೆಯವರು ಕೂಡ ಸಹಾಯವನ್ನು ಮಾಡಿದ್ದಾರೆ ಮತ್ತೇ ಆಯಾಯ ಸಮಾಜದಲ್ಲಿಯೂ ಕೂಡ ಒಳಗುಂಪುಗಳಲ್ಲಿ ಜಗಳಗಳು ಆಗಿ ಅದರಿಂದ ಅಶಾಂತಿ ಉಂಟಾಗಿರುವುದು ಕೂಡ ಕಂಡಿದ್ದೇವೆ ಒಂದೇ ಖುರಾನ್‌ನ್ನು ಓದುತ್ತಿರುವಂತಹ ಆ ಪ್ರವಾದಿಯ ಹೆಸರಿನಲ್ಲಿರುವಂತಹ ಧರ್ಮದಲ್ಲಿ ಉಪಪಂಗಡಗಳು ಇವೆ ಆ ಉಪಪಂಗಡಗಳು ಕೂಡ ಅನೇಕಬಾರಿ ಜಗಳವಾಗಿರುವುದು ಕೂಡ ಇದೆ ಇದು ಇದೇ ದೇಶದಲ್ಲಿ ಅಲ್ಲ, ಇರಾನ್ ದೇಶದಲ್ಲಿಯೂ ಕೂಡ ಇದೆ, ಇರಾಕ್‌ನಲ್ಲಿಯೂ ಕೂಡ ಇದೆ 'ನಮ್ಮ ದೇಶದಲ್ಲಿಯೂ ಕೂಡ ಆಗಿದೆ ನಮ್ಮಲ್ಲಿ ಹಿಂದು ಸಂಘಟನೆಗಳು ಉಪಪಂಗಡಗಳಲ್ಲಿಯೂ ಕೂಡ ಜಗಳಗಳು ಆಗಿರುವುದು ಇದೆ ಎಲ್ಲದಕ್ಕೂ ಕೂಡ ಸಮಾಜದಲ್ಲಿ ಸಹಿಷ್ಣತೆ ಎನ್ನುವುದು ಕೂಡ ಇರಬೇಕು ಮತ್ತು ಬೇರೆ ಬೇರೆ ವಿಷಯವನ್ನು ಮಾನ್ಯ ವೈಜನಾಥ್ ಪಾಟೀಲ್‌ರವರು ಪ್ರಸ್ತಾಪ ಮಾಡಿದರು ನೇರವಾಗಿ 69ಕ್ಕೆ ಸಂಬಂಧಪಟ್ಟಂತೆ ನಾವು ಎಲ್ಲವನ್ನು ಕೂಡ

ಶ್ರೀ ಎನ್ ಧರ್ಮಸಿಂಗ್ ಹಿಂದೂ ಟೇಕೆದಾರ್ ಎಂದು ಮಾನ್ಯ ವೈಜನಾಥ್ ಪಾಟೀಲ್‌ರವರು ಹೇಳಿದರು, ಅದನ್ನು ಹೇಳುವುದು ಬಹಳ ಕಷ್ಟ

ಶ್ರೀ ಎಂ ಪಿ ಪ್ರಕಾಶ್ ಹಿಂದೂ ಟೇಕೆದಾರ್ ಎಂಬ ಬಗ್ಗೆ ಅವರು ಹೇಳುವುದು ಒಳ್ಳೆಯದು ಸಾರ್ ಆದರೆ ಹಿಂದು ಎಂದು ಹೇಳುವುದು, ಅವರು ಮತ್ತೇ ವ್ಯಾಖ್ಯಾನವನ್ನು ಅವರ ರೀತಿಯಲ್ಲಿ ಮಾಡಿದರೆ ಅದು ಬಹಳ ದೂರವಾಗುತ್ತದೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ. ನಮ್ಮ ಲೀಡರ್ ಮನೆಯಲ್ಲಿ ಇಲ್ಲವೆಂದರೆ ಅದಕ್ಕೆ ಉತ್ತರವನ್ನು ಕೊಡಬಾರದು ಅಂತನಾ? ಅದರ ಬಗ್ಗೆ ಹೇಳಬೇಕು

ಶ್ರೀ ಎಂ ಪಿ ಪ್ರಕಾಶ್ ಉತ್ತರವನ್ನು ಕೊಡಬಹುದು ಆದರೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಇಲ್ಲದಿದ್ದರೆ ನಾವು ಆ ಮಾತನ್ನು ಕೇಳುತ್ತಿದ್ದೇವಾ?

ಶ್ರೀ ಎಂ ಪಿ ಪ್ರಕಾಶ್ ನಾವು ನಿಜವಾಗಿಯೂ ಈ ಸರ್ಕಾರದ (ಗೊಂದಲ) ಮಾನ್ಯ ಮುಖ್ಯಮಂತ್ರಿಗಳಾಗಿ, ಮಾನ್ಯ ಯಡಿಯೂರಪ್ಪನವರು ಉಪಮುಖ್ಯಮಂತ್ರಿಗಳಾಗಿ ರಚಿತವಾಗಿರುವಂತಹ ಈ ಸರ್ಕಾರ ಎಲ್ಲರನ್ನು ಸಮಾನ ದೃಷ್ಟಿಯಲ್ಲಿ ನೋಡುತ್ತದೆ ಕಿಡಿಗೇಡಿಗಳಾಗಿರುವಂತಹವರು, ಸಮಾಜಬಾಹಿರವಾದಂತಹ ಶಕ್ತಿಗಳು ಯಾರ್ಯಾರು ಇರುತ್ತಾರೆ, ಅವರ ಮೇಲೆ ನಿರ್ದಾಕ್ಷಿಣ್ಯವಾದಂತಹ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ ಪೋಲಿಸರ ಯಾವ ತಪ್ಪುಗಳು ಇಲ್ಲವೆನ್ನುಂತಹ ಮಾತು ಇದರಲ್ಲಿ ಇದೆ

ಶ್ರೀ ಎನ್ ಧರ್ಮಸಿಂಗ್(ವಿರೋಧ ಪಕ್ಷದ ನಾಯಕರು) ಇದರ ಬಗ್ಗೆ ನಾವು ಮತ್ತು ಖರ್ಗೆಯವರು ಬಹಳಷ್ಟು ಮಂದಿ ಮಾತನಾಡಿದ್ದೇವೆ ಮಾನ್ಯ ಮಾಧುಸ್ವಾಮಿಯವರು ಕೂಡ ಮಾತನಾಡಿದ್ದಾರೆ ಇದು ಬಹಳ ಗಂಭೀರವಾದಂತಹ ಒಂದು ರಾಜ್ಯಕ್ಕೆ ಕಾಡುತ್ತಿರುವಂತಹ ಒಂದು ಸಮಸ್ಯೆಯಾಗಿದೆ ಇವತ್ತು ಸಮಯವಿಲ್ಲವೆಂದು ಸದನವನ್ನು ಮುಗಿಸಬೇಕೆಂದು ಹೇಳಿದ್ದೀರಿ, ಇವತ್ತು ಸಮ್ಮಿಶ್ರ ಸರ್ಕಾರದಲ್ಲಿ ಬದ್ದತೆ ಇಲ್ಲ ಮಂಗಳೂರಿನಲ್ಲಿ ಆದಂತಹ ಗಲಭೆ, ಮಾನ್ಯ ದೇವೇಗೌಡರು ಹೇಳುತ್ತಾರೆ CoD enquiry ಸಾಕು ಉಪಮುಖ್ಯಮಂತ್ರಿಗಳು ಹೇಳುತ್ತಾರೆ judicial probe ಬೇಕು ಅಲ್ಲಿರುವಂತಹ ಉಸ್ತುವಾರಿ ಸಚಿವರು ಒಂದು ಮಾತನ್ನು ಹೇಳುತ್ತಾರೆ ಅದಕ್ಕೆ ಇವತ್ತು ಈ ತರಹದ ವೈಚಾರಿಕ ಮತಬೇಧಗಳು ಇದ್ದರೆ ನಿಮ್ಮ ಕೆಳಗೆ ಇರುವಂತಹ ಪೋಲೀಸ್ ಇಲಾಖೆ ಪರಿಪಾಲನೆ ಮಾಡುವುದಕ್ಕಾಗುವುದಿಲ್ಲ ಬೆಂಗಳೂರು ನಗರ, ಕರ್ನಾಟಕ ರಾಜಧಾನಿ ಮೊಟ್ಟಮೊದಲನೆಯದಾಗಿ ಸದ್ದಾಂ ಹುಸೇನ್ ಅವರ ಒಂದು condolence meetingಗೆ ನಾವು ಮಾನ್ಯ ಖರ್ಗೆಯವರು ಸಹ ಹೋಗಿದ್ದೆವು ಮಾನ್ಯ ಮಾಧುಸ್ವಾಮಿಯವರು ಹೇಳಿದ ಹಾಗೆ ಪಾಪ ಅವರು ಸದ್ದಾಂ ಹುಸೇನ್ ನಮ್ಮ ಭಾರತ ದೇಶದ ಒಬ್ಬ ಒಳ್ಳೆಯ ಮಿತ್ರ ಇವತ್ತು ಅದಾಗಿದೆ ಬೆಂಗಳೂರು ನಗರ ರಾಜಧಾನಿಯಲ್ಲಿ ಸದ್ದಾಂ ಹುಸೇನ್‌ರವರ ಬಗ್ಗೆ ಶೋಕ ಸಭೆ ನಡೆಯುತ್ತಿದೆ ಮತ್ತೊಂದು ಕಡೆ ಹಿಂದೂ ಸಮಾವೇಶ ಮಾಡತಕ್ಕಂಥದ್ದು You must anticipate what is going to happen? ಏನು ನಿಮ್ಮ Intelligence ಕೆಲಸ ಮಾಡುತ್ತಿತ್ತು, ನೀವು ಹೇಳುತ್ತೀರಿ, ನಿಮ್ಮ ಪೋಲಿಸ್ ಇಲಾಖೆಯವರಿಗೆ, ಇವರು ಸ್ವಲ್ಪ compliment ಕೊಟ್ಟಿದ್ದಾರೆ, ಯಾರು ನಮ್ಮ ರೋಷನ್‌ಬೇಗ್‌ರವರು ಅಭಿನಂದನೆಯನ್ನು ಕೊಟ್ಟಿದ್ದಾರೆ ಆದರೆ ನಾವು ಅಭಿನಂದನೆಯನ್ನು ಸಲ್ಲಿಸುವುದಿಲ್ಲ ಏಕೆ ಸಲ್ಲಿಸಬೇಕು? ನಾವು ಮಾನ್ಯ ಖರ್ಗೆಯವರು ರೋಷನ್‌ಬೇಗ್‌ರವರ ಜೊತೆಯಲ್ಲಿ ಅಲ್ಲಿಗೆ ಹೋದಾಗ Police

Commissoner Achyuta Rao was there ನಾನು ಅಚ್ಯುತರಾವ್‌ರವರಿಗೆ ಏನು ಮಾಡುತ್ತಿದ್ದೀರಿ ಎಂದು ಕೇಳಿದೆ ಎಲ್ಲಾ ಕಡೆ ಇಷ್ಟು ಭಯಂಕರವಾದಂತಹ ಗಲಭೆ ನಡೆಯುತ್ತಿತ್ತು ಒಬ್ಬ 84 ವರ್ಷ ವಯಸ್ಸಿನ ಮುದುಕನ ಮೂರು ಮಂದಿ ಮಕ್ಕಳನ್ನು ಪೋಲಿಸರು ಜೈಲಿಗೆ ಹಾಕಿದ್ದಾರೆ ನಾನು ತಮ್ಮೊಂದಿಗೂ ಸಹ ದೂರವಾಣಿಯ ಮೂಲಕ ಮಾತನಾಡಿದ್ದೇನೆ ರಾಜ್ಯದ ಮುಖ್ಯಮಂತ್ರಿಯವರು ಇವತ್ತು ಅಲ್ಲಿಗೆ ಹೋಗಲಿಕ್ಕೆ ಆಗಲಿಲ್ಲ ಅವರು ಇದುವರೆಗೂ ಆ ಸ್ಥಳಕ್ಕೆ ಭೇಟಿ ನೀಡಿಲ್ಲ He has not visited the places Bangalore is a cosmopolitan city ಇಂಥ ಒಂದು ರಾಜಧಾನಿಯಲ್ಲಿ ಪೋಲಿಸ್ ಇಲಾಖೆಯಿದೆ, ತಾವು ಇದ್ದೀರಿ, ಇವತ್ತು ಸರ್ಕಾರ ಇದೆ ಆದರೆ ಎಲ್ಲಿ ನಿಯಂತ್ರಣ ಮಾಡಿದ್ದೀರಿ Where you have created confidence? ಇವತ್ತು ನಾನೇನು ಹೇಳುತ್ತಿದ್ದೇನೆಂದರೆ, ಬೇಕಾದಷ್ಟು ವಿಚಾರವನ್ನು ನಿಮ್ಮ ಭಾಷೆಯಲ್ಲಿ ಹೇಳಿದರೂ ಕೂಡ ಇವತ್ತು ರಾಜ್ಯದಲ್ಲಿ ಪೋಲಿಸರಿಂದ ಸರಿಯಾದ ರೀತಿಯಲ್ಲಿ ನಿಯಂತ್ರಣ ಮಾಡಲಿಕ್ಕಾಗಲಿಲ್ಲ ಇವತ್ತು they have failed utterly ಇದನ್ನು admit ಮಾಡಬೇಕಾಗುತ್ತದೆ ಮೊಟ್ಟಮೊದಲನೆಯದಾಗಿ ಬೆಂಗಳೂರು ರಾಜಧಾನಿಯಲ್ಲಿ ನಡೆದ ಗಲಭೆಯನ್ನು ನಿಯಂತ್ರಣ ಮಾಡಲಿಕ್ಕಾಗಲಿಲ್ಲವೆಂದರೆ, ಹಳ್ಳಿಗಾಡು ಪ್ರದೇಶಗಳಲ್ಲಿ ಏನು ಮಾಡುತ್ತೀರಿ? ಬೀದರ್‌ನಲ್ಲಿ ನಡೆದ ಗಲಭೆಯನ್ನು ನಿಯಂತ್ರಿಸಿದಿರಾ? ಎಷ್ಟೋ ಕಡೆಗಳಲ್ಲಿ ಅಂಬೇಡ್ಕರ್ ಪ್ರತಿಮೆಗೆ ಅಪಮಾನ ಮಾಡತಕ್ಕಂಥ ಪ್ರಕರಣಗಳು ಆಗಿವೆ ನೀವು ರಾಜ್ಯದಲ್ಲಿ ಎಲ್ಲಿಯೂ ಕೂಡ ಸರಿಯಾದ ರೀತಿಯಲ್ಲಿ ನಿಯಂತ್ರಣ ಮಾಡಲಿಕ್ಕೆ ಆಗಲಿಲ್ಲ, ನಿಮ್ಮ ಉತ್ತರ ಸಮರ್ಪಕವಾಗಿಲ್ಲ ಹಾಗಾಗಿ ಇದರ ಬಗ್ಗೆ ದೀರ್ಘವಾದಂತಹ ಚರ್ಚೆ ಆಗಬೇಕಾಗಿತ್ತು ನಾವು ಎಲ್ಲವನ್ನೂ ಕೂಡ ಸಾಂದರ್ಭಿಕವಾಗಿ ಹೇಳುತ್ತಿದ್ದೇವೆ ಆದರೂ ಅದು ಆಗಲಿಲ್ಲ ಆದರೆ ಧರಣ ಅಲ್ಲ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) – ಎಲ್ಲಾ ಧರಣದಿಂದಲೇ, ಸಭಾತ್ಯಾಗದಿಂದಲೇ ಮುಗಿಸಬೇಕು, ಹಾಗಾದಾಗ ಮಾತ್ರ ರಾತ್ರಿ ನಿಮಗೆ ನಿದ್ದೆ ಬರುವುದು ನಾವೇನು ಮಾಡೋಣ

ಶ್ರೀ ಎನ್ ಧರ್ಮಸಿಂಗ್ – ಏನಿಲ್ಲ, ನಿಮಗೆ ಹಾಗೆ ಬರುತ್ತಿತ್ತು ನೀವು ಆ ಕೆಲಸವನ್ನು ಮಾಡಿದ್ದೀರಿ, ನಾವು ಮಾಡಲಿಲ್ಲ ನೀವು ಮಂಡನೆ ಮಾಡುವಾಗ ಹೇಳುತ್ತೇನೆ

ಶ್ರೀ ಬಿ ಎಸ್ ಯಡಿಯೂರಪ್ಪ – ನಾನು ನಿಮಗೆ ಗೌರವದಿಂದ ಹೇಳುವುದೇನೆಂದರೆ, ಧರಣ ಆಯಿತು, ಸದನವನ್ನೂ ಸಹ ಮಾರ್ಚ್ 16ಕ್ಕೆ ಮುಂದೂಡುತ್ತಿರುವ ಸಮಯದಲ್ಲಿ ಸದನವನ್ನು ಮುಂದೂಡಿದರೆ ಮತ್ತೆ ನೀವು ಸಭಾತ್ಯಾಗದಿಂದಲೇ ಏತಕ್ಕೆ ಮಾಡುತ್ತೀರಿ ಇವತ್ತು co-operation ಮಾಡಿದರೆ ಮುಂದೆ ಹೇಗೂ ಧರಣ, ಸತ್ಯಾಗ್ರಹ ಮಾಡಲಿಕ್ಕೆ ಅಧಿವೇಶನದಲ್ಲಿ ಅವಕಾಶವಿದೆಯೆಲ್ಲಾ

ಶ್ರೀ ಎನ್ ಧರ್ಮಸಿಂಗ್ – ಇಲ್ಲ, ತಮಗೆ ಹೇಳುತ್ತಿದ್ದೇವೆ ಮಾನ್ಯ ದೇವೇಗೌಡರು ಹಾಗು ತಮಗೆ ಇರುವ ಭಿನ್ನಾಭಿಪ್ರಾಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾಡತಕ್ಕಂಥ ಕೆಲಸಕಾರ್ಯಗಳ ಬಗ್ಗೆ ನಾವು ಹೇಳಿದ್ದೇವೆ ಅದಕ್ಕೆ ತಾವು ಸಮರ್ಪಕವಾದ ಉತ್ತರ ನೀಡಲಿಲ್ಲ

ಶ್ರೀ ಬಿ ಎಸ್ ಯಡಿಯೂರಪ್ಪ – ಸಭಾತ್ಯಾಗ ಮಾಡದಿದ್ದರೆ ನಿಮಗೆ ರಾತ್ರಿ ನಿದ್ದೆ ಬರುವುದಿಲ್ಲ

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು) – ಇರಾಕ್, ಇರಾನ್, ಸದ್ದಾಂ ಹುಸೇನ್‌ರವರ ವಿಷಯಗಳನ್ನು ಹೇಳಿದಿರಿ, ತಾವು ಹಿರಿಯರಿದ್ದೀರಿ, ತಮಗೆ ಅಲ್ಲಿ ಖುರ್ದೂಸ್‌ಗಳು ಏನು ಅಭಿಪ್ರಾಯಪಡುತ್ತಿದ್ದಾರೆ, ಇರಾಕ್‌ನಲ್ಲಿ ಯಾವರೀತಿ ಷಿಯಾಗಳು ವರ್ತಿಸುತ್ತಿದ್ದಾರೆ, ಅದೂ ಕೂಡ ತಮಗೆ ಗೊತ್ತಿದೆ

ಶ್ರೀ ಎನ್ ಧರ್ಮಸಿಂಗ್ – ಅಮೇರಿಕಾದಲ್ಲಿಯೂ ಕೂಡ ಎರಡು ಪಕ್ಷಗಳ ನಡುವೆ ಭಿನ್ನಾಭಿಪ್ರಾಯ ಬಂದಿದೆ ಇವತ್ತು ಅವರಿಗೆ Bushರವರು ತೆಗೆದುಕೊಳ್ಳತಕ್ಕಂಥ ನಿರ್ಣಯಕ್ಕೆ ಅಮೇರಿಕಾದಲ್ಲಿ ಖಂಡಿಸುತ್ತಿದ್ದಾರೆ, ಈ ಬಗ್ಗೆ ನಿತ್ಯ ಪತ್ರಿಕೆಯಲ್ಲಿ ಬರುತ್ತಿದೆ

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು) – ನಾವು ಅದಕ್ಕಾಗಿಯೇ, ಸದ್ದಾಂ ಹುಸೇನ್‌ರವರು ಖುರ್ದೂಸ್‌ಗಳ ಮೇಲೆ ಅಥವಾ ಷಿಯಾಗಳ ಮೇಲೆ ಮಾಡಿದಂಥದ್ದರ ಬಗ್ಗೆ ನಮ್ಮ ಕೇಂದ್ರ ಸರ್ಕಾರ ತಮ್ಮ ಪಕ್ಷದ ನೇತೃತ್ವದಲ್ಲಿರುವಂಥ ಕೇಂದ್ರ ಸರ್ಕಾರ ಅದರ ಸಹಮತಿ ಕೊಟ್ಟಿತೇ? ಸದ್ದಾಂ ಹುಸೇನ್‌ರನ್ನು ಗಲ್ಲಿಗೇರಿಸುವಂಥಾ ರೀತಿಯ ನ್ಯಾಯಾಂಗ ವಿಚಾರಣೆ ಏನು ನಡೆದಿದೆ ಅದು ದೋಷಪೂರಿತವಾಗಿರತಕ್ಕಂಥಾದ್ದು ಎನ್ನುವುದರ ಬಗ್ಗೆ ಅವರ ಭಿನ್ನಾಭಿಪ್ರಾಯ ವ್ಯಕ್ತಪಡಿಸಿರುವುದು ಸಹ ಇದೆ ಆ ಕಾರಣಕ್ಕಾಗಿಯೇ ಇವತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದಿರತಕ್ಕಂಥ ಘಟನೆಯನ್ನು ನಾವ್ಯಾರು ಸಮರ್ಥಿಸುವುದಿಲ್ಲ ಆದರೆ ಅದನ್ನು ನಾವು ಒಂದು ದಿವಸದೊಳಗೆ ನಿಭಾಯಿಸಿದ್ದೇವೆ ನಿಮ್ಮ ಕಾಲದಲ್ಲಿ ಏಳೇಳು ದಿವಸಗಳ ಕಾಲ ನಡೆದವು

ಆದ್ದರಿಂದ ನಾವು ಇದನ್ನು ಒಂದೇ ದಿವಸದಲ್ಲಿ ನಿಭಾಯಿಸಿರುವುದನ್ನು ನೋಡಿದಾಗ ನೀವು ನಮ್ಮನ್ನು ಅಭಿನಂದಿಸುತ್ತೀರಿ ಎಂದು ಭಾವಿಸಿಕೊಂಡಿದ್ದೆನು ನಾನು ಎರಡು ಸಾರಿ ಅಲ್ಲಿಗೆ ಹೋಗಿ ಬಂದೆ, ನಮ್ಮ ಅಧಿಕಾರಿಗಳು ಸಹ ಹೋಗಿ ಬಂದಿದ್ದಾರೆ

(ಗೊಂದಲ)

ಶ್ರೀ ಮಲ್ಲಿಕಾರ್ಜುನ್ ಖರ್ಗೆ (ಗುರುಮಿಠಕಲ್) – ಬಹಳ ದೀರ್ಘವಾಗಿ ಉತ್ತರವನ್ನು ಕೊಟ್ಟರು ಚರ್ಚೆ ಅರ್ಧ ತಾಸು ಹೆಚ್ಚು ಕಡಿಮೆ ಆಗಿರಬೇಕು ಆದರೆ ಉತ್ತರ ಮಾತ್ರ 45 ನಿಮಿಷ ಕೊಟ್ಟರು ಮಾನ್ಯರು ಶ್ರೀ ಶ್ರೀರಾಮರೆಡ್ಡಿ, ಶ್ರೀ ಮಾಧುಸ್ವಾಮಿ, ಶ್ರೀ ವೈಜನಾಥ್ ಪಾಟೀಲರು ಸ್ವಲ್ಪ ಹೊತ್ತು ಮಾತನಾಡಿದರು, ಆರಗ ಜ್ಞಾನೇಂದ್ರರವರಂತೂ ನಿಮ್ಮ ಪರವಾಗಿಯೇ ನಿಂತಿದ್ದರು ಅವರದೇನೂ ಲೆಕ್ಕದಲ್ಲಿ ಬರಲಿಲ್ಲ ಅದಕ್ಕಾಗಿ ಅರ್ಧ ತಾಸು ಚರ್ಚೆಗೆ 45 ನಿಮಿಷಗಳ ಕಾಲ ಉತ್ತರ ಕೊಟ್ಟಿರಿ, ಸಂತೋಷ

ಅಧ್ಯಕ್ಷರು:– ಸಂಜೆ 4 30 ಗಂಟೆಗೆ ಆರಂಭವಾದ ಚರ್ಚೆ 6 15 ಗಂಟೆವರೆಗೆ ಆಗಿದೆ

ಶ್ರೀ ಮಲ್ಲಿಕಾರ್ಜುನ್ ಖರ್ಗೆ.– ಈ ಕೋಳಿಗಿಂತ ಮಸಾಲೆಯೇ ಜಾಸ್ತಿಯಾಯಿತು ಇರಲಿ, ತಾವು ಹೇಳಿದಿರಿ, ತಮಗೂ ಕೂಡ ಗೊತ್ತಿದೆ ಅಲ್ಲಿನ ಮಂಗಳೂರಿನ ವಾತಾವರಣವನ್ನು ಕಂಟ್ರೋಲ್‌ನಲ್ಲಿ ತರುವುದಕ್ಕೆ ಕನಿಷ್ಠ ಎಂದರೂ 8 ದಿವಸಗಳಾಯಿತು ನಾವು ಅದೇ ದಿವಸ visit ಮಾಡಬೇಕೆಂದರೆ ನೀವು ಹೇಳಿದಿರಿ, ನಮಗೂ ಕೂಡ advise ಮಾಡಿದರು, ಈಗ ಬೇಗನೆ ಬರಬೇಕಾದಂಥ ಅವಶ್ಯಕತೆಯಿಲ್ಲ, ಎರಡೂ ಮೂರು ದಿವಸ ತಡೆದು ಬನ್ನಿ ಎಂದು ಹೇಳಿದರು ಆ ಒಂದು ವಿಷಯವನ್ನು ತಾವು ಗಮನದಲ್ಲಿಟ್ಟುಕೊಂಡಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ, ಅಲ್ಲಿ ಏನು ವಾತಾವರಣ ಇತ್ತು, ಹೇಗೆ ಇತ್ತು ಎಂದು ಅದಕ್ಕಾಗಿ ಬೆಂಗಳೂರಿನಲ್ಲಿರುವ ವಾತಾವರಣವೂ ಕೂಡ ಸುಮಾರು ಎರಡು ಮೂರು ದಿವಸಗಳ ಕಾಲ ನಡೆಯಿತು ಕೊನೆಗೆ ಎಲ್ಲರೂ ಸಹಕರಿಸಬೇಕು, ಇದೇನಾಗಿದೆಯೆಂದರೆ, ಎಲ್ಲಾ ಪಕ್ಷದವರು, ಎಲ್ಲಾ ಸಂಘಟನೆಗಳು ಸಹಕರಿಸುವುದರಿಂದ ಕರ್ನಾಟಕ ರಾಜ್ಯದಲ್ಲಿ ಒಂದು ಶಾಂತಿಯ ವಾತಾವರಣ ಇದೆ ದುರ್ದೈವದಿಂದ ನಾವು ಅಧವಾ ಸುದೈವದಿಂದ ಕೆಲವು ಸಲ ಏನಾಗುತ್ತದೆಯೆಂದರೆ, ಗಲಾಟೆ ಮಾಡುವವರೇ ಅಧಿಕಾರಕ್ಕೆ ಬಂದರೆ ಗಲಾಟೆ ಕಡಿಮೆಯಾಗುತ್ತದೆ, ಇದು ನಿಜ ಅನೇಕ ಸಾರಿ ನೀವು ಊರುಗಳಲ್ಲಿ ನೋಡಿದ್ದೀರಿ, ನೀವೇ ಹಳ್ಳಿ ಕಥೆ ಹೇಳಿದಿರಿ

(ಗೊಂದಲ)

ನೀವು ಗಲಾಟೆ ಮಾಡುವವರೇ, first time ನಿಮ್ಮ ಕೈಗೆ ಸಿಕ್ಕ ಮೇಲೆ ಮುಂಜಾನೆಯಿಂದ ಸಂಜೆಯ ತನಕ ಅಲ್ಲಿಗೆ ಹೋದಿರಿ, ಅದನ್ನು ಹೇಳಿದರು ಮಾನ್ಯ ಪ್ರಕಾಶ್‌ರವರು ಎಲ್ಲಿಯವರೆಗೂ ಹೋಯಿತೆಂದರೆ ಶ್ರೀಮಾನ್ ಪ್ರಕಾಶ್‌ರವರು ಅಧ್ಯಕ್ಷರು ನೇರವಾಗಿ ಮಂತ್ರಿಗಳ ಹೆಸರನ್ನು ತೆಗೆದುಕೊಂಡರು ಆಮೇಲೆ ದೇವೇಗೌಡರೂ ಸಹ ಹೇಳಿದರು ಅಲ್ಲಿ ನಡೆಯತಕ್ಕಂಥದ್ದು ಸರಿಯಲ್ಲ ಮತ್ತು ಕೆಲವು ವರ್ಗದವರು ಈ ರೀತಿ ಮಾಡುತ್ತಿದ್ದಾರೆಂದು ಅದಕ್ಕಾಗಿಯೇ ನಾವು ಡಿಮ್ಯಾಂಡ್ ಮಾಡಿದ್ದೇನು? ಬೆಂಗಳೂರಿನದ್ದಾಗಲಿ, ಮಂಗಳೂರಿನದ್ದಾಗಲಿ, ಬೀದರ್‌ದ್ದಾಗಲಿ ಇದರ ಬಗ್ಗೆ ಸಮಗ್ರವಾಗಿ ಒಂದು judicial probe ಮಾಡಿ ಇದರಲ್ಲಿ ಯಾರು involve ಇದ್ದಾರೆ, ಯಾರು ಇಲ್ಲ ಅನ್ನತಕ್ಕಂಥದ್ದನ್ನು ಬಹಿರಂಗ ಪಡಿಸಿ, CoD enquiry ಗೆ ಹಾಕಿ ನಿಮಗೆ ಗೊತ್ತಿಲ್ಲವೇ, Fact finding committee ಬೇಕೆನ್ನುತ್ತೀರಿ, facts ಹೊರಗಡೆ ಬರಬೇಕೆಂದು ಹೇಳುತ್ತೀರಿ ಅದಕ್ಕಾಗಿಯೇ facts ಹೊರಗಡೆ ಬರಬೇಕಾದರೆ ಎಲ್ಲೆಲ್ಲಿ, ಯಾವ್ಯಾವ ಜಿಲ್ಲೆಯಲ್ಲಿ ಯಾರು ಗಲಾಟೆ ಮಾಡಿದ್ದಾರೆ, ಯಾರು ಪ್ರಚೋದನೆ ಮಾಡಿದ್ದಾರೆ ಅದರ ಹಿಂದೆ ಯಾರು ಇದ್ದಾರೆ ಎನ್ನತಕ್ಕಂಥಾದ್ದು ಹೊರಗಡೆ ಬರಬೇಕು, ಸತ್ಯಾಂಶ ತಿಳಿಯಬೇಕು, ಮುಂದೆ ಇಂಥ ಗಲಭೆಗಳು ನಡೆಯಬಾರದು ಎನ್ನತಕ್ಕಂಥ ಸರ್ಕಾರದ ಅಭಿಪ್ರಾಯ ಇದ್ದರೆ, ಇಚ್ಛೆ ಇದ್ದರೆ, ಆ ಇಚ್ಛಾಶಕ್ತಿಯಿದ್ದರೆ ತಾವು ದಯವಿಟ್ಟು judicial probe ಮಾಡಿ ಎರಡನೆಯದು ತಾವು ಇಲ್ಲಿಯವರೆಗೂ ಅನೇಕ ಜನರಿಗೆ compensation ಕೊಟ್ಟಿಲ್ಲ ಬೆಂಗಳೂರಿನಲ್ಲಿ ಕೆಲವು ಜನ ಕಾಲು, ಕೈ ಮುರಿದುಕೊಂಡಿರುವವರು ಇದ್ದಾರೆ, ನಾವೆಲ್ಲರೂ ಕೂಡ hospitalಗೆಲ್ಲಾ visit ಮಾಡಿದ್ದೇವೆ, ನೋಡಿದ್ದೇವೆ, ತಾವೂ ಕೂಡ ಹೋಗಿದ್ದೀರಿ, ನೋಡಿದ್ದೀರಿ, ಬಹುಶ ಮುಖ್ಯಮಂತ್ರಿಗಳಿಗೆ ಸಮಯ ಸಿಕ್ಕಿರಲಿಕ್ಕಿಲ್ಲ ಬಹಳ ಚಿಂತನೆಯಲ್ಲಿರಬೇಕು, ಬೆಂಗಳೂರಿನಲ್ಲಿ ಗಲಭೆ ಪ್ರದೇಶಕ್ಕೆ ಹೋಗಿದ್ದರೋ ಇಲ್ಲವೋ ಗೊತ್ತಿಲ್ಲ ಬೆಂಗಳೂರಿನ ಸಮೀಪದಲ್ಲಾಗಿದೆಯೆಂದು ಹೋಗಿಲ್ಲ ಮಂಗಳೂರಿಗೆ ಹೋಗಿದ್ದರು ಬೆಂಗಳೂರು ರಾಜಧಾನಿಯಲ್ಲಿ ಸಮೀಪವಿದೆಯೆಂದು ಹೇಳಿ ಅವರಿಗೆ ಸಮಯ ಸಿಕ್ಕಿಲ್ಲ, ಪಾಪ ಹಾಗಾಗಿ ಅವರು ಹೋಗಿಲ್ಲ ಅದಕ್ಕೆ ಹೇಳಿದೆ, ಒಬ್ಬ ಒಳ್ಳೆಯ ವಕೀಲರನ್ನು ಅವರು ಹಿಡಿದಿದ್ದಾರೆ, fee ಇಲ್ಲ, ಏನೂ ಇಲ್ಲ, full argument ಮಾಡಿ ಎಂದು ಹೇಳಿದ್ದಾರೆ, ಅದರಂತೆ ಅವರು argument ಮಾಡಿಕೊಂಡು ಕುಳಿತಿದ್ದಾರೆ ಸಂತೋಷ, ನಿಮಗೆ ಒಳ್ಳೆಯದಾಗಲಿ ಆದರೆ ಇಂಥ ಕೆಟ್ಟ cases

ಹಿಡಿದು ಎಷ್ಟು ಸಾರಿ ಎಂದು ನೀವು ವಾದ ಮಾಡುತ್ತೀರಿ You are always handling bad cases and ultimately the result will be failure ಅದಕ್ಕಾಗಿ ಮುಂದೆ ನಿಮ್ಮ ಹತ್ತಿರ ಯಾರೂ ಕೂಡ ಗಿರಾಕಿಗಳು ಬರುವುದಿಲ್ಲ ದಯವಿಟ್ಟು ಒಬ್ಬರೂ ವಕಾಲತ್ತು ನಿಮಗೆ ಕೊಡಲಿಕ್ಕೆ ಬರುವುದಿಲ್ಲ ಇಂತಹ ಕೆಟ್ಟ ಕೇಸುಗಳನ್ನು ಹಿಡಿದರೆ ಯಾರೂ ಸಹ ವಕಾಲತ್ತು ಕೊಡುವುದಿಲ್ಲ ಭವಿಷ್ಯದ ದೃಷ್ಟಿಯಿಂದಲಾದರೂ ಈಗಲಾದರೂ ಸ್ವಲ್ಪ ನೋಡಿ ನನ್ನ ಬೇಡಿಕೆ ಇಷ್ಟೇ, judicial probe ಆಗಬೇಕು, compensation ಕೊಡಬೇಕು ತಕ್ಷಣ ಎಲ್ಲಾ ಕಡೆ ಇನ್ನೂ ಕೂಡ ಹೆದರಿಕೆ ಇದೆ ನೀವೆಷ್ಟೇ ಹೇಳಿಕೊಂಡರೂ ಕೂಡ ಇಲ್ಲೇನಾಗಿದೆ ನಿಮ್ಮಿಬ್ಬರ ಭಿನ್ನಾಭಿಪ್ರಾಯದಲ್ಲಿ ಈ ಪ್ರಶ್ನೆ ಉದ್ಭವಿಸುತ್ತಿದೆ ಅದಕ್ಕೆ ದಯವಿಟ್ಟು ಈಗಲಾದರೂ judicial probe ಮಾಡಲಿಕ್ಕೆ ಒಪ್ಪಿಕೊಂಡು ನೊಂದವರಿಗೆ compensation ಕೊಟ್ಟು ಒಂದು ತಿಳಿಯಾದಂಥ ವಾತಾವರಣವನ್ನು ತಾವು ಮಾಡಬೇಕೆಂದು ತಮ್ಮ ಮೂಲಕ ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ

ಅಧ್ಯಕ್ಷರು:– ಈಗ ಸದನವನ್ನು **16ನೇ ಮಾರ್ಚ್ 2007ರ ಶುಕ್ರವಾರದಂದು ಮಧ್ಯಾಹ್ನ 12 30 ಗಂಟೆಗೆ** ಸೇರುವಂತೆ ಮುಂದೂಡಲಾಗಿದೆ

(ಸದನವು ಸಂಜೆ 6 50 ಗಂಟೆಗೆ ಮುಕ್ತಾಯವಾಗಿ ಪುನ 16ನೇ ಮಾರ್ಚ್ 2007 ರಂದು ಶುಕ್ರವಾರ 12 30 ಗಂಟೆಗೆ ಸಭೆ ಸೇರುವುದಾಗಿ ನಿರ್ಣಯಿಸಲಾಯಿತು)

ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2005

[2005ರ ವಿಧಾನಸಭೆಯ ವಿಧೇಯಕ ಸಂಖ್ಯೆ 31]

(ಉಭಯ ಸದನಗಳಿಂದ ಅಂಗೀಕಾರವಾಗಿರುವಂತೆ ಹಾಗೂ ಈ ವಿಧೇಯಕದ ಅನುಬಂಧದಲ್ಲಿ ನೀಡಿರುವ ಘನವೆತ್ತ ರಾಜ್ಯಪಾಲರ ಸಂದೇಶದೊಡನೆ ಪುನರ್ ಪರಿಗಣನೆಗಾಗಿ ಹಿಂದಿರುಗಿಸಲಾಗಿರುವಂತೆ)

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ, 12) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ,

ಇದು ಭಾರತ ಗಣರಾಜ್ಯದ ಐವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ –

1 ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ – (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ಅಧಿನಿಯಮ, 2005 ಎಂದು ಕರೆಯತಕ್ಕದ್ದು

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು

2 69ಎ ಹೊಸ ಪ್ರಕರಣದ ಸೇರ್ಪಡೆ – ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 12) 69ನೇ ಪ್ರಕರಣದ ತರುವಾಯ ಈ ಮುಂದಿನ ಹೊಸ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ –

"69ಎ ರಾಜ್ಯ ಸರ್ಕಾರಕ್ಕೆ ಸೇರಿದ ಭೂಮಿಗಳು ಅಥವಾ ಇತರ ಸ್ವತ್ತುಗಳನ್ನು ಸಾರ್ವಜನಿಕ ಹರಾಜಿನ ಮೂಲಕ ವಿಲೇಮಾಡುವುದು – (1) ಅಧಿನಿಯಮದ 69ನೇ ಪ್ರಕರಣದಲ್ಲಿ ಏನೇ ಇದ್ದರೂ, ಈ ಸಂಬಂಧದಲ್ಲಿ ನಿಯಮಿಸಲಾದಂಥ ನಿಯಮಗಳಿಗೆ ಒಳಪಟ್ಟು, ರಾಜ್ಯ ಸರ್ಕಾರ ಅಥವಾ ಪ್ರಾಧಿಕೃತ ಅಧಿಕಾರಿಯು 67ನೇ ಪ್ರಕರಣದ ಅಡಿಯಲ್ಲಿ ಅಥವಾ ಅನ್ಯಥಾ ರಾಜ್ಯ ಸರ್ಕಾರಕ್ಕೆ ಸೇರಿದ ಬೆಲೆಯುಳ್ಳ ಭೂಮಿ ಅಥವಾ ಇತರ ಸ್ವತ್ತನ್ನು ಸಾರ್ವಜನಿಕ ಹರಾಜಿನ ಮೂಲಕ ವಿಲೇಮಾಡಬಹುದು

(2) ಡೆಪ್ಯೂಟಿ ಕಮೀಷನರ್ ಅಥವಾ ಪ್ರಾಧಿಕೃತ ಅಧಿಕಾರಿಯು, (1)ನೇ ಉಪ ಪ್ರಕರಣದ ಅಡಿಯಲ್ಲಿನ ಸ್ಥಿರ ಸ್ವತ್ತಿನ ಮಾರಾಟದ ದಿನಾಂಕದಿಂದ ಮೂವತ್ತು ದಿನಗಳು ಕಳೆದ ತರುವಾಯ ಸದರಿ ಮಾರಾಟವನ್ನು ಆದೇಶದ ಮೂಲಕ ಸ್ಥಿರೀಕರಿಸಬಹುದು

ವಿವರಣೆ – ಈ ಪ್ರಕರಣದ ಉದ್ದೇಶಕ್ಕಾಗಿ ಬೆಲೆಯುಳ್ಳ ಭೂಮಿ ಎಂದರೆ ಹರಾಜು ಮಾಡಿದಲ್ಲಿ ಸಾಮಾನ್ಯ ಬೆಲೆಗಿಂತಲೂ ಅತಿ ಹೆಚ್ಚಿನ ಬೆಲೆಯನ್ನು ತರುವಂಥ ಭೂಮಿಗಳು "

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 12) 69ನೇ ಪ್ರಕರಣವು ರಾಜ್ಯ ಸರ್ಕಾರಕ್ಕೆ ಸೇರಿದ ಭೂಮಿ ಅಥವಾ ಇತರ ಸ್ವತ್ತಿನ ವಿಲೆಗೆ ಉಪಬಂಧವನ್ನು ಕಲ್ಪಿಸುತ್ತದೆ ಭೂಮಿಯನ್ನು ಸಾರ್ವಜನಿಕ ಹರಾಜಿನ ಮೂಲಕ ಮಾರಾಟ ಮಾಡಿದ ಭೂಮಿಯ ಬಗ್ಗೆ ಸ್ಥಿರೀಕರಣಕ್ಕೆ ಯಾವ ಉಪಬಂಧವೂ ಇರುವುದಿಲ್ಲ ಸಾರ್ವಜನಿಕ ಹರಾಜಿನ ಮೂಲಕ ಮಾರಾಟಮಾಡಲು ಹಾಗೂ ಅಂಥ

ಮಾರಾಟವನ್ನು ಸ್ಥಿರೀಕರಿಸಲು ಹೊಸ ಪ್ರಕರಣವನ್ನು ಸೇರಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ

ಆದ್ದರಿಂದ ಈ ವಿಧೇಯಕ

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ

ಜಗದೀಶ್ ಶೆಟ್ಟರ್
ಕಂದಾಯ ಸಚಿವರು
ಎಸ್ ಬಿ ಪಾಟೀಲ
ಅಪರ ಕಾರ್ಯದರ್ಶಿ

ಅನುಬಂಧ

ವಿಧಾನಮಂಡಲದ ಎರಡೂ ಸದನಗಳಲ್ಲಿ ಅನುಮೋದಿತವಾದ ನಂತರ ರಾಜ್ಯಪಾಲರ ಅನುಮತಿಯನ್ನು ಪಡೆಯುವುದಕ್ಕಾಗಿ ಸಲ್ಲಿಸಲಾಗಿದ್ದಂಥ ಕರ್ನಾಟಕ ಭೂಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2005 (ಸಂಕ್ಷಿಪ್ತವಾಗಿ ವಿಧೇಯಕ) (2005ರ ವಿಧಾನ ಸಭಾ ವಿಧೇಯಕ ಸಂಖ್ಯೆ 31) – ಇದರ ಸಂಬಂಧದಲ್ಲಿ ಭಾರತ ಸಂವಿಧಾನದ 200ನೇ ಅನುಚ್ಛೇದದ ಅಡಿಯಲ್ಲಿ ಕರ್ನಾಟಕ ವಿಧಾನಸಭೆ ಮತ್ತು ಕರ್ನಾಟಕ ವಿಧಾನ ಪರಿಷತ್ತುಗಳಿಗೆ ಸಂದೇಶ

ಕರ್ನಾಟಕ ವಿಧಾನಮಂಡಲದ ಎರಡೂ ಸದನಗಳಿಂದ ಅನುಮೋದಿತವಾದ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2006 (ಸಂಕ್ಷಿಪ್ತವಾಗಿ ವಿಧೇಯಕ) (2005ರ ವಿಧಾನಸಭಾ ವಿಧೇಯಕ ಸಂಖ್ಯೆ 31) ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ತಿದ್ದುಪಡಿ ಮಾಡಲು ಉದ್ದೇಶಿಸುತ್ತದೆ ಪ್ರಸ್ತಾವಿಸಲಾದ ತಿದ್ದುಪಡಿಯು '69 ಎ' ಎಂದು ಅಂಕಿ ನೀಡಲಾದ ಮತ್ತು "ರಾಜ್ಯ ಸರ್ಕಾರಕ್ಕೆ ಸೇರಿದ ಭೂಮಿಗಳು ಅಥವಾ ಇತರ ಸ್ವತ್ತುಗಳನ್ನು ಸಾರ್ವಜನಿಕ ಹರಾಜಿನ ಮೂಲಕ ವಿಲೆ ಮಾಡುವುದು" ಎಂಬ ಶೀರ್ಷಿಕೆ ಉಳ್ಳ ಹೊಸ ಪ್ರಕರಣವನ್ನು ಸೇರಿಸಲು ಉದ್ದೇಶಿಸುತ್ತದೆ ಈ ವಿಧೇಯಕವು ರಾಜ್ಯ ಸರ್ಕಾರಕ್ಕೆ ಸೇರಿದ ಬೆಲೆಯುಳ್ಳ ಭೂಮಿ ಅಥವಾ ಇತರ ಸ್ವತ್ತನ್ನು 67ನೇ ಪ್ರಕರಣದಡಿಯಲ್ಲಿ ಅಥವಾ ಅನ್ಯಥಾ ಸಾರ್ವಜನಿಕ ಹರಾಜಿನ ಮೂಲಕ ವಿಲೆ ಮಾಡಲು ರಾಜ್ಯ ಸರ್ಕಾರಕ್ಕೆ ಅಥವಾ ಪ್ರಾಧಿಕಾರ ಪಡೆದ ಅಧಿಕಾರಿಗೆ ಯಥೇಚ್ಛ ಅಧಿಕಾರವನ್ನು ನೀಡಲು ಪರ್ಯಾಲೋಚಿಸಿದೆ ಈ ಉಪಬಂಧವು "ಬೆಲೆಯುಳ್ಳ ಭೂಮಿ" ಎಂಬ

ಪದಗಳಿಗೆ ಒಂದು ವಿವರಣೆಯನ್ನು ಕೊಟ್ಟು "ಅವುಗಳೆಂದರೆ ಹರಾಜು ಮೂಲಕ ಮಾರಾಟ ಮಾಡಿದಲ್ಲಿ ಸಾಮಾನ್ಯ ಬೆಲೆಗಿಂತಲೂ ಅತಿ ಹೆಚ್ಚಿನ ಬೆಲೆ ತರುವಂಥ ಭೂಮಿಗಳು " ಎಂದು ಪರಿಭಾಷಿಸಿದೆ

ಈ ಪ್ರಸ್ತಾವಿತ ಉಪಬಂಧಗಳು ಮಾರುಕಟ್ಟೆ ಬೆಲೆಗಿಂತಲೂ ಹೆಚ್ಚಿನ ಮೌಲ್ಯವನ್ನು ತಂದುಕೊಡಬಲ್ಲಂಥ ಆದರೆ ನಮ್ಮ ರಾಷ್ಟ್ರೀಯ ಪರಂಪರೆಯ ತಾಣಗಳಾಗಿ ಭವಿಷ್ಯತ್ತಿಗೆ ರಕ್ಷಿಸಿ ಕಾಪಾಡಬೇಕಾದ ಐತಿಹಾಸಿಕ ಅವಶೇಷಗಳು ಮತ್ತು ಪರಂಪರಾಗತ ಕಟ್ಟಡಗಳನ್ನು ಹೊರತುಪಡಿಸುವುದಿಲ್ಲ ಈ ವಿಧೇಯಕವು ಭವಿಷ್ಯತ್ತಿಗಾಗಿ ರಕ್ಷಿಸಿ ಕಾಪಾಡಬೇಕಾದ ಪರಂಪರಾಗತ ಸ್ವತ್ತುಗಳು ಮತ್ತು ಐತಿಹಾಸಿಕ ಅವಶೇಷಗಳನ್ನು ವಿಶಿಷ್ಟವೆಂದು ಗುರುತಿಸಿ ಹೊರತುಪಡಿಸುವುದಿಲ್ಲವಾದ ಕಾರಣ ಮತ್ತು ಈಗಿರುವ ಸ್ವರೂಪದಲ್ಲಿ ಈ ಕಾನೂನು ಅಂಥ ಸ್ವತ್ತುಗಳ ಅನಿರ್ಬಂಧಿತ ವಿಲೆಯ ಸಾಧ್ಯತೆಗೆ ಅವಕಾಶ ನೀಡುವ ಕಾರಣ ಐತಿಹಾಸಿಕ ಅವಶೇಷಗಳನ್ನು ಮತ್ತು ಪರಂಪರಾಗತ ಕಟ್ಟಡಗಳನ್ನು ಭವಿಷ್ಯತ್ತಿಗಾಗಿ ರಕ್ಷಿಸಿ ಕಾಪಾಡುವ ಸಲುವಾಗಿ ತಿದ್ದುಪಡಿ ಅಧಿನಿಯಮದ ಉಪಬಂಧಗಳ ವ್ಯಾಪ್ತಿಯಿಂದ ಅವನ್ನು ಹೊರತುಪಡಿಸಬೇಕಾದದ್ದು ಅತ್ಯಾವಶ್ಯಕ ಐತಿಹಾಸಿಕ ಅವಶೇಷಗಳು ಅಥವಾ ಪರಂಪರಾಗತ ಕಟ್ಟಡಗಳು ಸಂದರ್ಭಾನುಸಾರ ಆ ಪ್ರದೇಶದ ಜನತೆಯ ಮತ್ತು ಆ ರಾಜ್ಯದ ಇತಿಹಾಸ ಹಾಗೂ ಸಂಸ್ಕೃತಿಯನ್ನು ಪ್ರತಿನಿಧಿಸುವ ಕಾರಣ 69ಎ ಪ್ರಕರಣದ ಮುಖ್ಯ ಉಪಬಂಧವು ಅವುಗಳಿಗೆ ಅನ್ವಯಿಸುವುದಿಲ್ಲ ಎಂಬ ತಾತ್ಪರ್ಯದ ಒಂದು ಪರಂತುಕವನ್ನು 69ಎ ಪ್ರಕರಣದ ಅಡಿಯಲ್ಲಿ ಸೇರಿಸುವುದು ಅತ್ಯಂತ ಅವಶ್ಯಕ

ರಾಜ್ಯ ವಿಧಾನಮಂಡಲದ ಎರಡೂ ಸದನಗಳು ಮೇಲೆ ಸೂಚಿಸಿದ ಅಭಿಪ್ರಾಯದ ಬೆಳಕಿನಲ್ಲಿ ಈಗ ಈ ವಿಧೇಯಕವನ್ನು ಪುನ ಪರಿಶೀಲಿಸಿ ನೋಡಬೇಕಾದ ಅಗತ್ಯವಿದೆ ಆದ ಕಾರಣ ವಿಧೇಯಕವನ್ನು ಪುನರ್ ಪರಿಶೀಲನೆಗಾಗಿ ಕರ್ನಾಟಕ ವಿಧಾನ ಸಭೆ ಮತ್ತು ಕರ್ನಾಟಕ ವಿಧಾನ ಪರಿಷತ್ತಿಗೆ ಹಿಂತಿರುಗಿ ಕಳುಹಿಸಲಾಗಿದೆ

ಟಿ ಎನ್ ಚತುರ್ವೇದಿ
ಕರ್ನಾಟಕ ರಾಜ್ಯಪಾಲರು